

ಸಂಪುಟ 22 ಸಂಚಿಕೆ 26
ಜೂನ್ 21-27, 1999
ರೂ 3.00
ದುಡಿವ ಜನರ ಪ್ರಾಣಮಿತ್ರ


ಐಕ್ಯರಂಗ



ಜನವಂಚನೆಯ ಪಾಂಚಜನ್ಯ ಯಾತ್ರೆ



ನಗೆಪಾಟಲಾದ ಕೇಂದ್ರ ಸಚಿವರು



ಮಾತೃಭಾಷೆಯಲ್ಲೇ ಶಿಕ್ಷಣ

ಚಂಪಾರೊಡನೆ ಒಂದು ಸಂದರ್ಶನ

"ಸಮಾನ ದೂರ" ಎಂಬ ರಾಜಕೀಯ ವಂಚನೆ

ಜಗ್ಗಾಟದಲ್ಲಿ ಬಿಜೆಪಿ ಲೋಕಶಕ್ತಿ

ತನ್ನದೇ ಸ್ವಂತ ಬಲದಿಂದ ಸರ್ಕಾರ ರಚಿಸುವುದಾಗಿ ಬೀಗುತ್ತಿದ್ದ ಬಿಜೆಪಿ, ಕ್ರಮೇಣ ಹೊಸ ಬೆಳವಣಿಗೆಗಳು ಘಟಿಸುತ್ತಿದ್ದಂತೆ, ಲೋಕಶಕ್ತಿಯ ಬಲವನ್ನು ಅವಲಂಬಿಸಿತು. ತನ್ನ ಮೈತ್ರಿಕೂಟದಲ್ಲೇ ಬಿರುಕು ಕಾಣಿಸಿಕೊಂಡು ಕೇಂದ್ರದಲ್ಲಿ ವಾಜಪೇಯಿ ಸರ್ಕಾರ ಪತನಗೊಂಡ ನಂತರ, ಮೈತ್ರಿಕೂಟದ ಬಿರುಕುಗಳನ್ನು ಮುಚ್ಚಿತೋ ಎಂಬಂತೆ 'ಮೈತ್ರಿಯ ಬಲದ' ಬಗ್ಗೆ ಸ್ಪಷ್ಟನೆ ಮತ್ತು ಪ್ರತಿಪಾದನೆಗಳ ಮಳೆಯನ್ನೇ ಸುರಿಸಲಾಯಿತು. ಅದು ಒಂದು ಹಂತ.

ಬಿಜೆಪಿ ಮತ್ತು ಲೋಕಶಕ್ತಿಯ ಈ 'ಬಿಡಿಸಲಾಗದ ಮೈತ್ರಿ'ಯ ಕೂಟಗಳು ಇದೀಗ ಸಡಿಲಗೊಳ್ಳಲಾರಂಭಿಸಿವೆ. ಮತ್ತು ಬಿರುಸಿನ ಮಾತುಗಳು ಪರಸ್ಪರ ಡಿಕ್ಕಿ ಹೊಡೆಯುತ್ತಿವೆ. ಚುನಾವಣೆಯ ನಂತರದಲ್ಲಿ ಜನತೆಯ ಹಿತಕಾಯುವ ಪ್ರಶ್ನೆಗಲ್ಲ, ಬದಲಾಗಿ ಮುಖ್ಯಮಂತ್ರಿ ಯಾರು ಎಂಬುದು ವಿವಾದದ ವಿಷಯವಾಗಿದೆ. ಯಡಿಯೂರಪ್ಪನವರು ತಾವೇ, ಇನ್ನಾರು ಸಾಧ್ಯ ಎನ್ನುತ್ತಾರೆ. ಇದರಿಂದ ಕೆರಳಿ ಕೆಂಡಮಂಡಲವಾದ ಲೋಕಶಕ್ತಿಯ ಅಧ್ಯಕ್ಷ ಆಳ್ವ ಮುಂತಾದ ನಾಯಕರು 'ಹೆಗಡೆಯವರೇಕಿಲ್ಲ?' ಎನ್ನುತ್ತಿದ್ದಾರೆ. ಒಟ್ಟಾರೆ ಇಬ್ಬರ ಮೈತ್ರಿ ಹಿಂದಿನ ಮಾತಿನಂತಿಲ್ಲ. ಇರಿಯುವ ಭರ್ಜಿಗಳಿಂತಿವೆ. ಅದಾಗ್ಯೂ ಈಗಲೂ ಯಥಾರೀತಿ ಹೆಗಡೆಯವರದು ದಿಕ್ಕುಗೆಟ್ಟಿರುವ ದಿವ್ಯ ಮೌನ.

ಈ ಬಹಿರಂಗ ವಾದ-ವಿವಾದಗಳಿಗೆ ಕಾರಣಗಳೂ ಇವೆ. ಮುಂಬರುವ ಚುನಾವಣೆಗಳಲ್ಲಿ ಜನತಾದಳ ಮತ್ತು ಕಾಂಗ್ರೆಸ್‌ಗೆ ಬದಲಾಗಿ ತಾವು ಸರ್ಕಾರ ರಚಿಸಬೇಕೆಂಬ ಆಕಾಂಕ್ಷೆ ಬಿಜೆಪಿಗೆ.

ಕರ್ನಾಟಕದಲ್ಲಿ ಕಳೆದ ಲೋಕಸಭಾ ಚುನಾವಣೆಯಲ್ಲಿ ಹೆಗಡೆ ವರ್ಚಸ್ಸನ್ನು ಬಳಸಿಕೊಂಡಂತೆ, ಈ ಬಾರಿ ವಿಧಾನಸಭಾ ಚುನಾವಣೆಗಳಿಗೂ ಬಳಸಲು ಬಿಜೆಪಿ ಬಯಸಿತ್ತು. ಜನತಾದಳವನ್ನು ಒಡೆದು ಒಂದು ತಂಡವನ್ನು ತನ್ನತ್ತ ಸೆಳೆಯಬಲ್ಲ ಶಕ್ತಿ ರಾಮಕೃಷ್ಣ ಹೆಗಡೆಯವರಿಗೆ ಇದೆಯೆಂದು ಬಿಜೆಪಿ ನಾಯಕರು ತುಂಬಾ ಆಸೆ ಇರಿಸಿಕೊಂಡಿದ್ದರು. ಅಂದರೆ ಉತ್ತರ ಕರ್ನಾಟಕದಲ್ಲಿ ನೆಲೆಸಿಗುತ್ತದೆಂಬ ಲೆಕ್ಕಾಚಾರ ಅವರಿಗೆ.

ಜನತಾದಳದಲ್ಲಿ, ಒಗ್ಗಟ್ಟು ಕಾಯ್ದುಕೊಳ್ಳಬೇಕೆಂಬ ಪ್ರಯತ್ನ ಬಿಜೆಪಿ ಕಾಂಗ್ರೆಸ್‌ಗಳೆರಡನ್ನೂ ಎದುರಿಸುವ ರಾಜಕೀಯ ನಿರ್ಧಾರ ದಿಂದಾಗಿ ದಳವನ್ನು ಒಡೆಯಲು ಹೆಗಡೆಯವರು ವಿಫಲವಾದರು. ಮುಂದೆಯೂ ಅವರು ಸಫಲರಾಗುವ ಬಗ್ಗೆ ಬಿಜೆಪಿಗೆ ಸಂಶಯವಿದೆ. ಆದ್ದರಿಂದ ಬಿಜೆಪಿ ತಾನೇ ಈಗ ಜನತಾದಳದ ಶಾಸಕರಿಗೆ ಆಹ್ವಾನ ನೀಡತೊಡಗಿದೆ. ತಾವು ಸಹ ಪ್ರಬಲ ಲಿಂಗಾಯತ ಕೋಮಿಗೆ ಸೇರಿದ್ದು, ತಾವೇ ಮುಂದಿನ ಮುಖ್ಯಮಂತ್ರಿ ಎಂದು ಬಿಂಬಿಸಿ ನಾಯಕತ್ವಕ್ಕೆ ತಡಕಾಡುತ್ತಿರುವ ಉತ್ತರ ಕರ್ನಾಟಕದ ಮೇಲ್ಜಾತಿ ಊಳಿಗ ಮಾನ್ಯ ಪ್ರಭುಗಳನ್ನು ಓಲೈಸುವುದು ಯಡಿಯೂರಪ್ಪನವರ ತಂತ್ರ.

ಬಿಜೆಪಿ ಮತ್ತು ಲೋಕಶಕ್ತಿಯ ಈ 'ಬಿಡಿಸಲಾಗದ ಮೈತ್ರಿ'ಯ ಕೂಟಗಳು ಇದೀಗ ಸಡಿಲಗೊಳ್ಳಲಾರಂಭಿಸಿವೆ. ಮತ್ತು ಬಿರುಸಿನ ಮಾತುಗಳು ಪರಸ್ಪರ ಡಿಕ್ಕಿ ಹೊಡೆಯುತ್ತಿವೆ. ಚುನಾವಣೆಯ ನಂತರದಲ್ಲಿ ಜನತೆಯ ಹಿತಕಾಯುವ ಪ್ರಶ್ನೆಗಲ್ಲ, ಬದಲಾಗಿ ಮುಖ್ಯಮಂತ್ರಿ ಯಾರು ಎಂಬುದು ವಿವಾದದ ವಿಷಯವಾಗಿದೆ.

ಸಂಪಾದಕೀಯ

ಲೋಕಶಕ್ತಿ ಭಾಗೀಧಾರನಾಗಿ ಈ ಮೂಲಕ ಮುಖ್ಯ ಪಾಲು ಅಥವಾ ಸಮಪಾಲು ಕೇಳದಂತೆ ತಡೆಯುವ ಉ(ದುರು)ದ್ದೇಶವೂ, ಅಡಗಿದೆ. ಲೋಕಶಕ್ತಿ ದುರ್ಬಲವಾಗಿ ಬಿಜೆಪಿ ಪ್ರಬಲವಾಗಿ ಹೊರಹೊಮ್ಮುವುದೂ ಅವರಿಗೆ ಬೇಕಿದೆ. ಈ ನಡುವೆ ಸಂಕಲ್ಪಯಾತ್ರೆ ಮುಗಿಸಿದ ಬಿಜೆಪಿ ನಾಯಕರು, ಎರಡನೇ ಹಂತದ ಪ್ರವಾಸದಲ್ಲಿದ್ದಾರೆ. ಈಗ ಕಾಂಗ್ರೆಸ್‌ನ ಎರಡನೇ ಕಂತಿನ ಪಾಂಚಜನ್ಯ ಯಾತ್ರೆಯೂ ನಡೆದಿದೆ. ದಳದ ನಾಯಕರೂ ಪ್ರವಾಸದಲ್ಲಿದ್ದಾರೆ. ಆದರೆ ಲೋಕಶಕ್ತಿಯ ಒಂದು ಹಂತದ ಪ್ರವಾಸ-ಪ್ರಚಾರ ತೀರಾ ಸಪ್ಪೆಯಾಗಿದ್ದು ಜನರನ್ನು ಸೆಳೆಯುವಲ್ಲಿ ವಿಫಲವೆಂದು ಬಿಜೆಪಿ ಭಾವಿಸಿದೆ. ಇಂತಹ ಎಲ್ಲಾ ಸಂದರ್ಭ ಸಾಧಕ ಲೆಕ್ಕಾಚಾರಗಳಲ್ಲಿ ಉಭಯ ಪಕ್ಷಗಳು ಮುಳುಗಿವೆ.

ಈ ಎಲ್ಲಾ ಬೆಳವಣಿಗೆಗಳ ನಡುವೆ ಹೆಗಡೆಯವರು ವಹಿಸಿರುವ ಮೌನ ಗಮನಾರ್ಹ. ಇತ್ತ ಬಿಜೆಪಿ ಮೈತ್ರಿಕೂಟದ ಬಲಪಡಿಸುವ ಮಾತನಾಡುತ್ತಲೇ, ಅತ್ತ ಶರದ್ ಪವಾರ್ ಕಾಂಗ್ರೆಸ್ ಜೊತೆಗೆ ಸ್ನೇಹ ಹಸ್ತ ಚಾಚುತ್ತಿದ್ದಾರೆ. ಇನೊಮ್ಮೆ ಪ್ರಾದೇಶಿಕ ಪಕ್ಷಗಳು ಆಡಳಿತದ ಮಾತನಾಡುತ್ತಾರೆ. ಮುಂಬರುವ ಚುನಾವಣೆಗಳಲ್ಲಿ ಬಿಜೆಪಿ ಗೆಲ್ಲುವ ಬಗ್ಗೆಯೇ ಹೆಗಡೆಯವರಿಗೆ ಅನುಮಾನ ಇದ್ದಂತಿದೆ. ಹಾಗಾಗಿ ಎಲ್ಲಾ ಅವಕಾಶಗಳನ್ನು ಬಳಸಿಕೊಳ್ಳುವ ಹೆಗಡೆಯವರ ಅವಕಾಶವಾದಿ ಹಾದಿ, ಬಿಜೆಪಿಯ ಕುತಂತ್ರಗಳೂ ರಾಷ್ಟ್ರದ, ರಾಜ್ಯದ ರಾಜಕಾರಣಕ್ಕೆ ಅಪಾಯಕಾರಿ.



ಕೃಪೆ: ಜನವಾಹಿನಿ

ನಿಮ್ಮ ಪ್ರಶ್ನೆ ? ನಮ್ಮ ಉತ್ತರ

ಪ್ರಶ್ನೆ: ಅನೇಕ ಸಂಘಟನೆಗಳು ಮೆರವಣಿಗೆ, ಧರಣಿ ಸತ್ಯಾಗ್ರಹ, ಬಹಿರಂಗ ಸಭೆಗಳು ಮೊದಲಾವುಗಳನ್ನು ಮಾಡುವಾಗ ಇವುಗಳಿಂದ ಏನು ಪ್ರಯೋಜನವಿಲ್ಲ, ಸಮಾಜ ಇದಕ್ಕೆಲ್ಲಾ ಬದಲಾಣೆ ಆಗಲ್ಲ, ಸರಕಾರಗಳು ಕೂಡ ಇವಕ್ಕೆಲ್ಲಾ ಬಗ್ಗಲ್ಲ ಅಂತ ವಾದ ಮಾಡುತ್ತಾರೆ. ನಮಗೂ ಕೂಡ ಎಷ್ಟೋ ಬಾರಿ ಹಾಗೆ ಅನಿಸಿದೆ. ಇದರಲ್ಲಿ ವಾಸ್ತವಾಂಶವಿಲ್ಲವೆ?

ಯಮುನ ಗಾಂವಕರ್

ಉತ್ತರ: ಈ ರೀತಿಯ ಪ್ರತಿಕ್ರಿಯೆಗಳು ಹಲವು ದಿಕ್ಕಿನಿಂದ ಬರುತ್ತವೆ. ಸಾಮಾನ್ಯವಾಗಿ ಸಮಾಜದ ಮೇಲೆ, ಆಡಳಿತದ ಮೇಲೆ ಬಲವಾದ ಹಿಡಿತವನ್ನು ಹೊಂದಿರುವ ಪಟ್ಟಭದ್ರ ಹಿತಾಸಕ್ತಿಗಳು, ಗ್ರಾಮೀಣ ಪ್ರದೇಶದಲ್ಲಿ ಶ್ರೀಮಂತ ಭೂಮಾಲೀಕರು, ನಗರಗಳಲ್ಲಿ ಕೈಗಾರಿಕಾ ಮಾಲೀಕ ವರ್ಗ, ಇವುಗಳಿಗೆ ಪ್ರತಿಭಟನೆ ಸತ್ಯಾಗ್ರಹಗಳೆಂದರೆ ಅದು ತಮ್ಮ ವಿರುದ್ಧವೇ ಅಥವಾ ತಮ್ಮ ವಿರುದ್ಧ ತಿರುಗುತ್ತದೆ ಎಂಬುದು ಗೊತ್ತು. ಅದಕ್ಕಾಗಿ ಅವರು ಈ ಬಗ್ಗೆ ತೀವ್ರ ಅಸಹನೆಯನ್ನು ವ್ಯಕ್ತಪಡಿಸುತ್ತಾರೆ ಹಾಗೂ ತಮ್ಮ ಹಿಡಿತದಲ್ಲಿರುವ ಮಾಧ್ಯಮಗಳ ಮೂಲಕ ಈ ಅಸಹನೆಯ ಭಾವನೆ ಸಮಾಜದಲ್ಲಿ ಸಾರ್ವತ್ರಿಕವಾಗುವಂತೆ ಮಾಡುತ್ತಾರೆ. ಇದನ್ನು ಈ ವರ್ಗಗಳ ಸುತ್ತ ನೆರೆದಿರುವ ಮತ್ತು ಅವರಿಂದ ನೇರವಾಗಿ ಲಾಭ ಪಡೆಯುತ್ತಿರುವ ಅನುಚರವರ್ಗ - ಕೈಗಾರಿಕೆಗಳ ಆಡಳಿತದ (mangement assembley) ಭಾಗವಾಗಿರುವ ಹಾಗೂ ಹಳ್ಳಿಗಳ ಭೂಮಾಲೀಕರ ಚೇಲಗಳು ಇದೇ ಅಭಿಪ್ರಾಯವನ್ನು ಪ್ರತಿಧ್ವನಿಸುತ್ತಾರೆ. ಏಕೆಂದರೆ ಇವರ ಹಿತಗಳು ಆಳುವ ವರ್ಗ ವರ್ಗಗಳ ಹಿತಗಳೊಂದಿಗೆ ತಳುಕು ಹಾಕಿಕೊಂಡಿರುತ್ತವೆ ಅಥವಾ ತಳುಕು ಹಾಕಿಕೊಂಡಿವೆಯೆಂಬ ಭ್ರಮೆಯನ್ನು ಮೂಡಿಸಲಾಗುತ್ತದೆ.

ಹಾಗೆಯೇ ದುಡಿಯುವ ವರ್ಗದ ಜನರಲ್ಲಿಯೂ ಆದರಲ್ಲಿಯೂ ಮುಖ್ಯವಾಗಿ ಮಧ್ಯಮ ವರ್ಗವೆಂದು ಕರೆಯಲ್ಪಡುವ ಸಿಬ್ಬಂದಿ ವರ್ಗ ಅಥವಾ ನೌಕರ ವರ್ಗದಲ್ಲಿ ಈ ಅಭಿಪ್ರಾಯ ಸಾಮಾನ್ಯವಾಗಿದೆ. ಇವರು ತಮ್ಮ ಹಿತಗಳಿಗೆ ತೀವ್ರವಾದ ದಕ್ಕೆ ಬಂದಾಗ ಅನೇಕ ಬಾರಿ ಬೀದಿಗಿಳಿದು ಹೋರಾಟ ಮಾಡುತ್ತಾರೆ. ಆಗ ಇಂತ ಎಲ್ಲಾ ಮೆರವಣಿಗೆ, ಧರಣಿಗಳು ಅತಿ ಅವಶ್ಯಕವಾಗಿರುತ್ತವೆ. ಆದರೆ ಕಾರ್ಮಿಕ ವರ್ಗ ಮತ್ತು ತಾವಲ್ಲದೆ ಇನ್ಯಾರೆ ಆಗಲಿ ಹೋರಾಟಕ್ಕೆ ಇಳಿದಾಗ ಅಸಹನೆಯನ್ನು ತೋರುತ್ತಾರೆ. ಆದರೆ ಪರಿಸ್ಥಿತಿಯ ಬದಲಾವಣೆ, ಸಮಾಜದಲ್ಲಿ ಇವರಿಗಿದ್ದ ಸಂತೃಪ್ತಿ ಸ್ಥಿತಿಯಿಂದ ಅತೃಪ್ತ ಸ್ಥಿತಿಯತ್ತ ದೂಡುತ್ತವೆ. ಇವರು ಹೆಚ್ಚು ಹೆಚ್ಚು ಬೀದಿ ಹೋರಾಟಗಳಲ್ಲಿ ಪಾಲ್ಗೊಳ್ಳುವ, ಸಮಾಜದಲ್ಲಿ ಶೋಷಣೆಯ ವಿರುದ್ಧ ಅದಕ್ಕಿರುವ ಮಹತ್ವವನ್ನು ಅರಿತುಕೊಳ್ಳುವ ದಿನಗಳು ಹೀಗಾಗಲೇ ಹತ್ತಿರವಾಗಿವೆ.

ಈ ಪ್ರಶ್ನೆಯನ್ನು ವಿಶ್ಲೇಷಿಸುವಾಗ ಮತ್ತೊಂದು ಪ್ರಮುಖ ವಿಷಯವೆಂದರೆ ಇಂದು ಅಧಿಕಾರದಲ್ಲಿರುವ ವರ್ಗವು ಕೂಡ ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಸಭೆ, ಮೆರವಣಿಗೆ, ಸತ್ಯಾಗ್ರಹ ಮೂಲಕವೇ ಜನಾಭಿಪ್ರಾಯವನ್ನು ರೂಢಿಸಿ ಹೆಚ್ಚು ಹೆಚ್ಚು ಜನರನ್ನು ತಮ್ಮೆಡೆಗೆ ಸೆಳೆಯುತ್ತಾ ಭಾರತದ ಸ್ವಾತಂತ್ರ್ಯಕ್ಕೆ ತಮ್ಮ ಕಾಣಿಕೆಯನ್ನು ನೀಡಿತ್ತು. ಮತ್ತು ನಂತರ ಅಧಿಕಾರ ಗ್ರಹಣ ಮಾಡಿತು. ವಿಶ್ವದಲ್ಲಿ ರೂಪಗೊಂಡಿರುವ ಪ್ರಜಾಪ್ರಭುತ್ವವೆಂಬ ವ್ಯವಸ್ಥೆ ಇಂತಹ ಬೀದಿ ಹೋರಾಟಗಳ ಅಗ್ನಿಕುಂಡದಲ್ಲಿಯೇ ರೂಪಗೊಂಡಿದ್ದು. ಅದ್ದರಿಂದಲೇ ನಮ್ಮ ಸಂವಿಧಾನವೂ ಸೇರಿದಂತೆ ವಿಶ್ವದ ಬಹುತೇಕ ಸಂವಿಧಾನಗಳಲ್ಲಿ (freedem of assembly) ಸಭೆ ಸೇರುವ ಸ್ವಾತಂತ್ರ್ಯ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಬಹಳ ಪ್ರಮುಖವಾದಂತಹ ಹಕ್ಕನ್ನಾಗಿ ಸೇರಿಸಿರುವುದು.

ಆದರೆ ಅಂದು ತಮ್ಮ ಹಾಗೂ ಇಡೀ ಭಾರತೀಯ ಸಮಾಜದ ವಿಮೋಚನೆಗಾಗಿ ಹೋರಾಟದ ಮುಂಚೂಣಿಯಲ್ಲಿ ನಿಂತ ವರ್ಗಕ್ಕೆ ಇಂದು ಅಧಿಕಾರ ಅವರ ಕೈಯಲ್ಲಿರುವಾಗ ಈ ಹಕ್ಕುಗಳು ಅಪಾಯಕರ ಎನ್ನಿಸುತ್ತದೆ. ಆದರೆ ಸಂವಿಧಾನದಿಂದ ಅದನ್ನು ಕಿತ್ತೊಗೆಯಲು ಕಷ್ಟವಾದುದರಿಂದ ಒಂದು ಕಡೆ ಸಮಾಜದಲ್ಲಿ ಅಸಹನೆಯನ್ನು ಮತ್ತೊಂದು ಕಡೆ ಸಭೆ ಸೇರುವ ಸ್ವಾತಂತ್ರ್ಯ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯಗಳನ್ನು ಮೊಟಕು ಮಾಡುವ ನೂರಾರು ಕಾನೂನುಗಳನ್ನು, ತೊಡಕುಗಳನ್ನು ಸೃಷ್ಟಿಸುತ್ತದೆ. ಸಮಾಜದಲ್ಲಿ ಮೂಡಿಸಿರುವ ಈ ಅಸಹನೆ ಹಾಗೂ ಪೋಲೀಸರ ಬೆದರಿಕೆಗಳು ಹೋರಾಟಗಳಿಗೆ, ಚಳುವಳಿಗಳ ಉದ್ದೇಶವನ್ನು ಒಪ್ಪಿಕೊಳ್ಳುವ, ಅವುಗಳ ಜೊತೆಗೆ ಸೇರ ಬಯಸುವ ಸಾವಿರಾರು ಜನರನ್ನು ಚಳುವಳಿಗಳಿಂದ ದೂರ ಸರಿಸುತ್ತದೆ.

ಹೀಗಾಗಿ ಸಮಾಜದಲ್ಲಿನ ಅನ್ಯಾಯ, ಶೋಷಣೆಗಳ ವಿರುದ್ಧ ಜರುಗುವ ಯಾವುದೇ ಪ್ರತಿಭಟನೆಗಳು, ಮೆರವಣಿಗೆ, ಸತ್ಯಾಗ್ರಹಗಳು ಒಂದುಕಡೆ ಜನ ಸಾಮಾನ್ಯರಲ್ಲಿ ಹುದುಗಿರುವ ಅತೃಪ್ತಿಯ ಸೂಚಕಗಳು ಮತ್ತೊಂದು ಕಡೆ ಈ ಅಭಿಪ್ರಾಯದೊಡನೆ ಸಹಮತವಿರುವ ಜನರಿಗೆ ಹೋರಾಟಕ್ಕೆ ಸೇರಲು ಆಹ್ವಾನವಾಗಿರುತ್ತದೆ. ಅದೇ ಸಂದರ್ಭದಲ್ಲಿ ಒಂದು ಸಮಸ್ಯೆಯ ಬಗ್ಗೆ ಆಳುವ ವರ್ಗದ ನಿಯಂತ್ರಣದಲ್ಲಿರುವ ಮಾಧ್ಯಮಗಳು ಜನ ಸಾಮಾನ್ಯರಿಗೆ ವಿಷಯಗಳ ಬಗ್ಗೆ ತಿಳಿಯದಂತೆ ಮುಚ್ಚಿಟ್ಟಾಗ ಅಥವಾ ತಿರುಚಿದಾಗ ಅದರ ಬಗ್ಗೆ ಮಾಹಿತಿ ನೀಡುವ ಮಾಧ್ಯಮ ಪಾತ್ರವನ್ನು ಈ ಮೆರವಣಿಗೆ, ಸತ್ಯಾಗ್ರಹಗಳು ವಹಿಸುತ್ತವೆ. ಹೀಗಾಗಿ ಸಮಾಜದ ಬದಲಾವಣೆಯಲ್ಲಿ ಬಹುದೊಡ್ಡ ಪಾತ್ರವನ್ನು ವಹಿಸುತ್ತವೆ. ಆದ್ದರಿಂದ ತಮ್ಮ ಉದ್ದೇಶದ ನ್ಯಾಯ ಬದ್ಧತೆಯ ಬಗ್ಗೆ ನೆಚ್ಚಿಕೆ ಇರುವವರು ಸಮಾಜ ತೋರುವ ಈ ಅಸಹನೆಗೂ ಹಾಗೂ ಈ ಮೆರವಣಿಗೆಗೆ ಪ್ರತಿಭಟನೆಗಳಲ್ಲಿ ಭಾಗವಹಿಸುವ ಕಡಿಮೆ ಜನಸಂಖ್ಯೆಗೂ ಎದೆಗುಂದಬಾರದು. ಜನಸಮಾನ್ಯರನ್ನು ಒಳಗೊಳ್ಳುವ, ಅವರನ್ನು ಎಚ್ಚರಿಸುವ ವಿವಿಧ ವಿಧಾನ ಚಟುವಟಿಕೆಗಳ ಮೂಲಕ ಚಳುವಳಿಗಳಲ್ಲಿ ಹೆಚ್ಚು ಜನ ತೊಡಗಿಸಿಕೊಳ್ಳಲು ಅನುವಾಗುವಂತೆ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕು. ಆ ಮೂಲಕ ಸಮಾಜ ಬದಲಾವಣೆಯ ಮಹತ್ವದ ಕೆಲಸದಲ್ಲಿ ಪರಿಣಾಮಕಾರಿಯಾಗಿ ಪಾಲ್ಗೊಳ್ಳಬೇಕು.

ನಿಮ್ಮ ಪತ್ರ

ಈಗಿತ್ತ ಪತ್ರಿಕೆ ಚೆನ್ನಾಗಿ ಬರುತ್ತಿದೆ. ತಮಗೆ ಅಭಿನಂದನೆಗಳು. ಅರವಿಂದ ಮಾಲಗತ್ತಿಯವರ ಜೀವನ ಬಿಂಬಿಸುವ ಬರಹ ಮುಂದುವರೆಸಲು ಸಾಧ್ಯವೇ, ದುಡಿಯುವ ಪ್ರಾಣ ಮಿತ್ರ ಎದ್ದು ಕಾಣುವಂತಿರಲಿ

ವಿಡಂಬಾರಿ,
ಶಿರಸಿ

ಐಕ್ಯರಂಗ ಪುರವಣಿ

'ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆ ಹಾಗೂ ಪ್ರತ್ಯೇಕತಾವಾದ'

ಜೂನ್ 14 ರಂದು 'ಐಕ್ಯ ಕೇರಳ' ದ ಧೀಮಂತ ಹೋರಾಟಗಾರರಾದ ಇ.ಎಂ.ಎಸ್.ನಂಬೂದರಿಪಾಡ್‌ರವರ ಜನ್ಮದಿನದ ಸಂದರ್ಭದಲ್ಲಿ ಐಕ್ಯರಂಗದ ಮೊದಲ ಮಾಸಿಕ ಪುರವಣಿ ಬರಲಿದೆ. ಪ್ರತಿ ತಿಂಗಳೂ ಬರಲಿರುವ ಈ ಮಾಸಿಕ ಪುರವಣಿ ಜನರ ಮನಸ್ಸನ್ನು ಕಾಡುತ್ತಿರುವ ಪ್ರಶ್ನೆಗಳ ಮೇಲೆ ಆಳವಾದ ವಿಶ್ಲೇಷಣೆ, ವಿಶೇಷ ಬರಹ ಮಾಹಿತಿಗಳ ಗಣಿ. ಸಂಗ್ರಹಯೋಗ್ಯವಾಗಿ ಪುಸ್ತಿಕೆಯ ರೂಪದಲ್ಲಿ ನಿಮ್ಮಕೈ ಸೇರುತ್ತದೆ. ಪುರವಣಿ ಬರುವ ಐಕ್ಯರಂಗ ಸಂಚಿಕೆಯ ಬೆಲೆ 5 ರೂ.

ಕರ್ನಾಟಕವನ್ನು ಕಾಡುತ್ತಿರುವ ಪ್ರಾದೇಶಿಕ ವಾದ ಅದರ ಹಿನ್ನೆಲೆಯಲ್ಲಿರುವ ಪ್ರಾದೇಶಿಕ ಅಸಮಾನತೆ, ಪ್ರಾದೇಶಿಕ ಅಸಮಾನತೆಯ ಕಾರಣ, ಹಿನ್ನೆಲೆಗಳು, ಹೈದರಾಬಾದ್ ಕರ್ನಾಟಕ, ಬಾಂಬೆ ಕರ್ನಾಟಕ, ಕೊಡಗು ಇವುಗಳ ಪ್ರತ್ಯೇಕತಾ ಚಳುವಳಿಗಳ ಬಗ್ಗೆ ಅಪರೂಪದ ಸಂಶೋಧನೆ, ಆಸಕ್ತಿಕರ ಮಾಹಿತಿಗಾಗಿ ಕಾದು ನೋಡಿ.

ವಿಶೇಷ ಸಂಚಿಕೆಯ ಹೆಚ್ಚು ಪ್ರತಿ ಬೇಕಾದವರು ತಕ್ಷಣವೇ ಪ್ರತಿಗಳನ್ನು ಕಾದಿರಿಸಬೇಕು. ಪುರವಣಿಯ ಪ್ರತ್ಯೇಕ ಬೆಲೆ 2 ರೂ.

- ಸಂಪಾದಕರು.

ಜನವಂಚನೆಗೊಂದು ಪಾಂಚಜನ್ಯ

ಸೀಜನ್ ಪಾರಂಭವಾಗಿದೆ. ಟೂರಿಂಗ್ ಟಾಕೀಸ್‌ಗಳು ಒಂದರ ನಂತರ ಒಂದರಂತೆ ಹೊರಬೀಳತೊಡಗಿವೆ. ಬಿಜೆಪಿಯ ಸಂಕಲ್ಪಯಾತ್ರೆ ಮುಗಿಯಿತು. ಲೋಕಶಕ್ತಿಯ ಜನಜಾಗೃತಿ ಜಾಥಾದ ಸದ್ದಡಗಿದೆ. ಜನತಾದಳವು ಕಾರ್ಯಕರ್ತರ ಸಮಾವೇಶಗಳನ್ನು ನಡೆಸುತ್ತಿದೆ. ಕಾಂಗ್ರೆಸ್ ಮೂರು ಹಂತಗಳಲ್ಲಿ ಸುತ್ತಿಬರಲು "ಪಾಂಚಜನ್ಯ" ರಥವನ್ನು ಹೊರಡಿಸಿದೆ.

ಇಷ್ಟುದಿನ ಇವರು ಎಲ್ಲಿದ್ದರು? ಏನು ಮಾಡುತ್ತಿದ್ದರು? ಇಷ್ಟು ಅರ್ಜೆಂಟಾಗಿ ಇವರ‍್ಯಾಕೆ ಓಡಾಡಲಾರಂಭಿಸಿದ್ದಾರೆ? ಒಹೋ, ಓಟಿನ ಸುಗ್ಗಿ ಬಂದೇ ಬಿಟ್ಟಿದೆಯಾಲ್ಲಾ. ಒಂದಿಷ್ಟು ನಾಚಿಕೆಯಾದ್ರು ಇರ್ಬೇಡ್ವಾ ಇವರಿಗೆ. ಅದು ಬಂದು ಅದೃಶ್ಯರಾದವರು ಇಂದು ಈಗ ಪ್ರತ್ಯಕ್ಷರಾಗುತ್ತಿದ್ದಾರೆ! ಮತದಾರರನ್ನು ಮರಳುಮಾಡಲು ಹೊಸ ನಾಟಕ ಹೂಡಿದ್ದಾರೆ. ಸಾಮಾನ್ಯ ಕನ್ನಡಿಗನ ಅಂತರಂಗದ ಧ್ವನಿ ಅವರ ಕಾರು ತೇರುಗಳ ಸದ್ದು ಗದ್ದಲಗಳ ನಡುವೆ ಅಡಗಿ ಹೋಗುತ್ತಿದೆ. ಕರ್ನಾಟಕದ ಕಾಂಗ್ರೆಸಿಗರು ಮಾತ್ರ ಪಾಠ ಕಲಿಯುವಂತೆ ಕಾಣುವುದಿಲ್ಲ. ಇವರು ತಮ್ಮ ಕರ್ನಾಟಕ ಪ್ರವಾಸವನ್ನು "ಪಾಂಚಜನ್ಯ" ಎಂದು ಹೆಸರಿಸಿರುವುದನ್ನು ನೋಡಿದರೆ ಕರ್ನಾಟಕಕ್ಕೆ ಕೇಡುಗಾಲ ಬಂದಂತೆ ಕಾಣುತ್ತದೆ. ಹಿಂದುತ್ವದ ಸಂಕೇತಗಳನ್ನು ಬಳಸುವುದರಲ್ಲಿ ಇವರು ಕೋಮುವಾದಿ ಬಿಜೆಪಿಯೊಂದಿಗೆ ಸ್ಪರ್ಧೆಗಿಳಿದಿದ್ದಾರೆ. ಮಹಾಭಾರತ ಯುದ್ಧ ಪ್ರಾರಂಭವಾಗುವ ಮೊದಲು ಕೃಷ್ಣನು ಊದಿದ ಶಂಖದ ಹೆಸರು ಪಾಂಚಜನ್ಯವಂತೆ. 1975 ರ ತುರ್ತು ಪರಿಸ್ಥಿತಿಯಲ್ಲಿ ಆರ್.ಎಸ್.ಎಸ್. ಹೊರಡಿಸುತ್ತಿದ್ದ ಗುಪ್ತ ಪತ್ರಿಕೆಗಳಲ್ಲಿ "ಪಾಂಚಜನ್ಯ" ವೂ ಒಂದು. ಬಿಜೆಪಿಯಂತೆ ಕರ್ನಾಕದ ಕಾಂಗ್ರೆಸ್ ಕೂಡ ಒಂದು ರಥಯಾತ್ರೆಯನ್ನು ಹಮ್ಮಿಕೊಂಡಿರುವುದು, ಯಾತ್ರೆಗೆ ಕೋಮುವಾದಿ ಕೊಳಕು ವಾಸನೆಯ ಶಿರೋನಾಮೆಯನ್ನು ಆ[illegible] ಮಾಡಿಕೊಂಡಿರುವುದು ಒಂದು ದುರಂತವಲ್ಲದೆ ಮತ್ತೇನಲ್ಲ.

ಬೇರೆ ಪಕ್ಷಗಳಿಗೆ ಹೋಗಿದ್ದ ದಲಿತರು, ಹಿಂದುಳಿದವರು ಮತ್ತು ಅಲ್ಪಸಂಖ್ಯಾತರು ಮರಳಿ ಕಾಂಗ್ರೆಸಿನತ್ತ ಬರುತ್ತಿರುವ ಸೂಚನೆಗಳನ್ನು ಕಂಡಾಕ್ಷಣ ಕಾಂಗ್ರೆಸಿಗರ ಪಿತ್ತ ನೆತ್ತಿಗೇರಿದೆ. ಇನ್ನು ಬಿಜೆಪಿ ಮತ್ತು ಜನತಾದಳಕ್ಕೆ ವಲಸೆಹೋಗಿರುವ ಮೇಲ್ಜಾತಿ ಮತದಾರರನ್ನು ಒಲಿಸಿಕೊಳ್ಳುವುದದೊಂದೇ ಬಾಕಿ ಎಂದು ಕೊಂಡಿದ್ದಾರೆ. ಮೇಲ್ಜಾತಿ ಮತದಾರರನ್ನು ಆಕರ್ಷಿಸಲು ಇವರು ಹಿಂದುತ್ವವನ್ನು ಅಪ್ಪಿಕೊಂಡರೆ ಇವರು ಪಡೆದುಕೊಳ್ಳುವುದಕ್ಕಿಂತ ಕಳೆದುಕೊಳ್ಳುವುದೇ ಹೆಚ್ಚು. ಹಿಂದುತ್ವ ಬಿಜೆಪಿಯ ಆಸ್ತಿಯಲ್ಲ ಎಂದು ತಿಳಿಸಲೆಂದೇ ಈ ಪ್ರವಾಸ ಕೈಕೊಳ್ಳಲಾಗಿದೆ ಎಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಎಸ್. ಎಂ. ಕೃಷ್ಣ ಮಂಡ್ಯದ ಸಭೆಯಲ್ಲಿ ಹೇಳಿದ್ದಾರೆ. ಅಧಿಕಾರಕ್ಕಾಗಿ ಇವರು ತತ್ವಗಳನ್ನೆಲ್ಲಾ ಗಾಳಿಗೆ ತೂರಲು ಸಿದ್ಧರಿದ್ದಾರೆ ಎಂಬುದನ್ನು ಅವರು ಸಾಬೀತು ಪಡಿಸಿದ್ದಾರೆ. ರಾಜ್ಯದಲ್ಲಿ ಕೋಮುವಾದಿ ಶಕ್ತಿಗಳು ತಮ್ಮ ನೆಲೆಯನ್ನು ಭದ್ರಗೊಳಿಸಲು ಹವಣಿಸುತ್ತಿರುವಾಗ ಕಾಂಗ್ರೆಸ್ ತನ್ನ ಜಾತ್ಯಾತೀತ ಪರಂಪರೆಯನ್ನು ಎತ್ತಿಹಿಡಿಯಲು ವಿಫಲವಾಗುತ್ತಿರುವುದು ದುರದೃಷ್ಟಕರ.

ಜೂನ್ 3 ರಂದು ಆರಂಭಗೊಂಡ ಕಾಂಗ್ರೆಸ್ ಯಾತ್ರೆ ಮೊದಲ ಸುತ್ತಿನಲ್ಲಿ 9 ಜಿಲ್ಲೆಗಳಲ್ಲಿ ಸುತ್ತಾಡಿದೆ. ಜೂನ್ 15 ರಂದು ಮಂಡ್ಯದಿಂದ ಎರಡನೇ ಸುತ್ತಿನ ಪ್ರವಾಸ ಆರಂಭವಾಗಿದ್ದು ಮೂರನೇ ಸುತ್ತಿಗೆ ಕಾಯಬೇಕಾಗಿದೆ. ಭಾರೀ ಸಡಗರ ಸಂಭ್ರಮಗಳಿಂದ ಹೊರಟಿರುವ ಈ ಯಾತ್ರೆಗೆ ಮಾಧ್ಯಮಗಳು ಅತಿರಂಜಿತ ಪ್ರಚಾರವನ್ನು ನೀಡತೊಡಗಿವೆ. ಕಾಂಗ್ರೆಸ್ ನಾಯಕರು ಕಾರುಗಳಲ್ಲಿ, ಹೆಲಿಕ್ಯಾಪ್ಟರ್‌ಗಳಲ್ಲಿ ಸಂಚರಿಸುವ ಬದಲು ಬಸ್ಸಿನಲ್ಲಿ ಪ್ರಯಾಣ ಮಾಡುತ್ತಾ ಜನರ ಬಳಿಗೆ ಹೋಗುತ್ತಾರೆಂದೂ ಹೋದ ಹೋದಲ್ಲಿ ಅವರಿಗೆ ಅದ್ದೂರಿಯ ಸ್ವಾಗತ ದೊರೆಯುತ್ತಿದೆ ಎಂದೂ, ಜನ ತಮ್ಮ ನಾಯಕರನ್ನು ನೋಡಲು ಮತ್ತು ಅವರ ಮಾತುಗಳನ್ನು ಕೇಳಲು ಭಾರೀ ದೊಡ್ಡ ಸಂಖ್ಯೆಯಲ್ಲಿ ಸೇರುತ್ತಾರೆ ಎಂದೂ, ತಾವು ಕಾರ್ಯಕರ್ತರಲ್ಲಿ ಈಗಾಗಲೇ ಗೆದ್ದೆಬಿಟ್ಟಿದ್ದೇವೆ ಎಂಬ ಹುರುಪು ಉತ್ಸಾಹ ಹಬ್ಬಿಬಿಟ್ಟಿದೆ ಎಂದು ವರದಿಗಳು ಬರತೊಡಗಿವೆ. ವಿಶೇಷವಾಗಿ ಸಜ್ಜುಗೊಳಿಸಲಾದ ಹವಾನಿಯಂತ್ರಿತ ಬಸ್ಸಿನಲ್ಲಿ ಕಾಂಗ್ರೆಸಿನ ನಾಯಕರು ಕೈಗೊಂಡಿರುವ ಈ ಆಡಂಬರದ ಯಾತ್ರೆಯಿಂದ ಕರ್ನಾಟಕದ ಜನತೆಗೆ ಏನು ಪ್ರಯೋಜನವಾಗಲಿದೆ ಎಂಬ ಪ್ರಶ್ನೆಗೆ ಮಾತ್ರ ಎಲ್ಲಿಯೂ ಯಾರಿಂದಲೂ ಉತ್ತರ ದೊರೆಯುತ್ತಿಲ್ಲ. ಕನ್ನಡಿಗರನ್ನು ಕಾಡುತ್ತಿರುವ ಅವರ ಸಮಸ್ಯೆಗಳ ಬಗ್ಗೆಯಾಗಲಿ, ಕರ್ನಾಟಕದ ಅಭಿವೃದ್ಧಿಯನ್ನು ಸಾಧಿಸುವ ಕುರಿತಾಗಲಿ ಈ ನಾಯಕ ಮಣಿಗಳು ಬಾಯ್ಬಿಡಲಿಲ್ಲ. ಕನ್ನಡದ ರೈತ ದಿವಾಳಿಯಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ, ಕೂಲಿಕಾರ ಕೆಲಸ ಸಿಗದಂತಾಗಿ ಊರೂರು ಅಲೆಯುತ್ತಿದ್ದಾನೆ. ಕಾರ್ಖಾನೆಗಳು ಮುಚ್ಚುತ್ತಿದ್ದು ಕಾರ್ಮಿಕ ಬೀದಿಪಾಲಾಗುತ್ತಿದ್ದಾನೆ, ನಿರುದ್ಯೋಗಿ ಯುವಕ ಕಳ್ಳನಾಗುತ್ತಿದ್ದಾನೆ. ಇವೆಲ್ಲವುಗಳ ನಡುವೆ ಬಾಬಾಬುಡನ್ ಗಿರಿಯಲ್ಲಿ ಬೆಂಕಿ ಹಚ್ಚಲಾಗುತ್ತಿದೆ. ಸುರತ್ಕಲ್‌ನಲ್ಲಿ ಚಾಕು ಹಾಕಲಾಗುತ್ತಿದೆ. ಬಸ್ ಯಾತ್ರೆಯ ನಾಯಕರು ಅಪ್ಪಿತಪ್ಪಿಯೂ ಈ ಯಾವ ವಿಷಯಗಳನ್ನು ಪ್ರಸ್ತಾಪಮಾಡಲಿಲ್ಲ.

ಕಾಂಗ್ರೆಸ್‌ನಲ್ಲಿ ಭಿನ್ನಮತ ಇಲ್ಲ, ಎಲ್ಲ ಧುರೀಣರು ಒಗ್ಗಟ್ಟಾಗಿದ್ದಾರೆ ಎಂಬುದನ್ನು ಜನತೆಯ ಮುಂದಿಡಲು ಇಂಥ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದು ಹೇಳಲಾಗುತ್ತಿದೆ. ಇವರ ಒಗ್ಗಟ್ಟಿನ ಬಗ್ಗೆ ಸಾಮಾನ್ಯ ಕನ್ನಡಿಗ ಏಕೆ ತಲೆಕೆಡಿಸಿಕೊಳ್ಳುತ್ತಾನೆ. ಇವರ ಒಗ್ಗಟ್ಟು ಟಿಕೇಟ್ ಹಂಚಿಕೆಯಾಗುವವರೆಗೆ ಮಾತ್ರ ಎಂಬುದನ್ನು ಅದೆಷ್ಟೋ ಸಲ ನೋಡಿದ್ದಾಗಿದೆ. ಕುರ್ಚಿಗಾಗಿ ಬಂದವರು ಅದು ಸಿಗದಂತಾದಾಗ ಬೇರೆ ಗುಂಪು ಕಟ್ಟಿಕೊಳ್ಳುತ್ತಾರೆ ಅಥವಾ ಬೇರೆ ಪಕ್ಷ ಹುಡುಕುತ್ತಾರೆ. ಅಧಿಕಾರ ದಾಹ ಒಂದು ಬಿಟ್ಟರೆ ಕಾಂಗ್ರೆಸ್‌ನಲ್ಲಿ ಇನ್ಯಾವ ತತ್ವ ಉಳಿದುಕೊಂಡಿದೆ? **ಭಾರೀ ಪ್ರಚಾರದ ಈ ಯಾತ್ರೆಯಲ್ಲಿಯೂ ಕಾಂಗ್ರೆಸ್ ಕಿತ್ತಾಟ ಬೀದಿಗೆ ಬಾರದಿರಲಿಲ್ಲ.**

> **ಯಾತ್ರೆಗಳು**
>
> ಧ್ವಜಯಾತ್ರೆ ರಥಯಾತ್ರೆಯ ಸಂಕಲ್ಪಯಾತ್ರೆ
> ಚುನಾವಣೆ ಬಂದೊಡನೆ ಯಾತ್ರೆಗಳ ಜಾತ್ರೆ
> ಈ ರೀತಿ ಮುಗ್ಧರಿಗೆ ಮಾಡುತ್ತಾ ಮರುಳು
> ಕೊಯ್ಯುತ್ತಾ ಬಂದಿಹರು ನಡು ಹಗಲು ಕೊರಳು
>
> **- ವಿಡಂಬಾರಿ**

ಹುಬ್ಬಳಿಯಲ್ಲಿ ಹಾಗೂ ಬೆಳಗಾವಿಯಲ್ಲಿ ಯುವ ಕಾಂಗ್ರೆಸ್ ಹುಡುಗರ ಕೂಗಾಟ ಪ್ರತಿ ಕೂಗಾಟವನ್ನು ನಿಯಂತ್ರಿಸಲು ಹೇಗೋ ಸಾಧ್ಯವಾಯಿತು. ಆದರೆ ಮಡಿಕೇರಿಯಲ್ಲಿ ಅದು ಬೀದಿ ಕಾಳಗದ ಮಟ್ಟಕ್ಕೆ ಹೋಗಿತ್ತು. ಕಾಂಗ್ರೆಸ್ ಸಂಸ್ಕೃತಿಗೆ ತಕ್ಕಂತೆ ಪೋಲೀಸರ ಲಾಠಿ ಪ್ರಹಾರ ಅನಿವಾರ್ಯವಾಯಿತು. ಉಡುಪಿಯಲ್ಲಿ ಭೋಜನ ಕೂಟದ ರಾಜಕೀಯ ನಡೆದು ಕೆಲವರು ಅರ್ಧಕ್ಕೆ ಊಟ ಬಿಟ್ಟು ಹೋದರೆಂದು ವರದಿಯಾಗಿದೆ. ಕೋಲಾರದಲ್ಲಿ ನಾಯಕರ ಪ್ರವಾಸವನ್ನೇ ರದ್ದುಗೊಳಿಸಬೇಕೆಂಬ ಒತ್ತಾಯ ವ್ಯಕ್ತವಾದುದು ಅನಿರೀಕ್ಷಿತವೇನಲ್ಲ. ಪರಸ್ಪರ ರಾಜಕೀಯ ವೈರಿಗಳಿಂದ ಇಬ್ಬರು ಮುಖಂಡರನ್ನು ಒಂದುಗೂಡಿಸಲಾಗಿದೆ ಎಂದು ಹೇಳಲಾಗುತ್ತಿದ್ದರೂ ಅಲ್ಲಿ ಎಲ್ಲವೂ ಸರಿಹೋದಂತೆ ಕಾಣುವುದಿಲ್ಲ. ರಾಜಶೇಖರಮೂರ್ತಿ ಪಕ್ಷ ತ್ಯಜಿಸುವರೆಂಬ ಊಹಾಪೋಹಗಳಿಗೆ ತೆರೆ ಎಳೆಯಲಾಗಿದ್ದರೂ ಅವರ ಸುತ್ತ ಎದ್ದಿರುವ ಅಸಮಾಧಾನ ಮಾತ್ರ ಇನ್ನೂ ಹೊಗೆಯಾಡುತ್ತಿದೆ. ಇಂತಹ ವ್ಯಕ್ತಿನಿಷ್ಠ ಪಕ್ಷಗಳಿಂದ ಇನ್ನೇನು ನಿರೀಕ್ಷಿಸಲು ಸಾಧ್ಯ ?

ಕಾಂಗ್ರೆಸ್ ಪಕ್ಷವನ್ನು ದೇಶ ಮಟ್ಟದಲ್ಲಾಗಲಿ ರಾಜ್ಯಮಟ್ಟದಲ್ಲಾಗಲಿ ಜನ ಏಕೆ ತಿರಸ್ಕರಿಸಿದ್ದಾರೆ ಎಂಬುದನ್ನು ಅರ್ಥಮಾಡಿಕೊಳ್ಳಲು ಕಾಂಗ್ರೆಸಿಗರು ಪ್ರಯತ್ನ ಪಡದಿರುವದು ಅವರ ದುರಂತವಾಗಿದೆ. ಕಾಂಗ್ರೆಸ್ಸಿನ ಕೊಡುಗೆಯಾಗಿ ಬಂದ ಉದಾರೀಕರಣವು ಕನ್ನಡದ ನೆಲವನ್ನು ಮರುಭೂಮಿಯನ್ನಾಗಿಸುತ್ತಿದ್ದರೂ ಕಾಂಗ್ರೆಸಿಗರು ತಪ್ಪು ಒಪ್ಪಿಕೊಳ್ಳಲು ಸಿದ್ಧರಿಲ್ಲ. ದೇಶವನ್ನೇ ಭಸ್ಮಮಾಡಲು ಹೊರಟಿರುವ ಕೋಮುವಾದಿ ಶಕ್ತಿಗಳಿಗೆ ಕುಮ್ಮಕ್ಕು ಕೊಟ್ಟ ಬಗ್ಗೆ ಇವರಿಗೆ ಪಶ್ಚಾತಾಪವಿಲ್ಲ. ಈಗ ಮತ್ತೆ ಗರತಿಯ ಸೋಗು ಹಾಕಿಕೊಂಡು ಬರುತ್ತಿದ್ದಾರೆ. ಎಚ್ಚರ !

- ನಿತ್ಯಾನಂದಸ್ವಾಮಿ.



ಬಿಜೆಪಿ ಮತ್ತು ಕಾಂಗ್ರೆಸ್‌ನಿಂದ 'ಸಮಾನ ದೂರ' ವೆಂಬ ವಂಚಕ ಘೋಷಣೆ

ಬಿಜೆಪಿ ಮತ್ತು ಕಾಂಗ್ರೆಸ್‌ನಿಂದ ಸಮಾನ ದೂರ - ಇದು ಮುಂಬರುವ ಚುನಾವಣೆಗಳ ಸಂದರ್ಭಗಳಲ್ಲಿ ಕೇಳಬರುತ್ತಿರುವ ಘೋಷಣೆ. ಪ್ರಸಕ್ತ ಸಂದರ್ಭಗಳಲ್ಲಿ ಇದು ಬಿಜೆಪಿಯ ಪರವಾಗಿ ಕೆಲಸ ಮಾಡುವ ಸಂಭವವೇ ಜಾಸ್ತಿ. ಕಾಂಗ್ರೆಸ್ ಮತ್ತು ಬಿಜೆಪಿಯ ಆಳ್ವಿಕೆಯಿಂದ ದೇಶವನ್ನು ದೂರಕ್ಕೊಯ್ಯಬೇಕಾಗಿದೆ ಎಂಬ ಆಶಯದಿಂದ ಮೂರನೇ ಪರ್ಯಾಯವೊಂದನ್ನು ಬೆಸೆಯುವ ಪ್ರಯತ್ನ ನಡೆಯುತ್ತಾ ಬಂದಿದೆ. ಆದರೆ ಈ ಹೋರಾಟ ಇನ್ನೂ ಅಂತಿಮ ಘಟ್ಟ ತಲುಪಿಲ್ಲ. ಇಂತಹ ಸನ್ನಿವೇಶದಲ್ಲಿ ಸಿಪಿಐ(ಎಂ) 'ಸಮಾನದೂರ' ದಂತಹ ವಂಚಕ ಘೋಷಣೆಗಳಿಗೆ ಬಲಿ ಬೀಳದೆ ನಿರ್ದಿಷ್ಟ ಪರಿಸ್ಥಿತಿಗಳನ್ನು ಪರಿಶೀಲಿಸಿ ತನ್ನ ಚುನಾವಣಾ ತಂತ್ರವನ್ನು ರೂಪಿಸುತ್ತದೆ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಹರ್ಕಿಷನ್ ಸಿಂಗ್ ಸುರ್ಜಿತ್ ಹೇಳಿದ್ದಾರೆ. ಎರಡು ಪಕ್ಷ ಪದ್ಧತಿಯ ಮಾತೂ ಕೇಳಬರುತ್ತಿದೆ. ಇದನ್ನು ಸಿಪಿಐ(ಎಂ) ಎಂದೂ ಸಮ್ಮತಿಸಲು ಸಾಧ್ಯವಿಲ್ಲ, ಏಕೆಂದರೆ ದೇಶದಲ್ಲಿ ಬಂಡವಾಳಶಾಹಿ-ಭೂಮಾಲಕ ವರ್ಗದ ಆಳ್ವಿಕೆಯನ್ನು ಶಾಶ್ವತಗೊಳಿಸುವ ಹುನ್ನಾರ ಇದರ ಹಿಂದಿದೆ ಎಂದು ಅವರು ಅಭಿಪ್ರಾಯಪಟ್ಟರು.

ಅವರು ಸಿಪಿಐ(ಎಂ) ಅತ್ಯುನ್ನತ ಅಂಗವಾದ ಪೊಲಿಟ್‌ಬ್ಯೂರೋದ ಎರಡು ದಿನಗಳ ಸಭೆಯ ನಂತರ ದೆಹಲಿಯಲ್ಲಿ ಪಕ್ಷದ ಕೇಂದ್ರ ಸಮಿತಿ ಕಛೇರಿ 'ಏಕೆಜಿ ಭವನ' ದಲ್ಲಿ ಪತ್ರಕರ್ತರೊಡನೆ ಮಾತನಾಡುತ್ತಿದ್ದರು. ಈ ಸಭೆಯು ಎರಡು ಮುಖ್ಯ ವಿಷಯಗಳನ್ನು ಚರ್ಚಿಸಿತು- ಕಾರ್ಗಿಲ್ ಮತ್ತಿತರ ಗಡಿ ಪ್ರದೇಶಗಳಲ್ಲಿನ ಘಟನೆಗಳು ಹಾಗೂ ಮುಂಬರುವ ಲೋಕಸಭಾ ಚುನಾವಣೆಗಳಲ್ಲಿ ಸಿಪಿಐ(ಎಂ)ನ ಕಾರ್ಯತಂತ್ರ.

ಮುಂಬರುವ ಚುನಾವಣೆಗಳಲ್ಲಿ ಕೋಮುವಾದಿ ಬಿಜೆಪಿ ಮತ್ತು ಅದರ ಮಿತ್ರರನ್ನು ಸೋಲಿಸುವುದು ಸಿಪಿಐ(ಎಂ) ನ ಚುನಾವಣಾ ಕಾರ್ಯತಂತ್ರದ ಮೂಲ ಚೌಕಟ್ಟು ಎಂದು ಈಗಾಗಲೇ ಪಕ್ಷದ ಕೇಂದ್ರ ಸಮಿತಿ ನಿರ್ಧರಿಸಿದೆ. ರಾಜ್ಯದಿಂದ ರಾಜ್ಯಕ್ಕೆ ಪರಿಸ್ಥಿತಿ ಭಿನ್ನವಾಗಿದ್ದರೂ ಸಿಪಿಐ(ಎಂ) ತಳೆಯುವ ನಿರ್ದಿಷ್ಟ ಕಾರ್ಯತಂತ್ರ ಈ ಮೂಲ ಚೌಕಟ್ಟಿನ ಒಳಗೇ ಇರುತ್ತದೆ ಎಂದು ಸುರ್ಜಿತ್ ಸ್ಪಷ್ಟಪಡಿಸಿದರು. ಎಡ ಪಕ್ಷಗಳು ಒಂದು ಮೂರನೇ ಪರ್ಯಾಯವನ್ನು ಬೆಸೆಯಲು ಬಹಳ ಶ್ರಮಿಸುತ್ತಿದ್ದರೂ, ಇಡೀ ದೇಶವನ್ನು ತಗೊಂಡಾಗ ಅವಿನ್ನೂ ಬಹಳ ದುರ್ಬಲವಾಗಿವೆ. ಬಿಜೆಪಿಯನ್ನು ಏಕಾಂಗಿಯಾಗಿ ಸೋಲಿಸುವ ಸ್ಥಿತಿಯಲ್ಲಿಲ್ಲ ಎಂದು ಯಾವುದೇ ಹಿಂಜರಿಕೆಯಿಲ್ಲದೆ ಹೇಳಿದ ಸುರ್ಜಿತ್‌ರವರು, ಆದ್ದರಿಂದಲೇ ಎಡಪಕ್ಷಗಳು ದುರ್ಬಲವಾಗಿರುವಲ್ಲಿ ಬಿಜೆಪಿ ಮತ್ತು ಅವರ ಮಿತ್ರ ಪಕ್ಷಗಳಿಗೆ ಶೋಚನೀಯ ಸೋಲುಣಿಸಲು ಸೂಕ್ತ ಕಾರ್ಯತಂತ್ರಗಳನ್ನು ರೂಪಿಸಲಾಗುತ್ತದೆ ಎಂದು ಹೇಳಿದರು.

ಅದೇ ವೇಳೆಗೆ ಈ ಚುನಾವಣೆಗಳಲ್ಲಿ ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳ ಬಲವರ್ಧನೆಗೆ ಪ್ರಯತ್ನಿಸಲಾಗುವುದು-ಎಡ ಆಳ್ವಿಕೆಯ ರಾಜ್ಯಗಳಲ್ಲಿ ಮಾತ್ರವಲ್ಲ, ಬೇರೆ ರಾಜ್ಯಗಳಲ್ಲೂ. ಇದೊಂದು ಪ್ರಮುಖ ಕೆಲಸ - ಏಕೆಂದರೆ ಎಡ ಶಕ್ತಿವರ್ಧನೆಯಾಗದೆ ಮಧ್ಯಪಂಥೀಯ ಪಕ್ಷಗಳ ಚಂಚಲತೆಗಳನ್ನು ತಡೆಯಲಾಗಲೀ, ಒಂದು ಪರ್ಯಾಯದತ್ತ, ಜನಪರ ಧೋರಣೆಗಳತ್ತ ಸಾಗಲಾಗಲೀ ಸಾಧ್ಯವಾಗುವುದಿಲ್ಲ. ಸಿಪಿಐ(ಎಂ) ಈ ಚುನಾವಣೆಗಳಲ್ಲಿ ಬಿಜೆಪಿ ನೇತೃತ್ವದ ಸರಕಾರದ 13 ತಿಂಗಳ ವಿಫಲ ಆಳ್ವಿಕೆಯ ಮೇಲೆ, ಮುಖ್ಯವಾಗಿ ರಾಷ್ಟ್ರೀಯ ಐಕ್ಯತೆಯ ಎರಡು ಸ್ಥಂಭಗಳಾದ ಧರ್ಮನಿರಪೇಕ್ಷತೆ ಮತ್ತು ಒಕ್ಕೂಟ ತತ್ವದ ಮೇಲೆ ಅದರ ಧಾಳಿಗಳನ್ನು ಜನಗಳಿಗೆ ಎತ್ತಿ ತೋರುತ್ತದೆ ಎಂದ ಸುರ್ಜಿತ್ ಬೃಹತ್ ಟೆಲಿಕಾಂ ಕಂಪನಿಗಳಿಗೆ ಅನರ್ಹ ಲಾಭ ಕೊಡಿಸಲು ಜಗಮೋಹನ್‌ರವರ ಖಾತೆ ಬದಲಾವಣೆ ಮಾಡಿರುವುದು ಈ ಉಸ್ತುವಾರಿ ಸರಕಾರದ ದುರ್ವರ್ತನೆಗಳ ದೊಡ್ಡ ಪಟ್ಟಿಗೆ ಸೇರಿದ ಇತ್ತೀಚಿನ ಸಂಗತಿ ಎಂದು ಖಂಡಿಸಿದರು.

ಕಾರ್ಗಿಲ್: ಎಚ್ಚರವಿರಲಿ

ಕಾರ್ಗಿಲ್, ದ್ರಾಸ್ ಮತ್ತಿತರ ಪ್ರದೇಶಗಳಲ್ಲಿನ ಘಟನೆಗಳೂ ಬಿಜೆಪಿ ನೇತೃತ್ವದ ಸಂಪೂರ್ಣ ದಿವಾಳಿಕೋರತನವನ್ನು ಬಯಲು ಮಾಡಿವೆ ಎಂದು ಸುರ್ಜಿತ್ ಹೇಳಿದರು. ತನ್ನ ಅಸಮರ್ಥತೆಯಿಂದಾಗಿ ಅದು ಹತೋಟಿ ರೇಖೆಯಲ್ಲಿ ಪರಿಸ್ಥಿತಿ ಹದಗೆಡಲು ಬಿಟ್ಟಿತು. ಜತೆಗೆ ರಕ್ಷಣಾಮಂತ್ರಿಗಳ ಹೇಳಿಕೆಗಳು. ಅದೇನೇ ಇರಲಿ, ಈಗ ನಮ್ಮ ಸೈನಿಕರು ಅತ್ಯಂತ ಕಠಿಣ ಪರಿಸ್ಥಿತಿಗಳಲ್ಲಿ ಒಂದು ಕಠಿಣ ಹೋರಾಟ ನಡೆಸಿದ್ದಾರೆ. ಅವರ ಮನೋಸ್ಥೈರ್ಯವನ್ನು ಕೆಡಿಸುವಂತ ಹೇಳಿಕೆಗಳು ಇನ್ನೂ ಮುಂದಾದರೂ ಬರಬಾರದು. ಗಡಿಯಲ್ಲಿ ಸೆಣಸುತ್ತಿರುವ ಸೈನಿಕರಿಗೆ ಸಕಲ ಬೆಂಬಲ ಒದಗಿಸಿ ಅತಿಕ್ರಮಣಕೋರರನ್ನು ಹತೋಟಿ ರೇಖೆಯಾಚೆ ತಳ್ಳಬೇಕು. ಆದರೆ ಹಾಗೆ ಮಾಡುವಾಗ ಭಾರತ ಸರಕಾರ ಅಂತರ್ರಾಷ್ಟ್ರೀಯವಾಗಿ ದೇಶ ಏಕಾಂಗಿಯಾಗುವಂತಹ ಯಾವುದೇ ದುಸ್ಸಾಹಸವನ್ನು ಮಾಡಬಾರದು ಎಂದು ಸುರ್ಜಿತ್ ಎಚ್ಚರಿಸಿದರು.

ಈ ಸಂದರ್ಭದಲ್ಲಿ ಸಾಮ್ರಾಜ್ಯಶಾಹಿ ಶಕ್ತಿಗಳೂ ನೇಪಥ್ಯದಲ್ಲಿ ಕಾದು ಕೂತಿವೆ. ಕಾಶ್ಮೀರ ಪ್ರಶ್ನೆಯಲ್ಲಿ ಮೂಗುತೂರಿಸಿ ಈ ಪ್ರದೇಶದಲ್ಲಿ ಕಾಲೂರಲು ಒಂದು ಅವಕಾಶಕ್ಕಾಗಿ ಕಾದು ನಿಂತಿವೆ. ಅಮೆರಿಕದ ಅಧ್ಯಕ್ಷರು ಎಲ್ಲೋ ನೀಡಿದ ಒಂದು ಭಾರತ ಪರವಾದ ಹೇಳಿಕೆಯನ್ನು ಸರಕಾರ ಬಹಳವಾಗಿ ನಂಬಿಕೊಂಡಂತಿದೆ. ಜಿ-7 ಗುಂಪಿನ ಪ್ರಬಲ ದೇಶಗಳ ಮುಖಂಡರು ಭಾರತ ಮತ್ತು ಪಾಕಿಸ್ತಾನಗಳ ನಡುವಿನ ಘಟನೆಗಳಿಂದ ತಮಗೇನು ಎಂಬ ನಿರ್ಲಕ್ಷ್ಯದ ನಿಲುವು ಆಗಲೇ ತೋರಿದ್ದಾರೆ. ಕ್ಲಿಂಟನ್ ಇಂದು ಭಾರತವನ್ನು ಬೆಂಬಲಿಸುವಂತೆ ಕಂಡರೂ, ನಾಳೆ ದನಿ ಬದಲಿಸಬಹುದು ಎಂದೂ ಸುರ್ಜಿತ್ ಎಚ್ಚರಿಸಿದರು.



'ಹಿಂದು'ನಲ್ಲಿ ಕೇಶವನ್ ವ್ಯಂಗ್ಯ

ಆಶ್ರಯ ಯೋಜನೆಯಲ್ಲಿ ಭ್ರಷ್ಟಾಚಾರ



ಬೆಂ.ಮಹಾನಗರ ಪಾಲಿಕೆಯ ಲಕ್ಷಾಂತರ ರೂಪಾಯಿ ಗುಳುಂ

ಸರ್ಕಾರದ ಆಶ್ರಯ ಯೋಜನೆ ಮರಳಿನಲ್ಲಿ ಗೂಡು ಕಟ್ಟುವ ಆಟವಾಗಿದೆ. ಚುನಾಯಿತ ಪ್ರತಿನಿಧಿಗಳು, ಅಧಿಕಾರಿಗಳಿಗೆ ನುಂಗಿ ನೀರು ಕುಡಿಯುವ ಯೋಜನೆಯಾಗಿದೆ. ಇದಕ್ಕೆ ನಿದರ್ಶನವಾಗಿದೆ ಅರುಂದತಿ ನಗರ ನಿವಾಸಿಗಳ ಕಥೆ. ಬೆಂಗಳೂರು ಕೇಂದ್ರ ಬಿಂದುವಾದ ಬಸ್‌ನಿಲ್ದಾಣ, ರೈಲ್ವೆ ನಿಲ್ದಾಣ, ಮೆಜೆಸ್ಟಿಕ್, ರೇಸ್‌ಕೋರ್ಸ್ ಮುಂತಾದ ಪ್ರಮುಖ ಆಯಕಟ್ಟಿನ ಸ್ಥಳವನ್ನು ಹೊಂದಿರುವುದು ಗಾಂಧಿನಗರ ವಿಧಾನಸಭಾ ಕ್ಷೇತ್ರ. ಬೆಂಗಳೂರು ರೈಲ್ವೆ ನಿಲ್ದಾಣದ ಸೆರಗಿನಲ್ಲೇ ಇರುವುದು ಶ್ರೀರಾಮಪುರ. ಇಲ್ಲಿ ಸಾಮಾಜಿಕವಾಗಿ ಹಿಂದುಳಿದ, ಕಡು ಬಡತನದ ಜೀವನ ನಡೆಸುವ ಲಕ್ಷಾಂತರ ಅಸಂಘಟಿತ ಕಾರ್ಮಿಕರು ವಾಸಿಸುವ ಪ್ರದೇಶವಾಗಿದೆ. ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿರುವ ನಗರಸಭಾ ವಾರ್ಡ್ ನಂ. 20 ರಾಮಚಂದ್ರಪುರ ವಿಭಾಗಕ್ಕೆ ಸೇರಿರುವುದು ಅರುಂದತಿ ನಗರ.

ಈ ಪ್ರದೇಶದಲ್ಲಿ ವಾಸಮಾಡುವ ಈ ಜನ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಕ್ಕೆ ಸೇರಿದ್ದು ಬೆಂಗಳೂರು ನಗರವನ್ನು ಸ್ವಚ್ಛ ಮಾಡುವ, ರಸ್ತೆ ಗುಡಿಸುವ, ಕಸತೆಗೆಯುವ, ಕೆಲಸ ಮಾಡುವವರಾಗಿದ್ದಾರೆ. ಸುಮಾರು 30-40 ವರ್ಷಗಳಿಂದ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರುವ ಜಾಗದಲ್ಲಿ ಸಣ್ಣ ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿರುತ್ತಾರೆ. ಯಾವುದೇ ನಾಗರೀಕ ಸೌಲಭ್ಯಗಳಿಲ್ಲದೆ ಕೊರಗುತ್ತಿದ್ದಾರೆ. 19-11-91 ರಲ್ಲಿ ಮಹಾನಗರ ಪಾಲಿಕೆ 110 ಮಂದಿ ನಿವಾಸಿಗಳಿಗೆ ಹಕ್ಕು ಪತ್ರಗಳನ್ನು ನೀಡಿರುತ್ತದೆ. ಎಂಟು ವರ್ಷಗಳ ಹಿಂದೆ ಮಹಾನಗರ ಪಾಲಿಕೆಯವರು ಈ ಜಾಗದಲ್ಲಿ ಸುವ್ಯವಸ್ಥಿತವಾದ ಮನೆ ಕಟ್ಟಿಸಿಕೊಡುವುದಾಗಿ ಹೇಳಿ ಈ ಜಾಗದ ಎದುರುಗಡೆ ಇರುವ ಪಾರ್ಕ್‌ನಲ್ಲಿ ತಾತ್ಕಾಲಿಕವಾಗಿ ಮನೆಕಟ್ಟಿಕೊಳ್ಳಲು ತಿಳಿಸಿದರು. ಅಂದಿನಿಂದ ಇಲ್ಲಿಯವರೆಗೆ ಎಂಟು ವರ್ಷವಾಗಿದೆ ಮನೆಗಳು ಮಾತ್ರ ದಕ್ಕಿಲ್ಲ. ಈ ಆಟದ ಮೈದಾನದಲ್ಲಿ ವಾಸಿಸುತ್ತಿರುವ ಇವರಿಗೆ ಮಳೆ ಬಂದರೆ ಇವರ ಕಥೆ ಮುಗಿಯಿತು. ಮಟ ಮಟನೆ ಆಕಾಶ ನೋಡಬೇಕು. ಒಳಚರಂಡಿ ವ್ಯವಸ್ಥೆಯಿಲ್ಲ, ರಸ್ತೆಗಳಿಲ್ಲ, ಕುಡಿಯುವ ನೀರಿಲ್ಲ. ದಿನನಿತ್ಯದ ಕರ್ತವ್ಯ ಮುಗಿಸಲು ಸರಿಯಾದ ವ್ಯವಸ್ಥೆಯಿಲ್ಲ. ಇಂತಹ ಸಂಕಟದಲ್ಲಿದ್ದರೂ ಇವರನ್ನು ಕೇಳುವವರ್‍ಯಾರು? ಈಗ ಈ ಪಾರ್ಕ್‌ನ್ನು ಖಾಲಿ ಮಾಡಿಸುವ ಹುನ್ನಾರ ನಡೆಯುತ್ತಿದೆ. ಈ ಜನ ಗೃಹ ಮಂಡಲಿ ಕಟ್ಟಿರುವ ಮನೆಗಳಿಗೆ ಹೋಗಲು ಏಕೆ ಹೆದರುತ್ತಾರೆ ಗೊತ್ತಾ.....

ದಿಡೀರನೆ ಬಂತು ಆಶ್ರಯ ಯೋಜನೆ

ಎಂಟು ವರ್ಷಗಳ ಹಿಂದೆ 26-2-92 ರಲ್ಲಿ ಈ ಕ್ಷೇತ್ರದ ಕಾಂಗ್ರೆ ಶಾಸಕರಾದ ದಿವಂಗತ ದಯಾನಂದ ರಾವ್ ಮತ್ತು ನಗರ ಪಾಲಿಕೆ ಆಯುಕ್ತರಾದ ಕೆ.ಶಿವರಾಮು, ಕಾಗೋಡು ತಿಮ್ಮಪ್ಪ (ಗೃಹಮಂಡಳಿ ಅಧ್ಯಕ್ಷರು) ಮತ್ತು ರೆವಿನ್ಯೂ ಅಧಿಕಾರಿಗಳು ಈ ಪ್ರದೇಶಕ್ಕೆ ಭೇಟಿ ನೀಡಿ ಕರ್ನಾಟಕ ಗೃಹ ನಿರ್ಮಾಣ ಮಂಡಲಿ ವತಿಯಿಂದ 3 ಚದರ ಮನೆ ಕಟ್ಟಿಸಿ ಕೊಡುತ್ತೇವೆಂದು ಹೇಳಿ ಎಲ್ಲಾ ನಿವಾಸಿಗಳಿಂದ ಒಪ್ಪಿಗೆ ಕರಾರು ಪತ್ರ ಮಾಡಿಸಿಕೊಂಡು ನಿವೇಶನದಾರನ ಭಾವ ಚಿತ್ರವಿರುವ ಗುರುತಿನ ಚೀಟಿ ಮತ್ತು 500 ರೂ.ಗಳ ಸಹಾಯ ಧನ ನೀಡಿ ತಾತ್ಕಾಲಿಕವಾಗಿ ಪಾರ್ಕ್‌ನಲ್ಲಿ ಮನೆಕಟ್ಟಿಕೊಳ್ಳಿ 6 ತಿಂಗಳಲ್ಲಿ ನಿಮಗೆ ನಿವೇಶನ ನೀಡುತ್ತೇವೆಂದು ತಿಳಿಸಿದರು. ಅದರಂತೆ ಅಂದಿನ ಮುಖ್ಯಮಂತ್ರಿ ವೀರಪ್ಪ ಮೊಯ್ಲಿಯವರ ಸರ್ಕಾರ 50 ಲಕ್ಷ 25 ಸಾವಿರ ರೂಗಳನ್ನು ಕರ್ನಾಟಕ ಗೃಹ ನಿರ್ಮಾಣ ಮಂಡಳಿಗೆ ನೀಡಿತು. ಗೃಹ ಮಂಡಳಿ ನಿರ್ಮಿಸಿದ ನಕ್ಷೆಯಲ್ಲಿ 3 ಚದರ ಮನೆ 3 ಮೀಟರ್ ರಸ್ತೆ ಇರಬೇಕೆಂದು ತಿಳಿಸಿದೆ.

ಕಟ್ಟಿರುವ ಬಿಲ್ಡಿಂಗ್ ನೋಡಿದರೆ ಭಯ ವಾಸಮಾಡುವುದು ಹೇಗೆ?:

ಈಗ ಗೃಹ ಮಂಡಳಿ ನಿರ್ಮಿಸಿದ ಎರಡು ಅಂತಸ್ತಿನ ಮಹಡಿ ಮನೆಗಳು ಎದ್ದುನಿಂತಿವೆ. ಈ ಮನೆಗಳ ಗೋಡೆಗಳು ಈಗಾಗಲೇ ಬಿರುಕು ಬಿಟ್ಟಿದೆ. ಮೆಲ್ಮನೆಯಿಂದ ನೀರು ಕೆಳಮನೆಯ ಬಾಗಿಲಿಗೆ ಬೀಳುತ್ತದೆ. ಸಜ್ಜೆಗಳು ಬಿರುಕು ಬಿಟ್ಟಿವೆ. ಮನೆ ಒಳಗೆ 63 ಅಡಿ ಅಡುಗೆ ಮನೆ ಅದನ್ನು ಬಿಟ್ಟರೆ ಸಣ್ಣ ಹಾಲ್, ಬಚ್ಚಲು ಮನೆಯಿಲ್ಲ, ಕಕ್ಕಸ್ ರೂಂ ಇಲ್ಲ. ಈ ಮನೆಯ ಮೇಲ್ ಚಾವಣಿಯಲ್ಲಿ ನೀರು ಸೋರುತ್ತಿದೆ. ಮನೆಗಳಿಗೆ ಗಾಳಿ ಬೆಳಕು ಬರುವುದೇ ಇಲ್ಲ. ಈ ಸಂದರ್ಭದಲ್ಲಿ ಸ್ಥಳಕ್ಕೆ ಬೇಟಿ ನೀಡಿದ್ದಾಗ ಮಹಿಳೆಯೊಬ್ಬರು "ನೋಡಿಸ್ವಾಮಿ ಒಂದು ಕಡೆ 4 ಬಾಗಿಲು ಒಂದೆ ತರಹ ಇದೆ. ನನ್ನ ಗಂಡ ಹುಟ್ಟು ಕುಡುಕ, ಮೈ ಮೇಲೆ ಪ್ರಜ್ಞೆನೇ ಇರಲ್ಲ ಅಂತದ್ರಲ್ಲಿ ನನ್ನ ಮನೆ ಅಂತ ಬೇರೆ ಮನೆ ನುಗ್ಗಿಬಿಟ್ರೆ ಏನ್ಮಾಡೋದು" ಅಂದಳು. ಈ ಪ್ರದೇಶದ ಸಾಮಾಜಿಕ ಸ್ಥಿತಿಗತಿಯನ್ನು ಅರಿಯದೆ ಬಾಗಿಲು ನಿರ್ಮಿಸಿದ್ದಾರೆಂಬುದು ಮುಖ್ಯವಿಷಯ. ಗೋಡೆಗಳಿಗೆ ಹಾಕಿರುವ ಸಿಮೆಂಟ್ ಕಳಪೆಯದಾಗಿರುತ್ತದೆ. ಬಿರುಕುಬಿಟ್ಟಿರುವ ಗೋಡೆಗಳಿಗೆ ತೇಪೆ ಹಾಕಿದ್ದಾರೆ. ಇಂತಹ ದುಸ್ಥಿತಿಯಲ್ಲಿರುವ ಮನೆಗಳಿಗೆ ಹೋಗುವುದಾದರು ಹೇಗ್ರೆನ್ನುತ್ತಾರೆ ಈ ಬಡ ನಿವಾಸಿಗಳು.

ಈಗ ನಗರ ಸಭೆ ಅಧಿಕಾರಿಗಳು ಎಲ್ಲರಿಗೂ ಹರಾಜು ಮೂಲಕ ಮನೆ ಕೊಡುತ್ತೇವೆ ಬನ್ನಿ ಎಂದು ನೋಟಿಸ್ ನೀಡಿದ್ದಾರೆ. ಈ ವಿಷಯ ತಿಳಿದ ಪ್ರಜ್ಞಾವಂತ ಯುವಕರು ಶಾಸಕರನ್ನು, ಕೌನ್ಸಿಲರ್‌ಗಳನ್ನು ಭೇಟಿಮಾಡಿದರು. ನಗರಸಭೆ ಮೇಯರ್ ರವರಿಗೆ ಮನವಿ ನೀಡಿ ನ್ಯಾಯ ಕೇಳಿದರು. ಶಾಸಕರಾದ ಬಿ. ಮುನಿಯಪ್ಪನವರು ಇದಕ್ಕೆ ನಾನು ಹೊಣೆಯಲ್ಲ ದಯನಂದರಾವ್ ರವರನ್ನು ಕೇಳಿ ಎನ್ನುತ್ತಾರೆ. ಸತ್ತ ದಯನಂದರ್‌ರಾವ್‌ರವರನ್ನು ಕೇಳಲು ಸಾಧ್ಯವೇ? ನಗರಸಭಾ ಸದಸ್ಯರಲ್ಲಿಗೆ ಹೋದರೂ ನಗರ ಸಭಾ ಸದಸ್ಯರು ನೀರು, ರಸ್ತೆ, ಕೊಳಾಯಿ ಇವುಗಳನ್ನು ಕೇಳಿ ಅದಲ್ಲ ನನಗೆ ಸಂಬಂಧಿಸಿಲ್ಲವೆಂದರೂ, ಕೊನೆಗೆ ಮೇಯರ್‌ರವರನ್ನು ಬೇಟಿ ಮಾಡಿದರು. ಅವರು ನನಗೆ ಎಲ್ಲಾ ಗೊತ್ತು ಆ ಬಿಲ್ಡಿಂಗ್ 100 ವರ್ಷ ಬಾಳಿಕೆ ಬಾರುತ್ತೆ ಅಂತ ಇಂಜಿನೀಯರ್ ಹೇಳ್ತಾರೆ. ಎಲ್ಲರು ಮನೆಗೆ ಹೋಗಿ ಎನ್ನುತ್ತಾರೆ. ಇದರಿಂದ ಯುವಕರು ಬೇಸತ್ತು ಹೋರಾಟದತ್ತ ಕಾಲಿಟ್ಟಿದ್ದಾರೆ. ಜನವಾದಿಮಹಿಳಾ ಸಂಘಟನೆಯ (ಜೆ.ಎಂ.ಎಸ್.) ಜೊತೆ ಸ್ಥಳೀಯ ಜನರಿಂದ ಸಹಿಸಂಗ್ರಹ ಮಾಡಿ ಮೇಯರ್‌ರವರಿಗೆ ನೀಡಿ ಮರುಪರಿಶೀಲನೆ ಮಾಡಬೇಕು, ಈ ನಿವಾಸಿಗಳಿಗೆ ಪರ್ಯಾಯ ವ್ಯವಸ್ಥೆ ಮಾಡಬೇಕೆಂದು ಒತ್ತಾಯಿಸಿದ್ದರು. ಯಾವುದೇ ಅಧಿಕಾರಿಗಳು ಕ್ರಮವಹಿಸಿಲ್ಲವಾದ್ದರಿಂದ ಮಾನ್ಯ ನಗರಾಭಿವೃದ್ಧಿ ಸಚಿವರಾದ ಸೋಮಣ್ಣರವರಲ್ಲಿ ಹೋಗಿ ಮನವಿ ನೀಡಿದರು. ಆದರೆ ಇದುವರೆವಿಗೂ ಸಚಿವರು ಆಶ್ವಾಸನೆ ನೀಡಿದ್ದಾರೆ ಹೊರತು ಸ್ಥಳಕ್ಕೆ ಬೇಟಿ ನೀಡಿ ಪರಿಸ್ಥಿತಿಯನ್ನು ಗಮನಿಸುತ್ತಿಲ್ಲ ಈ ಜನ ತುಂಬಾ ಆತಂತ್ರ ಸ್ಥಿತಿಯಲ್ಲಿದ್ದಾರೆ. ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಜೆ.ಎಂ.ಎಸ್.-ಡಿ.ವೈ.ಎಫ್.ಐ. ಸಂಘಟನೆಗಳ ನೇತೃತ್ವದಲ್ಲಿ ಬೆಂಗಳೂರು ಮಹಾನಗರ ಪಾಲಿಕೆ ಎದುರು ಜೂನ್ 16 ರಂದು ನೂರಾರು ನಿವಾಸಿಗಳು ಪ್ರತಿಭಟನೆ ನಡೆಸಿದರು.

ವರದಿ - ಗೋಪಾಲಕೃಷ್ಣ ಅರಳಹಳ್ಳಿ

ಗ್ರಾಮೀಣ ಆಳುವ ವರ್ಗದ ನಿದ್ದೆಯನ್ನು ಕೆಡಿಸಿದ

ನಾರಾಯಣಪುರ ಬಲದಂಡೆ ಕಾಲುವೆ ಬಚಾವ್ ಆಂದೋಲನ

ಚಂದ್ರಶೇಖರ ಬಾಳೆ

ನಾರಾಯಣಪುರ ಎಡದಂಡೆ ಕಾಲುವೆ (ಸುರಪುರ, ಶಹಾಪುರ) ಯಡಿಯಲ್ಲಿ ಕೊಳ್ಳೆ ಹೊಡೆದ ಕೋಟ್ಯಾಧೀಶ ಗುತ್ತೇದಾರರು ದೇವದುರ್ಗ ತಾಲೂಕಾದಲ್ಲಿ ನಡೆದ ಬಲದಂಡೆ ಕಾಲುವೆಯಡಿಯಲ್ಲಿ ಕೊಳ್ಳೆಹೊಡೆಯಲು ಕಬ್ಬಿನ ಗದ್ದೆಗೆ ನುಗ್ಗುವ ಸೊಕ್ಕಿನ ಆನೆಗಳಂತೆ ನುಗ್ಗಿ ಬಂದಿದ್ದಾರೆ. ಅವರ ಜೊತೆಗೆ ತಾಲೂಕಿನ ಗುತ್ತೇದಾರರು (ಕಂಟ್ರಾಕ್ಟರ್‌ಗಳು) ಹಾಗೂ ಚುನಾಯಿತ ಪ್ರತಿನಿಧಿಗಳ ಸಂಬಂಧಿ ನೂತನ ಗುತ್ತೇದಾರರು ಮತ್ತು ಆಂಧ್ರದಿಂದ ಬಂದಿಳಿದ ಗುತ್ತೇದಾರರು ಸೇರಿಕೊಂಡಿದ್ದಾರೆ.

ಇವರೆಲ್ಲರಿಗೆ ಲೋಕಸಭಾ ಮಾಜಿ ಸದಸ್ಯರಾದ ಶ್ರೀ ವೆಂಕಟೇಶ ನಾಯಕ್, ಹಾಲಿ ವಿಧಾನ ಪರಿಷತ್ ಸದಸ್ಯರಾದ ಬಸವರಾಜ್ ಪಾಟೀಲ್ ಇಟಗಿ ಬೆನ್ನೆಲುಬಾಗಿ ನಿಂತಿದ್ದಾರೆ.

ಇನ್ನೊಂದೆಡೆ ಶಾಸಕರಾದ ಶ್ರೀಮತಿ ಬಿ.ಟಿ ಲಲಿತಾನಾಯಕ್ ಹಾಗೂ ವಿಧಾನ ಪರಿಷತ್ ಸದಸ್ಯರಾದ ಹನ್ಮಂತಪ್ಪ ಆಲ್ಕೋಡ ಇವರುಗಳ ಆಶೀರ್ವಾದ ಕೂಡ ದೊರೆತಿದೆ.

ನೂರಾರು ಎಕರೆ ಭೂಮಿ ಇದ್ದರೂ ಆರ್ಥಿಕ ಧೃಡತೆಯಿಲ್ಲದ ಭೂಮಾಲೀಕರು ಗುತ್ತೇದಾರರಿಗೆ ಭೂಮಿ ಕೊಡಿಸುವ ಏಜಂಟರಾಗಿ ಉಪಕಾಲುವೆ ಕಾಮಗಾರಿಗೆ ಬೇಕಾದ ಉಸುಗು ಇನ್ನಿತರ ವಸ್ತುಗಳನ್ನು ಒದಗಿಸುವ ಮುಖಾಂತರ ಗೆಳೆತನ ಬೆಳೆಸಿ ಈಗ ಗುತ್ತೇದಾರರ ಹಿತರಕ್ಷಕರಾಗಿದ್ದಾರೆ.

ಉಪ ಕಾಲುವೆಗಳನ್ನು ತೋಡುವಾಗಲೇ ಕಾಲುವೆಯಲ್ಲಿ ಮಣ್ಣು ಬಂದಿದ್ದರೂ ಮೆದುಕಲ್ಲು ಬಂದಿದೆಯೆಂದು ಮೆದು ಕಲ್ಲು ಬಂದಲ್ಲಿ ಗಟ್ಟಿ ಕಲ್ಲು ಬಂದಿದೆಯೆಂದು ಹೆಚ್ಚಿನ ಹಣಕ್ಕೆ ಬಿಲ್ ಮಾಡಿ ಕೋಟಿಗಟ್ಟಲೆ ಹಣ ಲಪಟಾಯಿಸಲು ಒಂದೆಡೆ ಮುಂದಾಗಿದ್ದಾರೆ.

ಇನ್ನೊಂದೆಡೆ ತೋಡಿದ ಕಾಲುವೆಗಳ ಒಳಮೈಗೆ ಸಿಮೆಂಟ್ ಕಾಂಕ್ರೀಟ್ ಮಾಡುವ ಬದಲು ಮೇಲು ನೋಟಕ್ಕೆ ತೋರಿಸಲು ಮಾತ್ರ ಕಳಪೆ ಉಸುಕಿನಿಂದ ಕೂಡಿದ ಸಿಮೆಂಟ್ ಜಲ್ಲಿಕಲ್ಲು ಕಂಕಣಗಳನ್ನು ನೆಪಮಾತ್ರಕ್ಕೆ ಬಳಸಿದ ಲೈನಿಂಗ್ ಮಾಡಲಾಗುತ್ತದೆ, ಒಂದು ಬಾರಿ ನೀರು ಹರಿದರೆ ಸಾಕು ಲೈನಿಂಗ್ ಕಿತ್ತುಕೊಂಡು ಹೋಗುತ್ತದೆ. ಇದನ್ನು ನೋಡುತ್ತಾ ರೈತರಲ್ಲಿ ಅಸಮಾಧಾನ ಹಬ್ಬಿತು. ನೀರಾವರಿ ಭ್ರಷ್ಟಾಚಾರದ ಇವೆರಡು ಪ್ರಶ್ನೆಗಳನ್ನು ಮುಂದಿಟ್ಟು ರೈತರು ಹೋರಾಟ ನಡೆಸಲು ತೀರ್ಮಾನಿಸಿದರು. ಹಳ್ಳಿ ಹಳ್ಳಿಗಳಲ್ಲಿ ಪ್ರಚಾರ ನಡೆಸಿ ಜೂನ್ 20 ರಿಂದ ಅನಿರ್ದಿಷ್ಟ ಧರಣಿ ಸತ್ಯಾಗ್ರಹಕ್ಕೆ ಪ್ರಾಂತ ರೈತ ಸಂಘ ಕರೆಕೊಟ್ಟಿತು.

ಶ್ರೀರಾಮರೆಡ್ಡಿಯವರ ಭೇಟಿ

19.5.99 ರಂದು ಸಿಪಿಐ(ಎಂ) ಶಾಸಕ ಜಿ.ವಿ.ಶ್ರೀರಾಮರೆಡ್ಡಿರೊಂದಿಗೆ ಚಂದ್ರಶೇಖರ ಬಾಳೆ, ಮಲ್ಲಯ್ಯ, ಜಾಲಹಳ್ಳಿ, ವೈ.ರಾಮಯ್ಯ, ಬಸವಗೌಡ ದೇಸಾಯಿ, ಕರಿಯಪ್ಪ ಸೇರಿದಂತೆ ರೈತ ಸಂಘದ ಮುಖಂಡರು ಕಾಲುವೆ ವೀಕ್ಷಣೆಯನ್ನು ನಡೆಸಿ ಕಳಪೆ ಕೆಲಸದ ತನಿಖೆಯನ್ನು ನಡೆಸಿದರು.

20.5.99 ರಂದು ರಾಯಚೂರಲ್ಲಿ ಪತ್ರಿಕಾ ಸಮ್ಮೇಳನ ನಡೆಸಿ ತೀವ್ರ ತನಿಖೆಗೆ ಒತ್ತಾಯಿಸಲಾಯಿತು.

ಅಂದೇ ಎಕ್ಸಿಕ್ಯೂಟಿವ್ ಇಂಜಿನಿಯರ್ ಸೇರಿದಂತೆ ಹಲವಾರು ಇಂಜಿನಿಯರುಗಳು ಒಂದು ಚೀಫ್ ಇಂಜಿನಿಯರ್ ಮಟ್ಟದ ಸಭೆ ಕರೆದು ಸಮಸ್ಯೆಗಳ ದೀರ್ಘ ಚರ್ಚೆ ನಡೆಸಲು ಒಪ್ಪಿಕೊಂಡರು.

20.6.99 ರಂದು ಬಲದಂಡೆ ಕಾಲುವೆಯ ಎಕ್ಸಿಕ್ಯೂಟಿವ್ ಇಂಜಿನಿಯರ್ ಕಛೇರಿಯ ಮುಂದೆ ಧರಣಿ ನಿರತ ರೈತರನ್ನು ಉದ್ದೇಶಿಸಿ ಕಾ. ಜಿ.ವಿ.ಶ್ರೀರಾಮರೆಡ್ಡಿ ಹಾಗೂ ಕಾಂ. ಚಂದ್ರಶೇಖರ ಬಾಳೆ ಹಾಗೂ ಇತರ ಸಂಗಾತಿಗಳು ಮಾತನಾಡಿ ಪ್ರಚಾರಾಂದೋಲನ ಮುಂದುವರಿಸಲು ವಿಶಾಲ ರೈತ ಸಮೂಹವನ್ನು ಸಂಘಟಿಸಲು ಕರೆ ಕೊಡಲಾಯಿತು.

ಚೀಫ್ ಇಂಜಿನಿಯರ್ ಜೊತೆ ಚರ್ಚೆ

ರೈತರ ಹೋರಾಟದ ಜೊತೆ ಕಾ. ಜಿ.ವಿ.ಶ್ರೀರಾಮರೆಡ್ಡಿಯವರ ಭೇಟಿ ಹಾಗೂ ಪತ್ರಿಕಾ ಸಮ್ಮೇಳನ, ನೀರಾವರಿ ಇಲಾಖೆಯ ಮೇಲೆ ಒತ್ತಡ ತರುವಲ್ಲಿ ಸಫಲವಾಯಿತು.

5.6.99 ರೊಳಗೆ ಸಭೆ ಕರೆಯಲು ಒಪ್ಪಿದ್ದ ಅಧಿಕಾರಿಗಳು 2.6.99 ರವರೆಗೆ ಯಾವ ಮಾಹಿತಿಯನ್ನು ನೀಡದೆಯಿರುವಾಗ ಕಳಪೆ ಕಾಮಗಾರಿ ಲೈನಿಂಗ್ ಕೆಲಸವನ್ನು ರೈತರಿಂದಲೇ ಒಡೆದು ಹಾಕುವುದಾಗಿ ಘೋಷಿಸಲಾಯಿತು. ಆಗ 5.6.99 ರಂದು ಚೀಫ್ ಇಂಜಿನಿಯರ್ ಸಭೆ ಕರೆದು ಭೀಮರಾಯನಗುಡಿಯಲ್ಲಿ ವಿವರವಾದ ಚರ್ಚೆ ನಡೆಸಲಾಯಿತು.

11.6.99 ರಂದು ಸೂಪರಿಂಟೆಂಡೆಂಟ್ ಇಂಜಿನಿಯರ್ ಸಮ್ಮುಖದಲ್ಲಿ ಕಾಲುವೆಗಳ ವೀಕ್ಷಣೆ ಮಾಡಲು ಹಾಗೂ ಕಳಪೆ ಕೆಲಸ ಆಗಿದ್ದಲ್ಲಿ ಕಾಲುವೆ ಲೈನಿಂಗ್ ಒಡೆದು ಹಾಕಲು ಹಾಗೂ ಸಂಬಂಧಿತ ಇಂಜಿನಿಯರ್‌ಗಳನ್ನು ಸಸ್ಪೆಂಡ್ ಮಾಡಲು ಹಾಗೂ ಮುಂದಿನ ಕಾಮಗಾರಿಗಳನ್ನು ಎಸ್ಟಿಮೇಟ್ ಪ್ರಕಾರ ಮಾಡಲು ಒಪ್ಪಿಕೊಳ್ಳಲಾಯಿತು.

ಭಯಭೀತರಾದ ಗುತ್ತೇದಾರರು ಹಾಗೂ ಅವರ ಭೂಮಾಲೀಕ ಬೆಂಬಲಿಗರು

ಕಳಪೆ ಕೆಲಸ ಮಾಡಿ ಕುಡಿದು ತಿಂದು ಕೇಕೆ ಹಾಕುತ್ತಿರುವ ಗುತ್ತೇದಾರರು ಸ್ಥಳೀಯ ಭೂಮಾಲೀಕ, ರಾಜಕಾರಣಿಗಳ ಗುಪ್ತ ಸಭೆಗಳು ಪ್ರವಾಸಿ ಬಂಗಲೆಗಳಲ್ಲಿ ನಡೆದವು. ಪ್ರಾಂತ ರೈತ ಸಂಘದವರ ಕುರಿತು ಏನು ಮಾಡಬೇಕೆಂದು ಪರಿತಪಿಸಿದರು.

ಸಾಲು ಸಾಲಾಗಿ ಗುತ್ತೇದಾರರು, ಅವರ ಏಜೆಂಟ್‌ರುಗಳು ರೈತ ಸಂಘದ ಕಛೇರಿಗೆ ಬಂದು ಕೈ ಮುಗಿದು ಕಾಲು ಹಿಡಿದು ಬೇಡಿಕೊಂಡರೂ ಪ್ರಾಂತ ರೈತ ಸಂಘ ಕಳಪೆ ಕೆಲಸವನ್ನು ಒಡೆದು ಹಾಕಲು ತೀರ್ಮಾನಿಸಿ ರೈತರಿಗೆ ಕರೆ ಕೊಟ್ಟಿತು.


ಕಾಲುವೆ ಬೇಕಾದವರು ರೈತ ಸಂಘಕ್ಕೆ ಬನ್ನಿ ವಿನಾಶ ಬೇಕಾದವರು ಗುತ್ತೇದಾರರ ಬೆನ್ನು ಹತ್ತಿ ಎಂದು ಪ್ರಾಂತ ರೈತ ಸಂಘ ಕರೆ ನೀಡಿದೆ.

ಕಾಲುವೆ ಲೈನಿಂಗ್ ಒಡೆಯುವ ತೀರ್ಮಾನದ ನಂತರ ನೂತನ ಗ್ರಾಮೀಣ ಆಳುವ ವರ್ಗದ ಕಣ್ಣುಗಳು ಕೆಂಪಾಗಿವೆ, ಮುಂದಿನ ಆಳುವ ವರ್ಗದ ರಾಕ್ಷಸೀ ರೂಪ ಹೊರಹೊಮ್ಮಲಿದೆಯೆಂಬುದನ್ನು ಪ್ರಾಂತ ರೈತ ಸಂಘ ಗಂಭೀರವಾಗಿ ಪರಿಗಣಿಸಿದೆ.

ಪುಟ 10 ನೋಡಿ

ಮಾಸದ ನೆನಪುಗಳು

(ಒಂದು ರಾಜಕೀಯ ಆತ್ಮ ಕಥನ)



ಕಳೆದ ವಾರ ದುಡಿಯುವ ಜನರ ಅಪ್ರತಿಮ ನೇತಾರನ ಐದು ದಶಕಗಳಿಗೂ ಮೀರಿದ 'ಮಾಸದ ನೆನಪು' ಗಳಲ್ಲಿ ಬಾಲ್ಯದ ನೆನಪುಗಳನ್ನು ಈ ವರೆಗೆ ಓದಿದ್ದೀರಿ - ರಾಷ್ಟ್ರೀಯ ಚಳುವಳಿಯ ಗಾಳಿ, ತಾಯಿ ಕ್ರಾಂತಿಕಾರಿಯೊಬ್ಬರ ಪಿಸ್ತೂಲನ್ನು ಬಚ್ಚಿಟ್ಟದ್ದು, ಗಾಂಧೀಜಿ ಉಪವಾಸ ಮಾಡಿದಾಗ ಶಾಲೆಗೆ ಹೋಗದ್ದು, ನೇತಾಜಿಯವರ ಸಭೆಗೆ ಹೋಗಿ ಮೊದಲ ಬಾರಿ ಲಾಟಿಯೇಟು ತಿಂದದ್ದು, ಕ್ರಾಂತಿಕಾರಿಗಳ ಬಗ್ಗೆ ತನಿಖೆಗೆ ಒಪ್ಪದ ದೊಡ್ಡಪ್ಪನಿಗೇ ಬೆದರಿಕೆ ಪತ್ರ ಬರೆದದ್ದು ಇತ್ಯಾದಿ. ಬ್ಯಾರಿಸ್ಟರ್ ಆಗಬೇಕೆಂದು ಬ್ರಿಟನ್ನಿಗೆ ಹೋದ ಅವರ ಜೀವನದಲ್ಲಿ ಕಾನೂನು ಅಧ್ಯಯನಕ್ಕೂ ಮೀರಿದ ವಿದ್ಯಮಾನಗಳು ಘಟಿಸಿದವು. ಐ.ಸಿ.ಎಸ್. ಪಾಸಾಗಲಿಲ್ಲ, ಆದರೆ ಕಾನೂನು ಅಧ್ಯಯನ ಮುಂದುವರೆಯಿತು. ಜತೆಜತೆಗೇ ಅಂತರ್‍ರಾಷ್ಟ್ರೀಯ ರಾಜಕೀಯ ಪರಿಚಯವೂ ಆಗಲಾರಂಭಿಸಿದಂತೆ ಅದು 'ನನ್ನನ್ನು ರಾಜಕೀಯಯ ಮುಖ್ಯವಾಹಿನಿಗೆ ವೇಗವಾಗಿ ಸೆಳೆದುಕೊಳ್ಳುತ್ತಿದ್ದವು" ಎಂದು ಕಳೆದವಾರ ಜ್ಯೋತಿಬಸುರವರು ಬರೆದಿದ್ದರು. ಮುಂದೆ ಓದಿ ....

ಲಂಡನ್ ಮಜ್ಲಿಸ್ ಮತ್ತು ಆನಂತರ

ಆ ಹೊತ್ತಿಗೆ ಭಾರತೀಯ ವಿದ್ಯಾರ್ಥಿಗಳು ಲಂಡನ್ ಮಜ್ಲಿಸ್ ರಚಿಸಿದರು. ನಾನು ಅದರ ಪ್ರಥಮ ಸಂಪಾದಕ. ಭಾರತದ ಪರವಾಗಿ ಸಾರ್ವಜನಿಕ ಅಭಿಪ್ರಾಯವನ್ನು ಮೂಡಿಸುವುದು ಮತ್ತು ಚಂದಾ ಸಂಗ್ರಹಿಸುವುದು ನನ್ನ ಕೆಲಸವಾಗಿತ್ತು.

ಬ್ರಿಟನ್‌ನಲ್ಲಿ ಭಾರತೀಯ ವಿದ್ಯಾರ್ಥಿ ಒಕ್ಕೂಟ ಮರುಸ್ಥಾಪನೆಗೊಂಡಿತು ಹಾಗೂ ಅದರ ಜತೆಗೆ ಭಾರತೀಯ ವಿದ್ಯಾರ್ಥಿಗಳು ಮತ್ತು ಸಮಾಜವಾದ (Indian Students and Socialism) ಮುಖವಾಣಿ ಪ್ರಕಟಣೆ ಆರಂಭವಾಯಿತು.

ಇಂಗ್ಲೆಂಡ್‌ನ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಕಮ್ಯುನಿಸ್ಟ್ ಗುಂಪುಗಳ ರಚನೆ ವಿಚಾರವನ್ನು ನಾನು ಆಗಲೇ ಪ್ರಸ್ತಾಪಿಸಿದ್ದೇನೆ. ಎಲ್ಲಾ ಸದಸ್ಯರ ಹೆಸರುಗಳನ್ನು ನೆನಪಿಸಿಕೊಳ್ಳಲು ಆಗುತ್ತಿಲ್ಲ. ರಜನಿ, ಪಟೇಲ್, ಪಿ.ಎನ್. ಹಕ್ಸರ್, ಮೋಹನ್ ಕುಮಾರ, ಮಂಗಳಂ, ಇಂದ್ರಜಿತ್ ಗುಪ್ತ, ರೇಣು ಚಕ್ರವರ್ತಿ, ಎನ್.ಕೆ. ಕೃಷ್ಣನ್, ಪಾರ್ವತಿ ಕೃಷ್ಣನ್ (ಯಾನೆ ಮಂಗಳಂ) ನಿಖಿಲ್ ಚಕ್ರವರ್ತಿ ಮತ್ತು ಅರುಳ್ ಬೋಸ್ ಮೊದಲಾದವರು ಮಾತ್ರ ಥಕ್ಕನೆ ನೆನಪಿಗೆ ಬರುತ್ತಾರೆ. ಈ ಗುಂಪುಗಳು ನಿಯಮಿತವಾಗಿ ಜಂಟಿ ಸಮ್ಮೇಳನದಲ್ಲಿ ಒಟ್ಟು ಸೇರುತ್ತಿದ್ದವು. ಫಿರೋಜ್ ಗಾಂಧಿ ಇಂಡಿಯನ್ ಲೀಗ್‌ನ ಒಬ್ಬ ಸಕ್ರಿಯ ನಾಯಕರಾಗಿದ್ದರು. ಲಂಡನ್ ಮಜ್ಲಿಸ್‌ನ ಚಟುವಟಿಕೆಗಳಲ್ಲೂ ಅವರು ತೊಡಗಿಸಿಕೊಂಡರು. ವಿದ್ಯಾರ್ಥಿ ಫೆಡರೇಶನ್‌ನ ಪ್ರತಿ ಸಭೆಗೂ ಅವರು ಹಾಜರಾಗುತ್ತಿದ್ದರು. ಸ್ನೇಹಾಂಶು ಅದಕ್ಕೆ ಮೊದಲೇ ಗೆಳೆಯರಾಗಿಬಿಟ್ಟಿದ್ದರು. ಲಂಡನ್‌ಗೆ ಬರುವ ಭಾರತದ ರಾಷ್ಟ್ರೀಯವಾದಿ ನಾಯಕರಿಗೆ ಸತ್ಕಾರ ಸಮಾರಂಭಗಳನ್ನು ಏರ್ಪಡಿಸುವುದು ಮಜ್ಲಿಸ್‌ನ ಮುಖ್ಯ ಆದ್ಯತೆಗಳಲ್ಲಿ ಒಂದಾಗಿತ್ತು. ಜವಾಹರಲಾಲ್ ನೆಹರೂ, ಸುಭಾಷ್ ಚಂದ್ರಬೋಸ್, ವಿಜಯಲಕ್ಷ್ಮಿ ಪಂಡಿತ್, ಕಾಂಗ್ರೆಸ್ ಸಮಾಜವಾದಿ ಪಕ್ಷದ ನಾಯಕ ಯೂಸೂಫ್ ಮೆಹರ್ ಆಲಿ ಇವರೆಲ್ಲರೂ ಮಜ್ಲಿಸ್‌ನ ಅತಿಥಿಗಳಾಗಿದ್ದರು.

ಕೃಷ್ಣಮೆನನ್ ನನ್ನನ್ನು ನೆಹರೂ ಅವರಿಗೆ ಪರಿಚಯಿಸಿದರು. ಲಂಡನ್‌ನಲ್ಲಿ ನೆಹರೂ ಉಳಿದುಕೊಳ್ಳುತ್ತಿದ್ದ ಸ್ಥಳಕ್ಕೆ ಮೆನನ್ ನನ್ನನ್ನು ಕರೆದುಕೊಂಡು ಹೋದರು. 'ನನಗೆ ಸಮಾಜವಾದದಲ್ಲಿ ನಂಬಿಕೆಯಿದೆ' ಎಂದು ನಾನು ನೆಹರೂಗೆ ಹೇಳಿದ್ದು ನನಗೆ ನೆನಪಿದೆ. ಅದಕ್ಕೆ ಉತ್ತರವಾಗಿ ನೆಹರೂ 'ಭಾರತಕ್ಕೆ ಸ್ವಾತಂತ್ರ್ಯ ದೊರಕಿಸುವುದು ನಮ್ಮ ಮೊದಲ ಕಾರ್ಯಭಾರ. ಇದನ್ನು ನೀವು ಒಪ್ಪುತ್ತೀರಾ' ಎಂದು ಕೇಳಿದ್ದಕ್ಕೆ ನಾನು ಹೌದು ಎಂದಿದ್ದೆ ಹಾಗೂ ಅವರನ್ನು ಸತ್ಕಾರ ಕೂಟಕ್ಕೆ ಆಹ್ವಾನಿಸಿದ್ದೆ.

ಹೆಮ್ಮೆ ತಂದ ಸಂಗತಿ

ಲಂಡನ್‌ನಲ್ಲಿ ನಾನು ವಾಸವಾಗಿದ್ದಾಗ ನಾನು ಗೌರವಿಸುತ್ತಿದ್ದ ಭಾರತೀಯ ನಾಯಕರಲ್ಲಿ ನೆಹರೂ ಕೂಡ ಒಬ್ಬರಾಗಿದ್ದರು. ಹಿಟ್ಲರ್ ಮತ್ತು ಮುಸಲೋನಿಯಂಥ ನಾಯಕರನ್ನು ಭೇಟಿಯಾಗಲು ಅವರು ನಿರಾಕರಿಸಿದ್ದರು. ಫ್ರಾಂಕೋ ವಿರುದ್ಧ ಅವರು ಧ್ವನಿ ಎತ್ತಿದ್ದೂ ನಮ್ಮಲ್ಲಿ ಬಹಳಷ್ಟು ಉತ್ತೇಜನ ತುಂಬಿತ್ತು. ವಿಜಯಲಕ್ಷ್ಮಿ ಪಂಡಿತ್ ಅವರ ಬಗ್ಗೆಯೂ ನಮಗೆ ತುಂಬಾ ಹೆಮ್ಮೆಯಿತ್ತು.

ಮಹಿಳೆಯರ ಸ್ಥಾನ ಅಡುಗೆ ಮನೆಗಷ್ಟೆ ಸೀಮಿತ ಎಂಬ ಹಿಟ್ಲರನ ದುಷ್ಟಯೋಚನೆ ಜಗತ್ತಿನೆಲ್ಲಡೆ ಗುಂಯ್‌ಗುಡುತ್ತಿರುವಾಗ ಸರೋಜಿನಿ ನಾಯ್ಡು ಅವರಂಥ ಭಾರತೀಯ ನಾಯಕಿಯರು ಸಕ್ರಿಯ ರಾಜಕೀಯಕ್ಕೆ ಧುಮುಕಿದ್ದು ನಿಜಕ್ಕೂ ಹೃದಯಂಗಮವಾಗಿತ್ತು ಹಾಗೂ ಹೆಮ್ಮೆತರುವ ವಿಷಯವಾಗಿತ್ತು.

ಲಂಡನ್‌ನಲ್ಲಿ ವಿದ್ಯಾರ್ಥಿಗಳಾಗಿದ್ದಾಗಲೇ ನಮ್ಮಲ್ಲಿ ಕೆಲವರು ಭಾರತಕ್ಕೆ ಹಿಂದಿರುಗಿದ ನಂತರ ನಮ್ಮನ್ನು ನಾವು ಕಮ್ಯುನಿಷ್ಟ್ ಪಕ್ಷಕ್ಕೆ ಸಮರ್ಪಿಸಿಕೊಳ್ಳುವುದೆಂದು ನಿರ್ಧರಿಸಿದ್ದೆವು.

ಕಾಂಗ್ರೆಸ್‌ನ ಒಬ್ಬ ಉನ್ನತ ನಾಯಕ ಹಾಗೂ ಅದ್ಭುತ ಭಾಷಣಕಾರ ಭೂಲಾ ಭಾಯಿ ದೇಸಾಯಿ ಬಂಡವಾಳಶಾಹಿ ವರ್ಗದ ಪ್ರತಿನಿಧಿಯೆಂದು ನಾವು ಪರಿಗಣಿಸಿದ್ದರೂ ಲಂಡನ್‌ನಲ್ಲಿ ಅವರಿಗೆ ನಾವು ಸತ್ಕಾರ ಕೂಟ ಏರ್ಪಡಿಸಿದ್ದೆವು.

ಭಾರತೀಯ ವಸತಿ ಕಾನೂನನ್ನು (India Domicile Rule) 1935 ರಿಂದಲೇ ಅನುಷ್ಠಾನಕ್ಕೆ ತರಲಾಗಿತ್ತು. ಹಾಗೂ 1937 ರಲ್ಲಿ ಚುನಾವಣೆಗಳ ನಂತರ ಭಾರತದ ಬಹುತೇಕ ರಾಜ್ಯಗಳಲ್ಲಿ ಕಾಂಗ್ರೆಸ್ ಪಕ್ಷ ಸರಕಾರಗಳನ್ನು ರಚಿಸಿತು. ರೈತರ ಮೇಲೆ ಗೋಲಿಬಾರುಗಳಾದವು. ಈ ವಿಚಾರವನ್ನು ದೇಸಾಯಿಯೊಂದಿಗೆ ಪ್ರಸ್ತಾಪಿಸಿದೆವು. ರೈತರು ಕಾಂಗ್ರೆಸ್‌ಗೆ ಮಾತ್ರವೇ ಬೆಂಬಲ ನೀಡುತ್ತಾರೆ ಎಂಬುದಷ್ಟೇ ಅವರ ಉತ್ತರವಾಗಿತ್ತು.

ಸುಭಾಷ್‌ಚಂದ್ರ ಬೋಸ್ ಒಬ್ಬ ಎಡಪಂಥೀಯ ಒಲವಿನವರು ಎಂದು ನಾವು ಪರಿಗಣಿಸಿದ್ದೆವು. 1939 ರಲ್ಲಿ ತ್ರಿಪುರಾ ಸಮ್ಮೇಳನದಲ್ಲಿ ಅವರು ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಯಾದಾಗ ನಾವು ಅವರಿಗೊಂದು ಅಭಿನಂದನೆ ಸಂದೇಶ ಕಳಿಸಿದ್ದೆವು. ಲಂಡನ್‌ನಲ್ಲಿ ಕೂಡ ಒಂದು ಸಭೆ ನಡೆಸಬೇಕೆಂದು ನಾವು ನಿರ್ಧರಿಸಿದೆವು. ಫಿರೋಜ್ ಗಾಂಧಿಯವರನ್ನು ನಾವು ಆಹ್ವಾನಿಸಿದೆವು. ಬರಲು ಅವರು ಒಪ್ಪಿದರು. ಆದರೆ ಸಭೆಯಲ್ಲಿ ಭಾಷಣ ಮಾಡುವುದಿಲ್ಲ ಎಂದರು. ಹಾಗೆಯೇ ನಡೆದುಕೊಂಡರು. ಎನ್.ಕೆ. ಕೃಷ್ಣನ್ ಮತ್ತು ನಾನು ಅಂದಿನ ಭಾಷಣಕಾರರಾಗಿದ್ದೆವು. ಈ ಸಭೆಯ ನಂತರ ಟಿಪ್ಪಣಿಯನ್ನು ಬೋಸರಿಗೆ ಕಳಿಸಿದೆವು.

ನಾವು ಅಲ್ಲಿದ್ದಾಗಲೇ ಬೋಸ್ ಒಮ್ಮೆ ಲಂಡನ್‌ಗೆ ಬಂದರು. ಮರುದಿನ ಬ್ರಿಟಿಷ್ ಕಮ್ಯುನಿಸ್ಟ್ ಪಕ್ಷದ ಮುಖವಾಣಿ 'ಡೈಲಿ ವರ್ಕರ್'ನಲ್ಲಿ ಗ್ರೇಟ್ ಬ್ರಿಟನ್ ಕಮ್ಯುನಿಸ್ಟ್ ಪಕ್ಷ(ಸಿ.ಪಿ.ಜಿ.ಬಿ)ದ ನೇತಾರರಾದ ರಜನಿ ಪಾಮೆ ದತ್ತ ಅವರ ಪೂರ್ಣ ಸಂದರ್ಶನವೊಂದು ಪ್ರಕಟವಾಯಿತು.

ಲಂಡನ್‌ನ ಟ್ರಫಲ್ಗರ್ ಚೌಕದಲ್ಲಿ ಪ್ರತಿವರ್ಷ ಜನವರಿ 26 ರಂದು ಸಭೆ ರ್‍ಯಾಲಿಗಳು ನಡೆಯುತ್ತಿದ್ದವು. ಇಂದಿರಾಗಾಂಧಿ ಆ ಸಭೆಗಳಿಗೆ ಬರುತ್ತಿದ್ದರು.

ಇತರ ವಿಷಯಗಳಿಗೆ ಹೋಗುವ ಮುನ್ನ, ನನ್ನ ಲಂಡನ್ ವಾಸ್ತವ್ಯದ ಅವಧಿಯಲ್ಲಿನ ಕೆಲವು ಘಟನೆಗಳನ್ನು ಹೇಳಬೇಕೆನಿಸುತ್ತದೆ. ಭಾರತೀಯ ನಾಗರಿಕರು ಬಹುವಾಗಿ ವಾಸಿಸುವ ಪೂರ್ವ ಲಂಡನ್‌ನಲ್ಲಿ ನಾವು ಸಾಕ್ಷರತೆ ಆಂದೋಳನವನ್ನು ಆರಂಭಿಸಿದೆವು. ಈ ವಿಷಯದಲ್ಲಿ ಬ್ರಿಟಿಷ್ ಕಮ್ಯುನಿಸ್ಟ್ ಪಕ್ಷ ನಮಗೆ ಸಹಾಯ ಹಸ್ತ ಚಾಚಿತು.

ಸ್ಪೇನಿನಲ್ಲಿ ಅಂತರ್ಯುದ್ಧ

ಸ್ಪೇನ್‌ನಲ್ಲಿ ಅಂತಃಕಲಹ ಮುಂದುವರಿದಿತ್ತು. ಸಾರ್ವಜನಿಕ ಅಭಿಪ್ರಾಯ ರೂಪಿಸಲು ಹಾಗೂ ತನ್ನ ದೇಶದಲ್ಲಿ ನಾಗರಿಕ ಸರಕಾರಕ್ಕಾಗಿ ನೆರವು ಪಡೆಯಲಿಕ್ಕೆ ಸ್ಪೇನ್ ಕಮ್ಯುನಿಸ್ಟ್ ಪಕ್ಷದ ಪ್ರಖ್ಯಾತ ನಾಯಕಿ ಡಾಲರ್ಸ್ ಎಬರುರಿ (La Pasionara) ಫ್ರಾನ್ಸ್‌ಗೆ ತೆರಳಿದರು. ಪ್ಯಾರಿಸ್‌ನಲ್ಲಿ ಅವರಿಗೆ ಒಂದು ಸತ್ಕಾರ ಕೂಟ ನಡೆಯಿತು. ಭಾರತದ ನಾಯಕರಾದ ಜವಾಹರಲಾಲ್ ನೆಹರೂ, ಮೋಹಿತ್ ಬ್ಯಾನರ್ಜಿ ಮತ್ತು ಫಿರೋಜ್ ಗಾಂಧಿ ಪಾಲ್ಗೊಂಡಿದ್ದರು. ಈ ಸಮಾರಂಭದಲ್ಲಿ ಮಾತನಾಡಲು ಫ್ರೆಂಚ್ ಸರಕಾರ ಅವಕಾಶ ಕೊಡಲಿಲ್ಲ. ಕೆಂಪು ಗುಲಾಬಿಗಳ ಗುಚ್ಛವೊಂದನ್ನು ಸ್ಪೇನ್ ನಾಯಕಿಗೆ ನೆಹರೂ ಅರ್ಪಿಸಿದರು. ಈ ಘಟನೆ ಜನರನ್ನು ಬಹಳವಾಗಿ ಆಕರ್ಷಿಸಿತು ಹಾಗೂ ಫ್ರೆಂಚ್ ಸರಕಾರದ ವಿರುದ್ಧ ಸಾರ್ವಜನಿಕ ಅಭಿಪ್ರಾಯ ಮೂಡಿತು.

ಕಮ್ಯುನಿಸ್ಟ್ ಒಲವುಳ್ಳ ಭಾರತೀಯ ವಿಜ್ಞಾನಿ ಡಾ|| ಬೀರೇಶ್ ಗುಹಾ ಲಂಡನ್‌ಗೆ ಬಂದು ರಜನಿ ಪಾಮೆ ದತ್ತ ಮತ್ತು ಸಿಪಿಜಿಬಿಯ ಅನೇಕ ಮುಖಂಡರನ್ನು ಭೇಟಿ ಮಾಡಿದರು. ನಾನು ಕೂಡ ಅವರನ್ನು ಭೇಟಿಯಾದೆ.

ಕಾರ್ಲ್ ಮಾರ್ಕ್ಸ್ ತಮ್ಮ ಜೀವಿತದ ದೀರ್ಘ ಕಾಲವನ್ನು ಕಳೆದ ಲಂಡನ್‌ನ ಹ್ಯಾನಿಸ್ಟೆಡ್ ಹೆಲ್ತ್ ಪ್ರದೇಶದಲ್ಲಿ ಒಂದಲ್ಲ ಒಂದು ಪಕ್ಷದ ಸಭೆ ನಡೆಯುವುದು ಸಾಮಾನ್ಯವಾಗಿತ್ತು. ಒಂದು ದಿನ ಅಲ್ಲಿ ನಡೆಯುತ್ತಿದ್ದ ಫ್ಯಾಸಿಸ್ಟ್ ಪಕ್ಷದ ರ್‍ಯಾಲಿಯಲ್ಲಿ ಭಾರತವನ್ನು ಟೀಕಿಸಲಾಗುತ್ತಿತ್ತು. ಇದನ್ನು ತಡೆದುಕೊಳ್ಳಲಾಗದೆ ಭೂಪೇಶ್ ಮತ್ತು ನಾನು ನೇರವಾಗಿ ಆ ಭಾಷಣಕಾರನ ಬಳಿ ಹೋಗಿ, "ನಿಮ್ಮ ರಾಜಕೀಯದ ಬಗ್ಗೆ ಮಾತನಾಡುವ ಎಲ್ಲಾ ಹಕ್ಕು ನಿನಗಿದೆ. ಅದರಲ್ಲಿ ನಮ್ಮ ದೇಶವನ್ನು ಎಳೆದು ತುರುವ ಅಗತ್ಯವೇನಿದೆ ?"ಎಂದು ಪ್ರಶ್ನಿಸಿದೆವು. ನೂರಾರು ಜನರು ನಮ್ಮನ್ನು ಬೆಂಬಲಿಸಿದರು. ನಾವು ಪ್ರಶ್ನೆಗಳನ್ನು ಕೇಳಬಹುದು, ಆದರೆ ಸಭೆ ಅಸ್ತವ್ಯಸ್ತವಾಗಲು ಅವಕಾಶಕೊಡಬಾರದು ಎಂದು ಪೋಲೀಸರು ನಮ್ಮನ್ನು ಎಚ್ಚರಿಸಿದರು. ಸಭೆ ವಿಸರ್ಜಿತವಾಯಿತು.

ಲಂಡನ್‌ನಲ್ಲಿನ ಎಲ್ಲಾ ಪರಿಚಯಸ್ಥರ ಪೈಕಿ ಒಬ್ಬರ ಬಗ್ಗೆ ನನಗೆ ನಿರ್ದಿಷ್ಟವಾಗಿ ನೆನಪಿದೆ. ಪ್ರಮೊದ ಸೇನ್‌ಗುಪ್ತಾ, ಅವರು ಒಬ್ಬ ಪಕ್ಷದ ಸದಸ್ಯ. ನಾವು ಆಗಾಗ ಭೇಟಿಯಾಗುತ್ತಿದ್ದೆವು. ಬ್ರಿಟಿಷ್ ಕಮ್ಯುನಿಸ್ಟ್ ಪಕ್ಷದ ಜತೆ ಅವರಿಗೆ ಸ್ವಲ್ಪ ಭಿನ್ನಾಭಿಪ್ರಾಯವಿತ್ತು. ಹೀಗಾಗಿ ಭಾರತಕ್ಕೆ ಮರಳಿ ಅಲ್ಲಿ ಪಕ್ಷದ ಕೆಲಸವನ್ನು ಮುಂದುವರಿಸುವಂತೆ ಸಿಪಿಜಿಬಿ ಅವರಿಗೆ ಸಲಹೆ ಮಾಡಿತು.

ಇನ್ನೊಬ್ಬರು ಡಾ|| ಶಶಿಧರ ಸಿನ್ಹಾ. ಅವರು ಲಂಡನ್‌ನಲ್ಲಿ ಬಿಬ್ಲಿಯೊಫೈಲ್ ಎಂಬ ಹೆಸರಿನ ಪುಸ್ತಕದ ಅಂಗಡಿ ಇಟ್ಟುಕೊಂಡಿದ್ದರು. ಅದು ನಮಗೆ ಭೇಟಿಯಾಗುವ ಸ್ಥಳವಾಗಿತ್ತು. ಡಾ||ಸಿನ್ಹಾ ನಮ್ಮ ಹೋರಾಟದ ಉದ್ದೇಶದೊಂದಿಗೆ ಸಹಾನುಭೂತಿ ತೋರುತಿದರು.

ಯಾವ ವರ್ಷವೆಂದು ಸರಿಯಾಗಿ ನೆನಪಾಗುವುದಿಲ್ಲ. ಸೌಮೇನ್ ಟಾಗೋರರ ಒಂದು ಸೈದ್ಧಾಂತಿಕ ಪ್ರಬಂಧವನ್ನು ಸಿಪಿಜಿಬಿ ನಾಯಕರಿಗೆ ಕಳಿಸಿಕೊಟ್ಟಿದ್ದರು. ಪಕ್ಷವು ಪರಿಶೀಲನೆಯಾಗಿ ಅದನ್ನು ನಮಗೆ ಒಪ್ಪಿಸಿತು. ಅದು ಸ್ವೀಕಾರಾರ್ಹವಲ್ಲ ಎಂದು ನಾವು, ಅಂದರೆ ಕಮ್ಯೂನಿಸ್ಟ್ ವಿದ್ಯಾರ್ಥಿಗಳು ತಿರಸ್ಕರಿಸಿದೆವು. ಬ್ರಿಟಿಷ್ ಪಕ್ಷ ನಮ್ಮ ನಿಲುವನ್ನು ಒಪ್ಪಿತು.

ಹೊತ್ತಿ ಉರಿಯುತ್ತಿದ್ದ ಯುರೋಪ್

ನಾವು ಲಂಡನ್ ಬಿಟ್ಟಾಗ ಸಿಪಿಜಿಬಿಯ ಉನ್ನತ ನಾಯಕರಾದ ರಜನಿಪಾಮೆ ದತ್ತ, ಹ್ಯಾರಿ ಪಾಲಿಟ್ ಮತ್ತು ಬೆಸ್ ಬ್ರಾಡ್ಲಿ ಮೊದಲಾದವರು ಭಾರತದಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ಸಂಯುಕ್ತ ರಂಗವನ್ನು ರಚಿಸುವುದಷ್ಟೇ ಆ ಕಾಲಘಟ್ಟದಲ್ಲಿ ಉಳಿದಿರುವ ಒಂದೇ ದಾರಿ ಎಂದು ನಮಗೆ ಸ್ಪಷ್ಟವಾಗಿ ಹೇಳಿದರು.

ಆ ವೇಳೆಗೆ ಯುರೋಪ್ ಹೊತ್ತಿ ಉರಿಯುತ್ತಿತ್ತು. ಝೆಕೊಸ್ಲೋವಾಕಿಯಾ ಮತ್ತು ಪೋಲಂಡ್ ಅನ್ನು ಹಿಟ್ಲರ್ ವಶಪಡಿಸಿಕೊಂಡಿದ್ದ. ಬ್ರಿಟನ್‌ನ ಕನ್ಸರ್ವೇಟಿವ್ ಪಕ್ಷದ ಪ್ರಧಾನಮಂತ್ರಿ ಚೇಂಬರ್‌ಲೇನ್ ಕಮ್ಯುನಿಸಂ ವಿರೋಧದ ಹೆಸರಿನಲ್ಲಿ ನಾಜಿ ನಾಯಕನನ್ನು ತೃಪ್ತಿ ಪಡಿಸುವುದರಲ್ಲೇ ನಿರತನಾಗಿದ್ದ.

ಹಿಟ್ಲರ್ ಜತೆ ಶಾಂತಿ ಒಪ್ಪಂದ ಮಾಡಿಕೊಂಡು ಚೇಂಬರ್‌ಲೇನ್ ಹಿಂದಿರುಗಿದ. ಬ್ರಿಟಿಷ್ ಮತ್ತು ಜಗತ್ತಿನೆಲ್ಲೆಡೆಯ ಶಾಂತಿಪರ ಶಕ್ತಿಗಳು ಚೇಂಬರ್‌ಲೇನ್ ವಿರುದ್ಧ ದನಿಯೆತ್ತಿದವು. ಆದರೆ ಶಾಂತಿಸ್ಥಾಪನೆ ಮಾಡಿದ್ದೇನೆ ಎನ್ನುವುದು ಪ್ರಧಾನಿಯ ನಿಲುವಾಗಿತ್ತು.'ಅವರನ್ನು ಹಿಂಬಾಲಿಸಿ, ಅವರಿಗೆ ಸ್ಫೂರ್ತಿ ಕೊಡಿ' ಎಂದು ಚೇಂಬರ್‌ಲೇನ್ ಬೆಂಬಲಿಗರು ಘೋಷಣೆ ಹಾಕಿದರು.

ಹೆರಾಲ್ಡ್ ಲಸ್ಕಿ ಸೇರಿದಂತೆ ಕನ್ಸರ್ವೇಟಿವ್ ಪಕ್ಷದ ಒಂದು ಭಾಗ ಚೇಂಬರ್‌ಲೇನ್ ಕಡೆ ಸೇರಿಕೊಂಡಿತು. ಚೇಂಬರ್‌ಲೇನ್ ಅವರ ಸಂತೃಪ್ತಿಪಡಿಸುವ ನೀತಿಯ ವಿರುದ್ಧ ಸಾರ್ವಜನಿಕ ಅಭಿಪ್ರಾಯ ರೂಪಿಸುವಲ್ಲಿ ಬ್ರಿಟನ್‌ನಲ್ಲಿನ ಭಾರತೀಯ ವಿದ್ಯಾರ್ಥಿಗಳು ದೊಡ್ಡ ಪಾತ್ರ ನಿರ್ವಹಿಸಿದರು. ಎಡ ಶಕ್ತಿಗಳ ಬಲವರ್ಧನೆಗಾಗಿ ಲಂಡನ್ ಮಜ್ಲಿಸ್ ಮೇಲಿಂದ ಮೇಲೆ ಸಭೆಗಳನ್ನು ನಡೆಸಿತು.

ಅಂತಿಮವಾಗಿ, 1939 ಸೆಪ್ಟೆಂಬರ್ 3 ರಂದು ಬ್ರಿಟನ್ ಕೂಡ ಯುದ್ಧವನ್ನು ಸಾರಿತು. ಎರಡನೇ ಮಹಾಯುದ್ಧದ ಗುಣಲಕ್ಷಣದ ಬಗ್ಗೆ ಬ್ರಿಟಿಷ್ ಕಮ್ಯುನಿಸ್ಟ್ ಪಕ್ಷದ ಒಳಗೆ ಭಿನ್ನಾಭಿಪ್ರಾಯ ಇರುವುದು ಆತನಿಗೆ ತಿಳಿಯಿತು.

ಮರಳಿ ಭಾರತಕ್ಕೆ

1939 ಡಿಸೆಂಬರ್‌ನಲ್ಲಿ ಅಂತಿಮ ಕಾನೂನು ಪರೀಕ್ಷೆಗೆ ನಾನು ಹಾಜರಾದೆ. ಆದರೆ ಫಲಿತಾಂಶಕ್ಕೆ ಕಾಯದೆ ಒಂದು ತಿಂಗಳೊಳಗೆ ಭಾರತಕ್ಕೆ ಮರಳಿ ಹೊರಟು ನಿಂತೆ. ನಾನು ಉತ್ತೀರ್ಣನಾಗಿದ್ದೇನೆ ಎಂದು ಊರಿನಲ್ಲಿ ನನಗೆ ತಿಳಿಸಲಾಯಿತು. ಬ್ರಿಟನ್ ಯುದ್ಧಕ್ಕೆ ಸಿದ್ಧವಾಗಿರಲಿಲ್ಲ. ಮತ್ತು ಹಿಟ್ಲರ್ ಮೊದಲು ಸೋವಿಯತ್ ಒಕ್ಕೂಟದ ಮೇಲೆ ದಾಳಿ ಮಾಡುತ್ತಾನೆ. ಬ್ರಿಟನ್ ಮೇಲೆ ಕೈ ಹಾಕುವುದಿಲ್ಲ ಎಂದು ಚೇಂಬರ್‌ಲೇನ್ ನಂಬಿದ್ದ ಎಂಬ ಮೂಲ ತಿಳುವಳಿಕೆ ಲಂಡನ್ ವಾಸ್ತವ್ಯದ ವೇಳೆ ನನ್ನ ಗಮನಕ್ಕೆ ಬಂತು.

ಹಿಟ್ಲರ್ ಬದಲು ಸೋವಿಯತ್ ಒಕ್ಕೂಟವನ್ನು ಮೊದಲ ವೈರಿ ಎಂದು ಚೇಂಬರ್‌ಲೇನ್ ಪರಿಗಣಿಸಿದ್ದ ಇಂಗ್ಲೆಂಡ್‌ನಲ್ಲಿ ಯುದ್ಧ ಸಿದ್ಧತೆ ಇರಲಿಲ್ಲ. ಚರ್ಚಿಲ್ ಪ್ರಧಾನಿಯಾದ ನಂತರವಷ್ಟೆ ರಕ್ಷಣಾ ಪಡೆಗಳ ಸಾಮರ್ಥ್ಯವನ್ನು ಹೆಚ್ಚಿಸಲಾಯಿತು ಹಾಗೂ ಆಧುನೀಕರಿಸಲಾಯಿತು. ಚರ್ಚಿಲ್ ಒಬ್ಬ ಕಟ್ಟಾ ಕಮ್ಯುನಿಸ್ಟ್ ವಿರೋಧಿಯಾಗಿದ್ದ. ಆದಾಗ್ಯೂ ಆತ ನಾಜಿ ಜರ್ಮನಿಯ ವಿರುದ್ಧವಾಗಿ ಸೋವಿಯತ್ ಒಕ್ಕೂಟದ ಜತೆ ಏಕೆ ಸಹಿ ಮಾಡಿದ ಎನ್ನುವುದು ಈ ಪುಸ್ತಕದ ವ್ಯಾಪ್ತಿಗೆ ಹೊರತಾದ ವಿಷಯವಾಗಿದೆ.

ನಾವು ಅಲ್ಲಿದ್ದಾಗಲೇ ಲಂಡನ್ ಮೇಲೆ ಹಿಟ್ಲರ್ ಬಾಂಬ್ ದಾಳಿ ಆರಂಭಿಸಿದ್ದ. ಮುನ್ನೆಚ್ಚರಿಕೆ ಕ್ರಮವಾಗಿ ನಾವು ಅನಿಲ ಮುಖವಾಡಗಳನ್ನು (Gas Mask) ಧರಿಸಬೇಕಾಗಿತ್ತು. ನಮ್ಮಲ್ಲಿ ಕೆಲವರು ಸಮುದ್ರ ಮಾರ್ಗವಾಗಿ ಭಾರತಕ್ಕೆ ಬರಲು ಹೊರಟೆವು. ಆದರೆ ಹಿಟ್ಲರ್‌ನ ನಾಜಿ ಪಡೆ ಟಾರ್ಪೆಡೋಗಳ ಬಳಕೆ ಆರಂಭಿಸಿದ್ದರಿಂದ ಆ ಮಾರ್ಗವನ್ನು ಪ್ರಯಾಣಿಕರ ನೌಕಾಯಾನಕ್ಕೆ ಮುಚ್ಚಲಾಯಿತು. ಭೂಪೇಶ್ ಗುಪ್ತಾ ಇಂದಿರಾ ಗಾಂಧಿ ಮತ್ತು ಫಿರೋಜ್ ಗಾಂಧಿ ಲಂಡನ್‌ನಲ್ಲೇ ಉಳಿದರು. ಅವರು ಬಳಸು ಹಾದಿ ಮೂಲಕ ಭಾರತಕ್ಕೆ ಮರಳಿದರು.

(ಮುಂದುವರಿಯುವುದು)

ಕಾರ್ಲ್ ಮಾರ್ಕ್ಸ್ ತಮ್ಮ ಜೀವಿತದ ದೀರ್ಘ ಕಾಲವನ್ನು ಕಳೆದ ಲಂಡನ್‌ನ ಹ್ಯಾನಿಸ್ಟೆಡ್ ಹೆಲ್ತ್ ಪ್ರದೇಶದಲ್ಲಿ ಒಂದಲ್ಲ ಒಂದು ಪಕ್ಷದ ಸಭೆ ನಡೆಯುವುದು ಸಾಮಾನ್ಯವಾಗಿತ್ತು. ಒಂದು ದಿನ ಅಲ್ಲಿ ನಡೆಯುತ್ತಿದ್ದ ಫ್ಯಾಸಿಸ್ಟ್ ಪಕ್ಷದ ರ್‍ಯಾಲಿಯಲ್ಲಿ ಭಾರತವನ್ನು ಟೀಕಿಸಲಾಗುತ್ತಿತ್ತು. ಇದನ್ನು ತಡೆದುಕೊಳ್ಳಲಾಗದೆ ಭೂಪೇಶ್ ಮತ್ತು ನಾನು ನೇರವಾಗಿ ಆ ಭಾಷಣಕಾರನ ಬಳಿ ಹೋಗಿ, "ನಿಮ್ಮ ರಾಜಕೀಯದ ಬಗ್ಗೆ ಮಾತನಾಡುವ ಎಲ್ಲಾ ಹಕ್ಕು ನಿನಗಿದೆ. ಅದರಲ್ಲಿ ನಮ್ಮ ದೇಶವನ್ನು ಎಳೆದು ತುರುವ ಅಗತ್ಯವೇನಿದೆ?" ಎಂದು ಪ್ರಶ್ನಿಸಿದೆವು. ನೂರಾರು ಜನರು ನಮ್ಮನ್ನು ಬೆಂಬಲಿಸಿದರು. ನಾವು ಪ್ರಶ್ನೆಗಳನ್ನು ಕೇಳಬಹುದು, ಆದರೆ ಸಭೆ ಅಸ್ತವ್ಯಸ್ತವಾಗಲು ಅವಕಾಶಕೊಡಬಾರದು ಎಂದು ಪೋಲೀಸರು ನಮ್ಮನ್ನು ಎಚ್ಚರಿಸಿದರು.



ಮಾತೃಭಾಷೆಯಲ್ಲೇ ಶಿಕ್ಷಣ

ಜಿ.ಎನ್.ನಾಗರಾಜ್

ಮಗುವೊಂದು ಜಗತ್ತಿನ ಬಗ್ಗೆ ತಿಳಿದುಕೊಳ್ಳುವುದು, ಶಾಲೆಗೆ ಹೋಗುವ ಮೊದಲಿನ ಶಿಕ್ಷಣ ಪಡೆಯುವುದು ಮಾತೃಭಾಷೆಯಲ್ಲಿ; ಹತ್ತಾರು ಪ್ರಶ್ನೆಗಳನ್ನು ಕೇಳುತ್ತಾ ಕೇಳುತ್ತಾ ತಿಳಿದುಕೊಳ್ಳುವುದು ಮಾತೃಭಾಷೆಯಲ್ಲಿ. ಶಾಲೆಗೆ ಸೇರಿದ ಮೇಲೆ ಕೂಡ ಶಾಲೆಯ ಹೊರಗಿನ ಶಿಕ್ಷಣವೆಲ್ಲಾ ಪ್ರಮುಖವಾಗಿ ಮಾತೃಭಾಷೆಯಲ್ಲಿ ಅಥವಾ ತನ್ನ ಸುತ್ತಲಿನ ಪರಿಸರದ ಭಾಷೆಯಲ್ಲಿ ಮತ್ತು ಶಿಕ್ಷಣ-ಶಿಕ್ಷಣವೆಂದರೆ ಕೇವಲ ಶಾಲೆಯಲ್ಲಿ ಅರೆದು ಕುಡಿಯುವುದು ಮಾತ್ರ ಅಲ್ಲ. ಶಾಲೆಯ ಹೊರಗೆ ಕಲಿಯುವುದು ಅಪಾರ. ಹೀಗೆ ಮಾತೃಭಾಷೆ ಒಬ್ಬ ವ್ಯಕ್ತಿಯ ಶಿಕ್ಷಣದ, ಅವನ ವ್ಯಕ್ತಿತ್ವದ, ಸಾಮಾಜಿಕ ಸಂಬಂಧಗಳ ಜೀವಸೆಲೆ.

> **ಹೊಟ್ಟೆಗೂ ಹಾರಿಲ್ಲ; ಬಾಯಿಗೂ ಬಿಡುವಿಲ್ಲ;**
> **ಕೆಟ್ಟೆವಯ್ಯಾ ಈ ಬೆಟ್ಟಬಂಡೆಯ ನಂಬಿ;**
> **ಕೊಟ್ಟಕೊನೆಗೂ ಬರಿಯ ದಣಿವು ಬಾಯಾರಿಕೆ!**
> **ನಮ್ಮ ನುಡಿ-ಗೋಮಾತೆಯಾ ಮೆತ್ತಗೆಚ್ಚರಿಗೆ**
> **ಬಾಯಿಟ್ಟರಾಯ್ತು ಹೊಡೆತುಂಬೆ ನೊರೆಹಾಲಿರಲು**
> **ಏಕಯ್ಯ ಈ ಬರಡು ಪ್ರೂತನಿಯ ಹಾಲ್ಗೋರಿಕೆ?**
> **ಹೇ ಕೃಷ್ಣ, ಹೇ ಬಾಲಗೋಪಾಲ, ಕಂದಾ,**
> **ಹಾರುಹಾಡೆಮ್ಮನೀ ಇಂಗ್ಲೀಷಿನಿಂದ,**
> **ಪ್ರೂತನಿಯ ಅಸುವೀಂಟ ಕೊಂದ ಗೋವಿಂದ!**
>
> **- ಕುವೆಂಪು**

ಭಾಷೆಯೊಂದು ಕೇವಲ ಸಂವಹನ ಮಾಧ್ಯಮ ಮಾತ್ರವಲ್ಲ. ಅದೊಂದು ಸಂಸ್ಕೃತಿಯ ಆಧಾರವಾದ ನೆಲೆಗಟ್ಟು. ಸಾವಿರಾರು ವರ್ಷಗಳ ಸಾಮಾಜಿಕ ಚಿಂತನೆಯ, ವಾದ-ವಿವಾದ- ಸಂವಾದಗಳ ವಾಹಕ. ಹೀಗಾಗಿ ಜನಪದ ಮೊಂದರ ಇತಿಹಾಸದ ಅರಿವು ಭಾಷೆ ಯೊಂದರಲ್ಲಿ ಮೂಡಿ ರುವ ಕೃತಿಗಳಲ್ಲಿ ಕಣ್ಣಿಗೆ ಕಟ್ಟುವಂತಿರುತ್ತದೆ. ಆದ್ದರಿಂದ ಮಾತೃ ಭಾಷೆಯ ಮೂಲಕವೇ ಶಿಕ್ಷಣ ಎಂಬುದು ಒಂದು ಸಂಸ್ಕೃತಿಯ ಸಾರವನ್ನು ಮೈಗೂಡಿಸಿಕೊಳ್ಳಲು ಒಂದು ಪ್ರಾಥಮಿಕ ಅವಶ್ಯಕತೆ. ಆ ಮೂಲಕ ಮಾತ್ರವೇ ಸಂಸ್ಕೃತಿಯ ಬೆಳವಣಿಗೆ ಮತ್ತು ಅದರ ಮೂಲ ಆಧಾರವಾದ ಜನರ ಬೆಳವಣಿಗೆ. ಭಾಷೆ ಮಾಧ್ಯಮ ಪರಕೀಯವಾದಂತೆ ಭಾಷೆಯನ್ನು ಕಲಿಯುವ ಅದರಲ್ಲಿ ಪ್ರೌಢಿಮೆಯನ್ನು ಸಾಧಿಸುವ ಧಾವಂತವೇ ಹೆಚ್ಚಾಗಿ ವಿಷಯಗಳ ಸಾರದ ಗ್ರಹಣ ಹಿಂದೆ ಬೀಳುತ್ತದೆ. ಮಾತೃಭಾಷೆಯಲ್ಲಿ ರೂಪುಗೊಂಡ ಶಕ್ತಿ, ವಿಚಾರಶಕ್ತಿ ಮೊಟಕುಗೊಳ್ಳುತ್ತದೆ. ವಿಚಾರಶಕ್ತಿ ಗರಿಬಿಚ್ಚಿ ಹಾರಾಡದೆ ಹೊಸ ವಿಚಾರಗಳು ಮೊಳೆಯುವುದಿಲ್ಲ. ಕೇವಲ ಅನುಕರಣೆಯೇ ಪ್ರಧಾನವಾಗಿರುತ್ತದೆ.

ಇನ್ನೂ ಬಹಳ ಜನರಲ್ಲಿ ಮುಖ್ಯವಾಗಿ ಸಮಾಜದ ಕೆಳ ವರ್ಗಗಳಿಂದ ಬಂದ ಅವಕಾಶವಂಚಿತರಲ್ಲಿ ಕೀಳರಿಮೆಯನ್ನು ಮೂಡಿಸುತ್ತದೆ. ವಾಕ್ಯಗಳನ್ನು ರಚಿಸುವುದಕ್ಕಾಗಿ ಪರದಾಡುತ್ತಾ ಪ್ರಶ್ನಿಸುವುದನ್ನೇ, ಅರಿವಿನ ದಾರಿಯನ್ನೇ ಮುಚ್ಚಿಬಿಡುತ್ತದೆ. ಆಳುವ ವರ್ಗಕ್ಕೆ ಅವರ ಸಂಸ್ಥೆ, ವ್ಯವಹಾರಗಳನ್ನು ತೂಗಿಸುವ ಅಡಿಯಾಳುಗಳನ್ನು, ಕಾರಕೂನರನ್ನು ಸೃಷ್ಟಿಸುತ್ತದೆ.

ಪರಭಾಷಾ ಮಾಧ್ಯಮದ ಮೂಲಕ ಕಲಿತವರಲ್ಲಿ ಪರಕೀಯತೆಯನ್ನು, ಮೇಲುಗಾರಿಕೆಯನ್ನು ಸೃಷ್ಟಿಸುತ್ತದೆ. ಆಳುವ ವರ್ಗದ ಆಡಳಿತ ಯಂತ್ರವನ್ನು ಜನದೂರವಾಗಿಸುತ್ತದೆ. ಜನರೊಂದಿಗೆ ಸಂಪರ್ಕ, ಮಾನವೀಯ ಮಿಡಿತಗಳನ್ನು ಅಳಿಸುತ್ತದೆ. ಈ ಶಿಕ್ಷಣ ಪಡೆದ ದುಡಿಯುವ ವರ್ಗದ ಜನರನ್ನು ಜನಸಮುದಾಯದಿಂದ ದೂರಮಾಡಿ ಆಳುವ ವರ್ಗದ ಬಾಲಂಗೋಚಿಯಾಗಿಸುವ ಸಾಧನವಾಗಿಸುತ್ತದೆ. ಹಿಂದೆ ಸಂಸ್ಕೃತ, ಸಂಸ್ಕೃತದ ಪದಗಳಿಂದ ತುಂಬಿದ ದೇಸೀಭಾಷೆಗಳು ಅದರ ಗಡಸು ಶೈಲಿಗಳು ಈ ಕೆಲಸ ನಿರ್ವಹಿಸಿದರೆ ವಸಾಹತುಶಾಹಿಯ ಕಾಲದಲ್ಲಿ ಇಂಗ್ಲಿಷ್ ಈ ಕುಕೃತ್ಯದ ಸಾಧನವಾಯಿತು. ಅದನ್ನು ಅನುಭವಿಸಿದ ಭಾರತೀಯ ಜನ ಸಾಮಾನ್ಯರು ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ದೇಶಿ ಭಾಷೆಗಳ ಬೆಳವಣಿಗೆಗಾಗಿ, ದೇಶೀ ಭಾಷೆಗಳ ಮೂಲಕ, ತಾಯ್ನುಡಿಯ ಮೂಲಕ ಶಿಕ್ಷಣಕ್ಕಾಗಿ ದನಿಯೆತ್ತಿದರು. ಗಾಂಧೀಜಿಯವರು ಈ ಸ್ವಾತಂತ್ರ್ಯ ಚಳುವಳಿಯ ಆಶಯವನ್ನು ಚೆನ್ನಾಗಿ ಬಿಂಬಿಸಿದ್ದಾರೆ.

ಸ್ವಾತಂತ್ರ್ಯಾನಂತರ ಮಾತೃಭಾಷೆಯ ಮೂಲಕವೇ ಶಿಕ್ಷಣ ಎನ್ನುವುದು ಶಿಕ್ಷಣ ವ್ಯವಸ್ಥೆಯ ವಿಸ್ತಾರದೊಂದಿಗೆ ಬಹುಮಟ್ಟಿಗೆ ಕೆಳ ಹಂತಗಳಲ್ಲಿ ಸಾಧ್ಯ ವಾಯಿತು. ಆದರೆ ಸ್ವತಂತ್ರ ಭಾರತದ ಆಳುವ ವರ್ಗ ಇಂಗ್ಲಿಷ್ ಮುಂದುವರಿಕೆ, ಹಿಂದಿ ಹೇರಿಕೆಗಳ ಮೂಲಕ ಜನ ಸಮುದಾಯ ವೈಚಾರಿಕ ಬೆಳವಣಿಗೆಯನ್ನು ತಡೆಯಲು ನಿರಂತರ ಪ್ರಯತ್ನ ನಡೆಸಿದ್ದಾರೆ. ಈ ಬಗ್ಗೆ ಸಾಕಷ್ಟು ಚರ್ಚೆ ಯಾಗಿದ್ದರೂ ಆಡಳಿತದಲ್ಲಿ ಮುಖ್ಯವಾಗಿ ಕಾರ್ಯಾಂಗ, ನ್ಯಾಯಾಂಗಗಳಲ್ಲಿ ಇಡೀ ದೇಶಾದ್ಯಂತ ಶಾಸಕಾಂಗದಲ್ಲಿ-ರಾಷ್ಟ್ರ ಮಟ್ಟದಲ್ಲಿ ದೇಶಿಭಾಷೆಗಳ ಉಪಯೋಗಕ್ಕೆ ಹೆಜ್ಜೆ ಹೆಜ್ಜೆಗೂ ಆತಂಕವೊಡ್ಡುತ್ತಾ ತಮ್ಮ ವರ್ಗಹಿತಗಳನ್ನು ಸಂರಕ್ಷಿಸಿಕೊಳ್ಳುತ್ತಿದ್ದಾರೆ.

ಇದರ ಭಾಗವಾಗಿ ಶಿಕ್ಷಣದ ಮೇಲುಹಂತಗಳಲ್ಲಿ ತಾಂತ್ರಿಕ ಮತ್ತಿತರ ಉದ್ಯೋಗ ಸಂಬಂಧಿ ಶಿಕ್ಷಣದಲ್ಲಿ ಇಂಗ್ಲಿಷ್ ಪ್ರಧಾನವಾಗಿರುವ ದೆಸೆಯಿಂದಾಗಿ ಪ್ರಾಥಮಿಕ ಹಂತಗಳಲ್ಲಿಯೂ ಇಂಗ್ಲಿಷ್ ಮಾಧ್ಯಮಕ್ಕೆ ಸಾಮಾನ್ಯ ಜನರೂ ಹಾತೊರೆಯುವಂತಾಗಿದೆ.

ಜಾಗತೀಕರಣ, ಖಾಸಗೀಕರಣಗಳ ಹಾವಳಿ ಪ್ರಾರಂಭವಾದ ಮೇಲೆ ಈ ಪ್ರವೃತ್ತಿ ಒಂದು ಪ್ರವಾಹದಂತಾಗಿದೆ. ವಿವಿಧ ಟಿ.ವಿ. ಚಾನೆಲ್‌ಗಳು, ಪತ್ರಿಕೆಗಳು ಇಂತಹ ಮೋಹವನ್ನು ಒಂದು ಸಾಂಕ್ರಾಮಿಕ ರೋಗವನ್ನಾಗಿ ಮಾರ್ಪಡಿಸುತ್ತಿದ್ದಾರೆ. ನಮ್ಮದೇ ದೇಶದ ಖಾಸಗಿ ಕಂಪನಿಗಳಲ್ಲಿ, ಬಹುರಾಷ್ಟ್ರೀಯ ಕಂಪನಿಗಳಲ್ಲಿ ಉದ್ಯೋಗದ ಬಾಗಿಲನ್ನು ತಟ್ಟುವುದು ಕೂಡ ಇಂಗ್ಲಿಷ್ ಮೂಲಕವೇ ಎಂಬ ಭಾವನೆಯನ್ನು ಪ್ರಬಲವಾಗಿ ಮೂಡಿಸಲಾಗಿದೆ.

ಇಂತಹ ಸಂದರ್ಭದಲ್ಲಿ ಮಾತೃಭಾಷೆಯನ್ನು ಭಾಷಾ ಮಾಧ್ಯಮವನ್ನಾಗಿ ಬಳಸಿಕೊಳ್ಳುವುದು, ವಿಸ್ತರಿಸುವುದು ಪ್ರಜಾಸತ್ತಾತ್ಮಕ ಚಳುವಳಿಗೆ ಬಹಳ ಅಗತ್ಯವಾಗಿದೆ. ಮಾತೃಭಾಷೆ ಅಥವಾ ವಿವಿಧ ದೇಶಭಾಷಾ ಮಾಧ್ಯಮಕ್ಕಾಗಿ ಹೋರಾಡುವುದು ಇಂದು ಜಾಗತೀಕರಣದ ವಿರುದ್ಧದ ಹೋರಾಟದ ಭಾಗವಾಗಬೇಕು. ಭಾರತದ ಆಳುವವರ್ಗದ ವಿರುದ್ಧದ ಕಹಳೆಯಾಗಬೇಕು. ○


ಸಂಸತ್ತಿನಲ್ಲಿ ಮತ್ತು ಕೇಂದ್ರದ ಆಡಳಿತದಲ್ಲಿ ಎಲ್ಲಾ ರಾಷ್ಟ್ರೀಯ ಭಾಷೆಗಳ ಸಮಾನತೆಯನ್ನು ಮಾನ್ಯ ಮಾಡಲಾಗುತ್ತದೆ. ಸಂಸತ್ತಿನ ಸದಸ್ಯರು ಯಾವ ರಾಷ್ಟ್ರೀಯ ಭಾಷೆಯಲ್ಲಾದರೂ ಮಾತನಾಡುವ ಹಕ್ಕು ಪಡೆದಿರುತ್ತಾರೆ. ಅದೇ ವೇಳೆಯಲ್ಲಿಯೇ ಇತರ ರಾಷ್ಟ್ರೀಯ ಭಾಷೆಗಳಲ್ಲಿ ಅನುವಾದವನ್ನು ಒದಗಿಸಲಾಗುತ್ತದೆ. ಎಲ್ಲಾ ಕಾಯಿದೆಗಳು, ಸರ್ಕಾರಿ ಆದೇಶಗಳು ಮತ್ತು ನಿರ್ಣಯಗಳನ್ನು ಎಲ್ಲಾ ರಾಷ್ಟ್ರೀಯ ಭಾಷೆಗಳಲ್ಲೂ ಒದಗಿಸಲಾಗುತ್ತದೆ. ಆಡಳಿತ ಭಾಷೆಯಾಗಿ ಹಿಂದಿಯ ಬಳಕೆಯನ್ನು ಒತ್ತಾಯಿಸುವುದಿಲ್ಲ. ಬೆಳೆಯುತ್ತಿರುವ ಸಾಮಾಜಿಕ ಮತ್ತು ಬೌದ್ಧಿಕ ಸಂಪರ್ಕಗಳಲ್ಲಿ ಭಾರತದ ವಿವಿಧ ರಾಜ್ಯಗಳ ಜನರು ಬಳಕೆಯಿಂದ ತಮ್ಮ ಅಗತ್ಯಗಳಿಗೆ ಸೂಕ್ತವಾದ ಪರಸ್ಪರ ಸಂಪರ್ಕದ ಭಾಷೆಯನ್ನು ಅಭಿವೃದ್ಧಿಪಡಿಸಿಕೊಳ್ಳುತ್ತಾರೆ. ಆಡಳಿತ, ಶಾಸಕಾಂಗ, ನ್ಯಾಯಾಂಗ ಮತ್ತು ಶಿಕ್ಷಣ ಮಾಧ್ಯಮದಲ್ಲಿ ಇಂಗ್ಲೀಷಿನ ಬಳಕೆಯನ್ನು ಕೈಬಿಡಲಾಗುತ್ತದೆ ಮತ್ತು ಅದರ ಸ್ಥಾನದಲ್ಲಿ ರಾಷ್ಟ್ರೀಯ ಭಾಷೆಗಳು ಬರುತ್ತವೆ. ಶಿಕ್ಷಣ ಸಂಸ್ಥೆಗಳಲ್ಲಿ ಜನರು ತಮ್ಮ ತಾಯ್ನುಡಿಯಲ್ಲಿ ಶಿಕ್ಷಣ ಪಡೆಯುವ ಹಕ್ಕು; ಎಲ್ಲಾ ಸಾರ್ವಜನಿಕ ಮತ್ತು ರಾಜ್ಯ ಸಂಸ್ಥೆಗಳ ಆಡಳಿತದಲ್ಲಿ ಆಯಾ ಭಾಷಾ ರಾಜ್ಯದ ರಾಷ್ಟ್ರೀಯ ಭಾಷೆಯ ಬಳಕೆ; ಅತ್ಯುನ್ನತ ಮಟ್ಟದವರೆಗೆ ಅದನ್ನೇ ಶಿಕ್ಷಣ ಮಾಧ್ಯಮವನ್ನಾಗಿ ಬಳಸುವುದು; ರಾಜ್ಯದ ಭಾಷೆಯೊಂದಿಗೆ ಅಗತ್ಯವಿರುವ ಕಡೆ ಅಲ್ಪಸಂಖ್ಯಾತರ ಅಥವಾ ಪ್ರಾದೇಶಿಕ ಭಾಷೆಯನ್ನೂ ಬಳಸುವ ಅವಕಾಶ - ಇವುಗಳನ್ನು ಅನುಷ್ಠಾನಕ್ಕೆ ತರಲಾಗುತ್ತದೆ. ಉರ್ದುಭಾಷೆ ಮತ್ತು ಲಿಪಿಯನ್ನು ರಕ್ಷಿಸಲಾಗುತ್ತದೆ.

- ಸಿಪಿಐ(ಎಂ) ಕಾರ್ಯಕ್ರಮದಿಂದ

ಇದು ಭಾರತದಲ್ಲಿ ಸಮಾಜವಾದ ಕಟ್ಟುವ ಗುರಿಸಾಧನೆಯ ನಿಟ್ಟಿನಲ್ಲಿ ಜನತಾಪ್ರಜಾಪ್ರಭುತ್ವದ ಸ್ಥಾಪನೆ ತಕ್ಷಣದ ಗುರಿಯೆಂಬ ತೀರ್ಮಾನಕ್ಕೆ ಬಂದು 1964 ರಲ್ಲಿ ಭಾರತದ ಜನತೆಯ ಮುಂದಿಟ್ಟ ಕಾರ್ಯಕ್ರಮ. ಈ ಜನತಾಪ್ರಜಾಪ್ರಭುತ್ವ ಸರಕಾರ ಏನು ಮಾಡಬೇಕೆಂದಿದೆ ಎಂಬುದನ್ನು ಈ ಕಾರ್ಯಕ್ರಮದ 88ನೇ ಪರಿಚ್ಛೇದದ 20 ಅಂಶಗಳಲ್ಲಿ ನಮೂದಿಸಲಾಗಿದೆ. ಅದರಲ್ಲಿ ಮೇಲಿನದು 6ನೇ ಅಂಶ.

ಚಂಪಾ ಎಂದೇ ಜನಪ್ರಿಯರಾದ ಚಂದ್ರಶೇಖರ ಪಾಟೀಲರು ಮಾತೃಭಾಷೆ ಭಾಷಾ ಮಾಧ್ಯಮದ ಅನುಷ್ಠಾನಕ್ಕಾಗಿ ಗಟ್ಟಿಯಾದ ದನಿಯೆತ್ತಿದ್ದಾರೆ. ಅದರ ಅನು ... ಶ್ರಮಿಸುತ್ತಿದ್ದಾರೆ. ಈಗಾಗಲೇ ಖಾಸಗಿ ಶಾಲೆಗಳ ಆಡಳಿತ ವರ್ಗಗಳು ಈ ... ವಿರುದ್ಧ ಕಿರುಚಾಡಲು ಆರಂಭಿಸಿದ್ದಾರೆ. ಆದರೆ ಪ್ರಗತಿಪರ ಸಾಹಿತಿಯಾಗಿ, ಬಂಡಾಯ ... ಚಳುವಳಿಯ ಪ್ರಮುಖ ನೇತಾರರಾಗಿ ಹಲವು ಹೋರಾಟಗಳ ಕಲಿ ವಿರೋಧಕ್ಕೆ ... ಹಲವು ಪ್ರಶ್ನೆಗಳನ್ನೆತ್ತಿ ನಿರಂತರ ಹೋರಾಟ ಮಾಡಿದ್ದಾರೆ. ಕೋಮುವಾದಿಗಳ ... ಚಂಪಾ ಎಂದರೆ ಸಾಕು ಕಾಳಗಕ್ಕೆ ಆಹ್ವಾನ ಎಂದೇ ಅರ್ಥ. ಈ ಭಾಷಾ ಮಾ... ಪ್ರಶ್ನೆಯನ್ನು ಎತ್ತಿಕೊಂಡು ದುಡಿಯುವ ಜನ ಸಮುದಾಯದ ಹಿತ ರಕ್ಷಣೆಗಾಗಿ ದುಡಿಯ... ಚಂಪಾರವರನ್ನು ದುಡಿಯುವ ಜನರ ಪ್ರಾಣಮಿತ್ರ ಐಕ್ಯರಂಗ ಸಂದರ್ಶಿಸಿತು.

ಚಂದ್ರಶೇಖರ ಪಾ...



ಕನ್ನಡ ಅಭಿವೃದ್ಧಿಪ್ರಾಧಿಕಾರ ಭಾಷಾ ಮಾಧ್ಯಮವನ್ನು ಪ್ರಮುಖ ಪ್ರಶ್ನೆಯಾಗಿ ತಗೊಂಡಿದೆ ಎಂದನಿಸುತ್ತದೆ. ಇದರ ಹಿನ್ನೆಲೆ ಏನು?

ಚಂ.ಪಾ.: ಶೈಕ್ಷಣಿಕ ರಂಗದಲ್ಲಿ ಕನ್ನಡಕ್ಕೆ ಆದ್ಯತೆ ನೀಡಬೇಕು ಎಂಬ ಆಶಯ ಹೆಚ್.ನರಸಿಂಹಯ್ಯನವರು ಪ್ರಾಧಿಕಾರದ ಅಧ್ಯಕ್ಷರಾಗಿದ್ದಾಗಲೇ ಮೂಡಿತ್ತು. ಸರಕಾರಕ್ಕೆ ಪತ್ರ ಬರೆದು ಶಿಕ್ಷಣ ಮಾಧ್ಯಮದ ವಿಷಯವನ್ನು ಕನ್ನಡ ಪ್ರಾಧಿಕಾರಕ್ಕೆ ವಹಿಸಬೇಕೆಂದು ಕೇಳಿಕೊಂಡಿದ್ದರು. ಅಧ್ಯಕ್ಷನಾದ ಮೇಲೆ ಅದು ಪ್ರಾಧಿಕಾರದ ಆಳವಿಗೆ ಬಂತು. 1992 ರಲ್ಲೇ ಪ್ರಾಧಿಕಾರಕ್ಕೆ ವಹಿಸಿದ ಜವಾಬ್ದಾರಿಯೆಂದರೆ ಆಡಳಿತದಲ್ಲಿ ಕನ್ನಡ ಮತ್ತು ಉದ್ಯೋಗದಲ್ಲಿ ಕನ್ನಡಿಗರಿಗೆ ಆದ್ಯತೆ. ಆದರೆ ಶಿಕ್ಷಣದಲ್ಲಿ ಕನ್ನಡ ಇರಲಿಲ್ಲಂತಂದ್ರೆ ಈ ಎರಡೂ ಆಶಯಗಳೂ ಬರವು. ಉದ್ಯೋಗದಲ್ಲಿ ಕನ್ನಡ, ಆಡಳಿತದಲ್ಲಿ ಕನ್ನಡ - ಇವೆರಡಕ್ಕೂ ಮೂಲ ಅಂತಂದ್ರೆ ಶಿಕ್ಷಣದಲ್ಲಿ ಕನ್ನಡ. ಶಿಕ್ಷಣ ತಜ್ಞರ ಒಂದು ಸಮಾವೇಶ ಮಾಡಿ ನಮ್ಮ ಶಿಕ್ಷಣದಲ್ಲಿನ ನ್ಯೂನ್ಯತೆಗಳ ಬಗ್ಗೆ ಚರ್ಚೆ ಮಾಡಿದ್ದೇವೆ. (ಶಿಕ್ಷಣ) ಸಚಿವರು ಒಂದು ಸೂಚನೆ ಕೊಟ್ಟರು. ಶಿಕ್ಷಣ ತಜ್ಞರ ಒಂದು ಸಲಹಾ ಸಮಿತಿ ಮಾಡಬೇಕು ಎಂದು. ಈ ಸಲಹಾ ಸಮಿತಿ ಒಂದು ಮಧ್ಯಂತರ ವರದಿ ಕೊಟ್ಟಿದೆ. ಪ್ರಾಥಮಿಕ ಶಿಕ್ಷಣ ಮಾಧ್ಯಮಿಕ ಶಿಕ್ಷಣ ಮತ್ತು ಉಚ್ಚ ಶಿಕ್ಷಣದಲ್ಲೂ ಕನ್ನಡ ಶಿಕ್ಷಣ ಮಾಧ್ಯಮವಾಗಬೇಕೆಂಬುದು ಸರಕಾರದ ದೂರಗಾಮಿ ನೀತಿಯಾಗಬೇಕು. ಘೋಷಿತ ನೀತಿಯಾಗಬೇಕು. ಆದರೆ ಈ ಮಧ್ಯಂತರ ವರದಿ ಸದ್ಯಕ್ಕೆ ಪ್ರಾಥಮಿಕ ಹಂತದವರೆಗೆ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆ ಶಿಕ್ಷಣ ಮಾಧ್ಯಮವಾಗಬೇಕು ಎಂದು ಶಿಫಾರಸು ಮಾಡಿತು. ಸುಪ್ರೀಂ ಕೋರ್ಟ್ ಕೂಡಾ ಈಗಾಗಲೇ ಇಂತಹ ತೀರ್ಪು ಕೊಟ್ಟಿದೆ. ಪ್ರಾಥಮಿಕ ಶಿಕ್ಷಣ ಎಂದರೆ ನಿಜವಾಗಿ 1 ರಿಂದ 7ನೇ ಇಯತ್ತೆಯುವರೆಗೆ. ಬೇರೆ ರಾಜ್ಯಗಳಲ್ಲಿ ಹಾಗಿದೆ. ಆದರೆ ಕರ್ನಾಟಕದಲ್ಲಿ ಈಗ ಪ್ರಾಥಮಿಕ ಶಿಕ್ಷಣ ಅಂದರೆ 1 ರಿಂದ 4ನೇ ಇಯತ್ತೆ. ಇದು ಕೃತ್ರಿಮ ವಿಂಗಡಣೆ, ಅವೈಜ... ಹಾಗೂ ಅಶೈಕ್ಷಣಿಕ. 1ರಿಂದ 4ನೇ ಇಯತ್ತೆವರೆಗೆ ... ಮಾಧ್ಯಮ ಮಾತೃಭಾಷೆ ಅಥವಾ ಕನ್ನಡ ಆಗಿರಬೇಕೆಂ... ಸರಕಾರ ಈಗಾಗಲೇ ಅಂಗೀಕರಿಸಿರುವ ನೀತಿ. ಇದನ್ನು ... ಏಳನೇ ಇಯತ್ತೆವರೆಗೆ ವಿಸ್ತರಿಸಬೇಕೆಂದು ಶಿಫಾ... ಮಾಡಿದ್ದೇವೆ.

● ಸರಕಾರದ ಈ ಅಂಗೀಕೃತ ನೀತಿ ಅಂದರೆ 1 ರಿಂದ ... ತರಗತಿವರೆಗೆ ಶಿಕ್ಷಣ ಮಾಧ್ಯಮದ ನೀತಿ ಜಾರಿಯಾಗಿದ...

ಚಂ.ಪಾ.: ಆ ವೇಳೆಗೆ ಖಾಸಗಿ ಶಿಕ್ಷಣ ಸಂಸ್ಥೆಗಳು ಮಾರ... ಬಂದಿದ್ದವು. ಇವಕ್ಕೆ ಇಂಗ್ಲೀಷ್ ಮೋಹವೂ ಇಲ್ಲ, ಕ... ಮೇಲೆ ದ್ವೇಷವೂ ಇಲ್ಲ. ಸಮಾಜದಲ್ಲಿರುವ ಇಂಗ... ವ್ಯಾಮೋಹವನ್ನು ಕ್ಯಾಶ್ ಮಾಡಿಕೊಳ್ಳುತ್ತಿವೆಯಷ್ಟೆ. 1... 4ನೇ ಇಯತ್ತೆವರೆಗೆ ಕನ್ನಡ ಮಾಧ್ಯಮ ಅನುಸರಿಸುತ್ತಿರುವ... ಮುಚ್ಚಳಿಕೆ ಬರೆದು ಕೊಡುತ್ತಾರೆ. 5ರ ನಂತರ ಇಂ... ಮಾಧ್ಯಮಕ್ಕೆ ಪರವಾನಿಗೆ ಪಡೆದುಕೊಳ್ತಾರೆ. 1 ... 4ರವರೆಗೂ ಅಕ್ರಮವಾಗಿ ಇಂಗ್ಲೀಷ್ ಮಾಧ್ಯಮ ... ಇಯತ್ತೆಯಿಂದ ಸಕ್ರಮ ಮಾಡಿಕೊಳ್ತಾರೆ. ಇದನ್ನು ತಡೆ... ಪ್ರಾಧಿಕಾರ ಮಾಡಿರುವ ಶಿಫಾರಸನ್ನು ಒಪ್ಪಿಕೊ... ಸಾಧ್ಯವಾಗುತ್ತದೆ. ಜೊತೆಗೆ ಮಾಧ್ಯಮ ಅನು... ಆಂದೋಲನವನ್ನು ಆರಂಭ ಮಾಡಬೇಕ... ಕೇಳಿಕೊಂಡಿದ್ದೇವೆ. ಎಲ್ಲಾ ಮಟ್ಟಗಳಲ್ಲಿ ಈಗ... ರಚಿಸಿರುವ ಕನ್ನಡ ಜಾಗೃತಿ ಸಮಿತಿಗಳ ನೆರವಿನಿಂದ ... ಜಾರಿ ಮಾಡಲು ಪ್ರಯತ್ನಿಸುತ್ತೇವೆ. ಈ ಸಮಿತಿ... ಶಿಕ್ಷಣಾಧಿಕಾರಿಗಳು ಇದ್ದಾರೆ.

● ಈಗಾಗಲೇ ಪ್ರಾಥಮಿಕ ೪ನೇ ವರ್ಷದವರೆಗೆ ಮಾತೃ... ಮಾಧ್ಯಮ ಎಂದು ಸರ್ಕಾರ ಅಂಗೀಕರಿಸಿರುವ ನೀ... ಅನುಷ್ಠಾನದಲ್ಲಿ ಇಲಾಖೆ ಆಸಕ್ತಿ ತೋರಿಸುತ್ತಿಲ್ಲವೇ?


ಚಂ.ಪಾ.: ಬಹುತೇಕ ಅಧಿಕಾರಿಗಳು ಶಾಮೀಲಾಗಿ... ಶಾಲೆಗಳಲ್ಲಿ ಕನ್ನಡದ ಪುಸ್ತಕಗಳ ಒಂದು ... ಇಟ್ಟುಕೊಂಡಿರುತ್ತಾರೆ. ಅದನ್ನು ಶಿಕ್ಷಣ ಅಧಿಕಾ... ತೋರಿಸುತ್ತಾರೆ. ಆದರೆ ಅದನ್ನು ಬಳಸುವುದೇ ಇಲ್ಲವಾ... ಅವು ಹೊಸದಾಗಿರುತ್ತವೆ. ಇವರು (ಶಿಕ್ಷಣಾಧಿಕಾ... ಬಂದಾಗ ಕನ್ನಡದಲ್ಲಿ ಪಾಠ ಮಾಡ್ತಾರೆ. ಆಚೆ ಹ... ಮೇಲೆ ಮತ್ತೆ ಇಂಗ್ಲೀಷ್‌ನಲ್ಲಿ . ಅಂದರೆ ಈ ನಿ... ಉಲ್ಲಂಘನೆಯಲ್ಲಿ ಇವರೂ ಪಾಲುಗೊಂಡಿದ್ದಾರೆ.

● ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹೇಗೆ ಅನುಷ್ಠಾನ ಮಾ... ಸಾಧ್ಯ?

ಚಂ.ಪಾ: 5ನೇ ಇಯತ್ತೆಗೆ ಪರವಾನಿಗೆ ನೀಡುವ ಆದೇ... ಖಾಸಗಿ ಶಾಲೆಗಳವರು ಪಡೀಬೇಕಾಗ್ತದೆ. ಇದರಲ್ಲಿ ... ಕರಾರುಗಳಿವೆ. ಶಿಕ್ಷಣಾಧಿಕಾರಿಗಳ ಜೊತೆಗೆ ಕನ್ನಡ ಅ... ಪ್ರಾಧಿಕಾರವೂ ಮಾಧ್ಯಮದ ವಿಷಯದಲ್ಲಿ ಪರವಾ... ಶರತ್ತುಗಳ ಪಾಲನೆಯನ್ನು ತನಿಖೆ ಮಾಡಬಹು... ನಮೂದಿಸಲಾಗಿದೆ.

ಈ ರೀತಿ ಪ್ರಾಧಿಕಾರ ತನ್ನ ಅಧಿಕಾರ ಚಲಾ... ಭೂಮಿಕೆಯನ್ನು ತಯಾರು ಮಾಡಿದ್ದೇವೆ. 1990 ರ ಮ...

ಶಿಕ್ಷಣ ಮಾಧ್ಯಮವಾಗಿ ಮಾತೃಭಾಷೆ/ಪ್ರಾದೇಶಿಕ ಭಾಷೆಯೇ ಸೂಕ್ತ



ಖಾಸಗಿ ಶಾಲೆಗಳಿಗೆ ಸಂಬಂಧಪಟ್ಟಂತೆ ಸ್ವಲ್ಪ ಕಾನೂನು ತೊಡಕು ಇದೆ. ಸುಪ್ರೀಂಕೋರ್ಟ್ ಈ ಸಂಬಂಧ ಅರ್ಜಿಗಳ ವಿಲೇವಾರಿ ಮಾಡುವುದನ್ನು ಕಾಯುತ್ತಿದ್ದೇವೆ.

● ಸ್ವಾತಂತ್ರ್ಯದ ಆರಂಭದಿಂದಲೇ ಶಿಕ್ಷಣ ಮಾಧ್ಯಮ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯಾಗಿರಬೇಕೆಂಬ ಬಗ್ಗೆ ಒತ್ತು ಕೊಟ್ಟಿದ್ದರೂ, ಕುವೆಂಪುರವರ ಕಾಲದಿಂದಲೂ ಈ ಬಗ್ಗೆ ಹೇಳುತ್ತಿದ್ದರೂ ಈವರೆಗೂ ಏನೂ ಆಗಿಲ್ಲ.

ಚಂ.ಪಾ.: ಹೌದು. ಕುವೆಂಪು ಎಂ.ಎ. ವರೆಗೂ ಕನ್ನಡದಲ್ಲಿ ಶಿಕ್ಷಣ ಕೊಡಬೇಕು ಎಂದಿದ್ದರು. ಅವರು ಉಪಕುಲಪತಿಗಳಾಗಿದ್ದಾಗ ಪ್ರಯತ್ನವನ್ನೂ ಮಾಡಿದ್ದರು. ಆ ಪ್ರಯತ್ನ ಅಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲೂ ಮುಂದುವರೆಯಲಿಲ್ಲ.

● ಅಂದರೆ ಇದಕ್ಕೆ ಸೂಕ್ತ ಪರಿಸರ ನಿರ್ಮಾಣ ಬಹಳ ಮುಖ್ಯ.

ಚಂ.ಪಾ: ಹೌದು, ಸರಕಾರ, ಪ್ರಾಧಿಕಾರ ಜತೆಗೆ ಜನಪರ ಸಂಘಟನೆಗಳು, ಪತ್ರಿಕೆಗಳು ಇದರಲ್ಲಿ ದೊಡ್ಡ ಪಾತ್ರ ವಹಿಸಬೇಕು.

● ಈ ಯೋಜನೆ ಮಾಡ್ತಾ ಇರುವ ಸಂದರ್ಭದಲ್ಲೇ ಇದಕ್ಕೆ ದೊಡ್ಡ ಅಡ್ಡಿಗಳನ್ನು ಗಮನಿಸಬೇಕು. ಮುಖ್ಯವಾಗಿ ಹೊಸ ಆರ್ಥಿಕ ನೀತಿ, ಜಾಗತೀಕರಣ, ಖಾಸಗೀಕರಣ, ಉದಾರೀಕರಣದ ವಾತಾವರಣದಲ್ಲಿ ಇಂಗ್ಲೀಷ್ ಮೋಹ ಜಾಸ್ತಿಯಾಗಿದೆಯೇ ಹೊರತು ಕಮ್ಮಿಯಾಗಿಲ್ಲ. ಹೀಗಿರುವಾಗ ಇದು ಪ್ರವಾಹದ ವಿರುದ್ಧ ಈಜುವ ಪ್ರಯತ್ನವಾಗರಿಕ್ಕಿಲ್ಲವೇ?

ಚಂ.ಪಾ.: ಹೌದು, ಈ ಮೂರು ಕಾರಣಗಳ ಭಾರೀ ಗಾಳಿ ಬೀಸುತ್ತಿದೆ. ಆದರೆ ಜರ್ಮನಿ, ಜಪಾನ್‌ಗಳಲ್ಲೂ ಬೀಸುತ್ತಿದೆ. ಆದರೆ ಅಲ್ಲಿ ಅವರವರ ಭಾಷೆಗಳನ್ನೇ ಉಪಯೋಗಿಸಿ ಈ ಗಾಳಿಯನ್ನು ಎದುರಿಸಿದ್ದಾರೆ. ಇಂಗ್ಲೀಷಿನ ಅನಿವಾರ್ಯತೆಯನ್ನು ಜಾಗತೀಕರಣದೊಂದಿಗೆ ತಳಕು ಹಾಕಬೇಕಾಗಿಲ್ಲ.

● ಜಪಾನ್, ಜರ್ಮನಿಯ ಈ ಪಟ್ಟಿಗೆ ಚೀಣಾ, ವಿಯೆಟ್ನಾಂ, ಕ್ಯೂಬಾವನ್ನು ಸೇರಿಸಬಹುದು. ನಾವು 1990 ರಲ್ಲಿ ಆರಂಭಿಸಿದ್ರೆ ಇವು 1980ರ ದಶಕದಲ್ಲೇ ಜಾಗತೀಕರಣದ ಪ್ರಕ್ರಿಯೆಯನ್ನು ಆರಂಭಿಸಿದ್ದವು.

ಚಂ.ಪಾ.: ಹೌದು, ಅವು ತಮ್ಮ ಭಾಷೆಯಲ್ಲೇ ಗಾಳಿಯನ್ನು ಎದುರಿಸಿವೆ. ಚೀಣಾದೊಂದಿಗೆ ಅಮೆರಿಕ ಬಹುರಾಷ್ಟ್ರೀಯ ಕಂಪನಿಗಳು ಚೀಣೀ ಭಾಷೆಯಲ್ಲೇ ವ್ಯವಹರಿಸಬೇಕು.

● ಆದರೆ ಭಾರತದಲ್ಲಿ ಆಗಲೇ (ಜಾಗತೀಕರಣ ಮತ್ತು ಇಂಗ್ಲೀಷ್ ಭಾಷೆ) ತಳುಕುಹಾಕಿಕೊಂಡು ಬಿಟ್ಟಿದೆಯಲ್ಲಾ? ಇಂಗ್ಲೀಷ್ ಕಲಿಯಬೇಕೆಂಬ ಅಲೆ ಬಂದಿದೆ.

ಚಂ.ಪಾ.: ಇದು ಸುಶಿಕ್ಷಿತರ ಮೂಢನಂಬಿಕೆ. ಉದಾಹರಣೆಗೆ, ಕಂಪ್ಯೂಟರ್ ಭಾಷೆ ಇಂಗ್ಲೀಷ್ ಎನ್ನುತ್ತಾರೆ. ಕಂಪ್ಯೂಟರ್‌ಗೆ ಎಲ್ಲಿದೆ ಭಾಷೆ? ನಾವು ಹಾಕುವ ಭಾಷೆಯಲ್ಲಿ ಅದು ತೋರಿಸುತ್ತದೆ. ಇವರನ್ನು ವಿದ್ಯಾವಂತರೆನ್ನುವುದಕ್ಕಿಂತ ಸಾಕ್ಷರರು ಎಂದೇ ಹೇಳಬಹುದು. ಅವರನ್ನು ವಿದ್ಯಾವಂತರಾಗಿಸಬೇಕು. ಆ ತಳಕನ್ನು ಬಿಡಿಸಬೇಕು.

● ಹೌದು, ವಾತಾವರಣ ಸೃಷ್ಟಿಸುವ ಕೆಲಸವಾಗಬೇಕು. ಆದರೆ ಈ ಖಾಸಗೀಕರಣ ಸುಶಿಕ್ಷಿತರ ಮೇಲೆ ಅಂತಹಾ ಒತ್ತಡ ಹೇರಿದೆಯಲ್ಲಾ? ವಿದೇಶಿ ಕಂಪನಿಗಳು ಮಾತ್ರವಲ್ಲ, ನಮ್ಮ ದೇಶದ ಖಾಸಗೀ ಕಂಪನಿಗಳಿಗೂ ಇಂಗ್ಲೀಷೇ ಬೇಕು.

ಚಂ.ಪಾ.: ಆದರೆ ಈ ಖಾಸಗೀ ಶಾಲೆಗಳಲ್ಲಿ ಕಲಿಸುವುದಾದರೂ ಏನು? ಕನ್ನಡದಲ್ಲಿ ಏನೇ ತಪ್ಪು ಮಾಡಿದರೂ 'ಅವನು ಹ್ ಓ ಗ್ ಉ ತ್ತಾ ಳ್' ಅನ್ನುವುದಿಲ್ಲ. ಕರ್ತೃ, ಕರ್ಮ, ಕ್ರಿಯಾದ ಸಂಬಂಧವೇ ಗೊತ್ತಿಲ್ಲದಂತಹ ಇಂಗ್ಲೀಷ್ ಕಲಿಕೆಯಿಂದ ಏನು ಪ್ರಯೋಜನ? ಕನ್ನಡ ಮಾಧ್ಯಮದಲ್ಲೇ ಸರಿಯಾಗಿ ಕಲ್ತು ಆಮೇಲೆ ಬೇಕಿದ್ದರೆ ಇಂಗ್ಲೀಷನ್ನು ಕಲಿಯಬಹುದಲ್ಲ. ಹಾಗೆ ಮಾಡಿದವರು ಬಹಳ ಜನ ದೊಡ್ಡ ಹುದ್ದೆಯಲ್ಲಿದ್ದಾರೆ. ಎಂದು ಕೇಳಿದ್ದೇನೆ.

> ಸುಲಿದ ಬಾಳೆಯ ಹಣ್ಣಿನಂದದಿ
> ಕಳೆದ ಸಿಗುರಿನ ಕಬ್ಬಿನಂದದಿ
> ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ಪ
> ಲಲಿತವಹ ಕನ್ನಡದ ನುಡಿಯಿಂ
> ತಿಳಿದು ತನ್ನೊಳು ತನ್ನ ಮೋಕ್ಷವ
> ಗಳಿಸಿಕೊಂಡರೆ ಸಾಲದೇ ಸಂಸ್ಕೃತದಲಿನ್ನೇನು?
>
> - ಮಾಧ್ಯಮದ ವಿವಾದ ಕೇವಲ ಇಂದಿನದಲ್ಲ. ಈ ಶತಮಾನದ್ದೂ ಅಲ್ಲ. ಜನರು ವಿಚಾರವಂತರಾಗಬಾರದು ಎನ್ನುವ ಆಳುವ ವರ್ಗಗಳು ಹುಟ್ಟಿದಂದಿನಿಂದ ಇವೆ. ಇದನ್ನು ವಿರೋಧಿಸಿಯೇ ಬೌದ್ಧ, ಜೈನ ಧರ್ಮಗಳು ಅಂದಿನ ಜನ ಭಾಷೆಗಳಾದ ಪ್ರಾಕೃತಗಳನ್ನು ಕನ್ನಡ, ತಮಿಳು ಮೊದಲಾದ ದೇಸಿ ಭಾಷೆಗಳನ್ನು ಬಳಸಿದರು. ಶಿವಶರಣರು, ಹರಿದಾಸರು ಸರಳ ಕನ್ನಡದಲ್ಲಿಯೇ ಎಲ್ಲ ವಿಚಾರಗಳನ್ನು ಜನಸಾಮಾನ್ಯರಿಗೆ ಅರ್ಥವಾಗುವಂತೆ ಹರಡಿದರು.
>
> ಕರ್ನಾಟಕದಲ್ಲಿ ಕನ್ನಡ-ಸಂಸತಗಳ ನಡುವಿನ ವಿವಾದ ಸಾವಿರ ವರ್ಷಗಳ ಕಾಲ ನಡೆದಿದೆ. ಸಾಹಿತ್ಯದ ಭಾಷೆಯಾಗಿ ಧರ್ಮದ ಭಾಷೆಯಾಗಿ ಸಂಸತವೋ ಕನ್ನಡವೋ ಎಂಬ ವಿವಾದಕ್ಕೆ ಉತ್ತರವಾಗಿ ಕನ್ನಡದ ಕವಿ ಮಹಲಿಂಗರಂಗ (ಸುಮಾರು ಕ್ರಿ.ಶ, 1675)ನೀಡಿದ ಸುಂದರ ಉತ್ತರ.

● ಇಲ್ಲ ಇನ್ನೊಂದು ಬಹಳ ಮುಖ್ಯವಾದದ್ದು ವಿಚಾರಶಕ್ತಿಯ ಬೆಳವಣಿಗೆ, ವಿಷಯವನ್ನು ಗ್ರಹಿಸಿ ಅದನ್ನು ಅಭಿವ್ಯಕ್ತಿಗೊಳಿಸುವ ಸಾಮರ್ಥ್ಯ

ಚಂ.ಪಾ.: ಹೌದು. ವಿಚಾರ, ಗ್ರಹಣ, ಮಂಥನ, ಅಭಿವ್ಯಕ್ತಿ ಇವೆಲ್ಲಾ ಮಾತೃಭಾಷೆಯಲ್ಲೇ ಅಥವಾ ಗೊತ್ತಿರುವ ಭಾಷೆಯಲ್ಲೇ ಚೆನ್ನಾಗಿ ಸಾಧ್ಯ.

● ಇಂಗ್ಲೀಷ್ ಮಾಧ್ಯಮ ಆಳುವವರಿಗೆ ಬೇಕಾದ ಸಿಬ್ಬಂದಿಯನ್ನು ಸೃಷ್ಟಿ ಮಾಡಲಿಕ್ಕೆ. ವಸಾಹತುಶಾಹಿಗಳಂತೆ ಈಗ ನಮ್ಮನ್ನು ಆಳುವವರಿಗೂ ಶಿಕ್ಷಣದಿಂದ ಬೇಕಾದ್ದು ಇಷ್ಟೇ. ವಿಚಾರಶೀಲತೆ, ಸೃಜನಶೀಲತೆಯಲ್ಲ. ಕೇವಲ ಬಾಯಿಪಾಠ ಪಾಸು ಮಾಡುವ ರ‍್ಯಾಂಕು ಪಡೆಯುವ ಪ್ರಾಥಮಿಕ ಹಂತಗಳಲ್ಲಿ ಇಂಗ್ಲೀಷ್ ಮಾಧ್ಯಮದ ಪರಾಕ್ರಮ ನಡೆಯುತ್ತದೆ. ಮುಂದೆ ವಿಯುಸಿಗೆ ಬರುವ ವೇಳೆಗೆ ಸ್ವಂತ ವಿಚಾರ ಮಾಡುವ ಹಂತ ಬಂದಾಗ ಇವರುಗಳು ಎಲ್ಲಿ ಹೋಗಿರುತ್ತಾರೋ ಗೊತ್ತಿಲ್ಲ.

ಚಂ.ಪಾ.: ನಿಜ. ಈ ಕಾನ್ವೆಂಟ್ ಶಾಲೆಗಳಿಂದ ಬಂದವರು ಒಬ್ಬರೂ ಸಾಹಿತಿಯಾಗಿಲ್ಲ.

● ಇನ್ನೂ ಕೆಲವರು ಹೇಳುತ್ತಾರೆ - ಒಳ್ಳೆಯ ಶಾಲೆಗಳಿದ್ದರೆ ಕನ್ನಡ ಮಾಧ್ಯಮ ಶಾಲೆಗಳಿಗೆ ಕಳಿಸಬಹುದು ಎಂದು.

ಚಂ.ಪಾ.: ಇದು ಸರಿಯಾದ ತರ್ಕ ಎಂದೇ ಹೇಳಬಹುದು. ಆದರೆ ಒಳ್ಳೆಯ ಶಾಲೆಗಳ ನಿರ್ಮಾಣವೂ ನಮ್ಮ ಹೊಣೆಯಲ್ಲವೇ? ಬಡವರು ಮಾತ್ರ ಕನ್ನಡ ಮಾಧ್ಯಮ ಶಾಲೆಗಳಿಗೆ ಕಳಿಸೋದು ಅನ್ನುವಂತಾಗಿದೆ. ನಿಜವಾಗಿ ಇಂಗ್ಲೀಷ್ ಮಾಧ್ಯಮ ಶಾಲೆಗಳಲ್ಲಿ ಒಳ್ಳೆಯ ಶಾಲೆಗಳು ಎಷ್ಟಿವೆ? ಎಲ್ಲೋ ಕೆಲವು. ಸರಿಯಾದ ಕಟ್ಟಡಗಳಿಲ್ಲ. ಅರ್ಹ ಶಿಕ್ಷಕರಿಲ್ಲ. 200-300 ರೂಪಾಯಿ ಕೊಟ್ಟು ದುಡಿಸಿಕೊಳ್ತಾರೆ. ಹಾಗೆ ನೋಡಿದರೆ ಸರ್ಕಾರಿ ಶಾಲೆಗಳಲ್ಲೇ Infrastructure ಅವಕ್ಕಿಂತ ಉತ್ತಮ. ಕಟ್ಟಡಗಳಿವೆ, ತರಬೇತಾದ ಶಿಕ್ಷಕರಿರುತ್ತಾರೆ. ಆದರೆ ನಮಗೆ ಇಂಗ್ಲೀಷ್ ಮಾಧ್ಯಮ ಶಾಲೆಗಳೇ ಒಳ್ಳೆಯ ಶಾಲೆಗಳು ಎಂಬ ಭ್ರಮೆ. ಈ ಇಂಗ್ಲೀಷ್ ಮಾಧ್ಯಮ ಶಾಲೆಗಳು ಅಂತಹ ಭ್ರಮೆಗಳನ್ನು ಸೃಷ್ಟಿಸುತ್ತವೆ. ಈ ವರ್ಷ ಎಸ್.ಎಸ್.ಎಲ್.ಸಿ.ಯಲ್ಲಿ ಕಾರ್ಪೋರೇಷನ್ ಶಾಲೆಗಳ ಫಲಿತಾಂಶ ಹಲವು ಕಾನ್ವೆಂಟ್ ಶಾಲೆಗಳಿಗಿಂತ ಉತ್ತಮವಾಗಿವೆ

ಪುಟ 8 ನೋಡಿ

> "........ ಗಣಿತ, ರೇಖಾಗಣಿತ, ಬೀಜಗಣಿತ ರಸಾಯನ ಶಾಸ್ತ್ರ, ಖಗೋಳ ಶಾಸ್ತ್ರ - ಈ ವಿಷಯಗಳಲ್ಲಿ ಎಷ್ಟನ್ನು ನಾನು ನಾಲ್ಕು ವರ್ಷಗಳಲ್ಲಿ ಕಲಿತೆನೋ ಅಷ್ಟನ್ನೂ ಒಂದು ವರ್ಷದಲ್ಲಿ ಕಲಿಯಬಹುದಾಗಿತ್ತು. ಇಂಗ್ಲಿಷಿನ ಮೂಲಕವಾಗಿಯೇ ಕಲಿಯದೆ ಗುಜರಾತಿಯ ಮೂಲಕ ಕಲಿತಿದ್ದರೆ, ಎಂದು ನಾನು ಈಗ ತಿಳಿದುಕೊಂಡಿದ್ದೇನೆ. ನಾನು ಈ ವಿಷಯಗಳನ್ನು ಗ್ರಹಿಸುವುದು ಇನ್ನೂ ಸುಲಭವಾಗಿರುತ್ತಿತ್ತು. ವಿಶದವಾಗಿರುತ್ತಿತ್ತು. ನನ್ನ ಗುಜರಾತಿ ಶಬ್ದ ಭಂಡಾರ ಇನ್ನೂ ವಿಪುಲವಾಗಿರುತ್ತಿತ್ತು. ನಾನು ಆ ಜ್ಞಾನವನ್ನು ಮನೆಯಲ್ಲಿ ಉಪಯೋಗಿಸಿಕೊಳ್ಳಬಹುದಿತ್ತು. ಈ ಇಂಗ್ಲೀಷ್ ಮಾಧ್ಯಮ ನನಗೂ ಇಂಗ್ಲಿಷ್ ಶಾಲೆಗಳಲ್ಲಿ ಓದದೆ ಇದ್ದ ನನ್ನ ಮನೆಯವರಿಗೂ ನಡುವೆ ದಾಟಲಾಗದ ಅಡ್ಡಗೋಡೆಯನ್ನು ಹಾಕಿತು.... ನನ್ನ ಮನೆಯಲ್ಲಿಯೇ ನಾನು ಬಲುಬೇಗನೆ 'ಪರಕೀಯ'ನಾಗುತ್ತಲಿದ್ದೆ.
>
> "............. ಶಿಕ್ಷಣ ಮಾಧ್ಯಮವನ್ನು ಕೂಡಲೇ, ಎಷ್ಟೆ ವೆಚ್ಚವಾಗಲಿ, ಬದಲಾಯಿಸಿ ಪ್ರಾಂತೀಯ ಭಾಷೆಗಳಿಗೆ ಸರಿಯಾದ ಸ್ಥಾನವನ್ನು ಕೊಡಬೇಕು. ಇದರಿಂದ ಉನ್ನತ ಶಿಕ್ಷಣದಲ್ಲಿ ಸಂಭವಿಸುತ್ತದೆ ಎಂದು ಹೇಳಲಾಗುತ್ತಿರುವ ತಾತ್ಕಾಲಿಕ ಗೊಂದಲವನ್ನು ಕೂಡ. ಪ್ರತಿದಿನವೂ ಅಧಿಕವಾಗುತ್ತಿರುವ ದೋಷಯುಕ್ತ ಅಪವ್ಯಯಕ್ಕೆ ಬದಲಾಗಿ, ಸ್ವಾಗತಿಸುತ್ತೇನೆ"
>
> \- ಮಹಾತ್ಮ ಗಾಂಧೀಜಿ

> ನಮ್ಮ ರಾಷ್ಟ್ರ ಪಿತನಾದಿಯಾಗಿ ಸಾವಿರಾರು ದೇಶಭಕ್ತರೂ ನೂರಾರೂ ಸ್ವದೇಶಿಯ ಮತ್ತು ವಿದೇಶಿಯ ವಿದ್ಯಾಜ್ಞರೂ ಹೇಳಿದ್ದಾರೆ, ಮಾತನಾಡಿದ್ದಾರೆ, ಬರೆದಿದ್ದಾರೆ, ಹೊತ್ತಗೆ ಹೊತ್ತಗೆಗಳನ್ನೆ ಪ್ರಕಟಿಸೂ ಇದ್ದಾರೆ. ಆದರೆ ನಮ್ಮ ದೇಶದ ಪ್ರಚ್ಛನ್ನ ಶತ್ರುಗಳಾದ ಸ್ವಾರ್ಥ ಸಾಧಕ ಪಟ್ಟಭದ್ರ ಹಿತಾಸಕ್ತ ಪ್ರತಿಗಾಮಿ ಶಕ್ತಿಗಳು, ಮಕ್ಕಳಿಗೆ ಹಾಲುಣಿಸುವ ನೆವದಿಂದ ಅವನ್ನು ಕೊಲ್ಲುತ್ತಿದ್ದ ಭಾಗವತ ಪುರಾಣದ ಪೂತನಿಯಂತೆ, ಬಲಾತ್ಕಾರದ ಇಂಗ್ಲೀಷ್ ಭಾಷೆಯಿಂದಲೂ ಇಂಗ್ಲಿಷ್ ಮಾಧ್ಯಮದಿಂದಲೂ ವರ್ಷ ವರ್ಷವೂ ಪರೀಕ್ಷೆಯ ಜಲೋಟಿನ್ನಿಗೆ ಕೋಟ್ಯಂತರ ಬಾಲಕರ ಮತ್ತು ತರುಣರ ತಲೆಗಳನ್ನು ಬಲಿಕೊಡುತ್ತಿದ್ದಾರೆ. ಈ ನಷ್ಟದ ಪರಿಮಾಣವನ್ನು ಊಹಿಸಲು ಸಾಧ್ಯವಿಲ್ಲ. ಬಹುಶಃ ಸರಿಯಾಗಿ ಲೆಕ್ಕ ಹಾಕಿದರೆ, ನಾಲ್ಕಾರು ಪಂಚವಾರ್ಷಿಕ ಯೋಜನೆಗಳ ಮೊತ್ತವೆ ಆದರೂ ಆಗಬಹುದೇನೋ!
>
> **\- ಕುವೆಂಪು**

> ಪ್ರಾಥಮಿಕ ಶಾಲೆಯಲ್ಲಿ ಕನ್ನಡದಲ್ಲಿಯೇ ಎಲ್ಲ ಕಲಿತವ ಮುಂದೆ ಮುಂದೆ ಹೋಗಿ ಇಂಗ್ಲೀಷನ್ನೂ ಕೈವಶ ಮಾಡಿಕೊಂಡು ಡಾಕ್ಟರ್ ಆಗುತ್ತಾನೆ. ಆದರೆ ಮೊದಲೇ ಇಂಗ್ಲೀಷ್ ಮೀಡಿಯಂಗೆ ಜೋತುಬಿದ್ದ ವಿದ್ಯಾರ್ಥಿ ಮುಂದೆ ಬಹಳ ಅಂದರೆ ಮೆಡಿಕಲ್ ರಿಪ್ರಜೆಂಟೆಟಿವ್ ಮಾತ್ರ ಆಗುತ್ತಾನೆ. ನಿಮಗೆ ಗೊತ್ತಲ್ಲ, ಬಾಯಿಪಾಠ ಮಾಡಿದ ಹನ್ನೊಂದು ವಾಕ್ಯ ಅವನಿಗೆ ಗೊತ್ತು. ಇನ್ನೊಂದು ಪ್ರಶ್ನೆ ಕೇಳಿದಿರೋ, ಥ್ಯಾಂಕ್ಯೂ ಅಂತ ಹೇಳಿ ಕೈಕುಲುಕಿ ಕಣ್ಮರೆಯಾಗುತ್ತಾನೆ.
>
> ಶಾಲಾ ಶಿಕ್ಷಣಾಧಿಕಾರಿಯೊಬ್ಬರು ನನಗೆ ಒಮ್ಮೆ ಹೇಳಿದ್ದರು ತಪಾಸಣೆಗೆಂದು ಹೋದಾಗ ಕನ್ನಡ ಶಾಲೆಗಳ ಮಕ್ಕಳಲ್ಲಿ ತೋರುವ ಚಟುವಟಿಕೆ, ಲವಲವಿಕೆ, ಚುರುಕತನ ಇಂಗ್ಲೀಷ್ ಮಾಧ್ಯಮದ ಅದೇ ವಯಸ್ಸಿನ ಮಕ್ಕಳಲ್ಲಿ ಕಾಣುವುದು ಅಸಾಧ್ಯ. ಆ ಎಳೆ ಮುಖಗಳಲ್ಲಿ ಸದಾ ಆತಂಕ, ಮಿಸ್‌ಗಳ ಬೆದರಿಕೆಯ ಹೆದರಿಕೆ, ಹೋಂ ವರ್ಕಿನ ದುಃಸ್ವಪ್ನ, ಅದನೇ ಗೋಮಿ ಹೊಡೆಯಬೇಕಾದ ತಲೆನೋವು, ಮಮ್ಮಿ ಡ್ಯಾಡಿಗಳು ಹ್ಯಾಪಿ ಬರ್ತ್‌ಡೇ ಹಾಡುತ್ತಾ ಕೇಕು ಕತ್ತರಿಸಲು ಕೈಯಲ್ಲಿ ಹಿಡಿದ ಚಾಕುಗಳ ಇಂತಹ ನೆನಪು.... ನಮ್ಮ ಮಕ್ಕಳು ಇಂಥ ಬದುಕು ಬದುಕಬೇಕೆ?
>
> **ಚಂ.ಪಾ.,**
> ಸಂಕ್ರಮಣದಿಂದ

ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಂಗೀಕರಿಸಿದ ತಜ್ಞರ ಸಮಿತಿಯ ಮಧ್ಯಂತರ ವರದಿಯ ಶಿಫಾರಸ್ಸುಗಳು ಹೀಗಿವೆ

ಶಿಫಾರಸು 1: ಕರ್ನಾಟಕ ರಾಜ್ಯ ಸರ್ಕಾರವು ಶಿಕ್ಷಣ ಮಾಧ್ಯಮ ಮತ್ತು ಭಾಷಾ ಬೋಧನೆ ಕುರಿತಂತೆ ಒಂದು ಸ್ಪಷ್ಟವಾದ ಸಮಗ್ರ ನೀತಿಯನ್ನು
ಪ್ರಕಟಿಸಬೇಕು. ನಿರ್ದಿಷ್ಟ ಕಾಲಮಿತಿಯೊಳಗೆ (ಹತ್ತು ವರ್ಷಗಳಲ್ಲಿ ಹಂತ ಹಂತವಾಗಿ) ತಾಂತ್ರಿಕ ಶಿಕ್ಷಣವೂ ಸೇರಿದಂತೆ ಸ್ನಾತಕೋತ್ತರ
ಮಟ್ಟದವರೆಗೂ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆ(ಅಂದರೆ ಕನ್ನಡ)ಯು ಶಿಕ್ಷಣ ಮಾಧ್ಯಮವಾಗಬೇಕು ಎಂಬುದು ಸರ್ಕಾರದ
ನೀತಿಯಾಗಬೇಕು.

ಶಿಫಾರಸ್ಸು 2 : ಈಗಿನಂತೆ ಪ್ರಾಥಮಿಕ ಕಿರಿಯ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಎಂದು ವಿಂಗಡಣೆ ಮಾಡದೇ, 1 ರಿಂದ 7ನೇ ತರಗತಿಯವರೆಗೆ
ಸಮಗ್ರವಾಗಿ ಪ್ರಾಥಮಿಕ ಶಿಕ್ಷಣ ಎಂದು ಪರಿಗಣಿಸಬೇಕು. ಸದ್ಯ 1 ರಿಂದ 4 ನೇ ತರಗತಿಯವರೆಗೆ ಮಾತೃಭಾಷೆ ಅಥವಾ ಪ್ರಾದೇಶಿಕ
ಭಾಷೆ ಕಡ್ಡಾಯ ಶಿಕ್ಷಣ ಮಾಧ್ಯಮವಾಗಿರಬೇಕೆಂಬುದು ಸರ್ಕಾರದ ಶೈಕ್ಷಣಿಕ ನೀತಿಯಾಗಿದೆ. ಮುಂದಿನ ಶೈಕ್ಷಣಿಕ ವರ್ಷದಿಂದಲೇ
(1999-2000) ಪೂರ್ವ ಪ್ರಾಥಮಿಕವನ್ನೂ ಒಳಗೊಂಡು 1 ರಿಂದ 7ನೇ ತರಗತಿಯವರೆಗೆ ಮಾತೃಭಾಷೆ ಅಥವಾ ಪ್ರಾದೇಶಿಕ
ಭಾಷೆಯು ಕಡ್ಡಾಯ ಶಿಕ್ಷಣ ಮಾಧ್ಯಮವೆಂದು ಘೋಷಿಸಿ, ಆದೇಶ ಹೊರಡಿಸಬೇಕು.
ಅಂದರೆ, ಈವರೆಗೆ 1 ರಿಂದ 4ನೇ ತರಗತಿಯವರೆಗೆ ಸರ್ಕಾರದ ನೀತಿಯನ್ನು ಒಪ್ಪಿರುವ ಅಂಗೀಕೃತ ಶಾಲೆಗಳು 1999-2000 ದ
ಸಾಲಿನಿಂದ ಪ್ರಾರಂಭಿಸಿ, ವರ್ಷ ವರ್ಷ ಕ್ರಮವಾಗಿ 7ನೇ ತರಗತಿಯವರೆಗೆ ಅದನ್ನು ವಿಸ್ತರಿಸಬೇಕು.

ಶಿಫಾರಸ್ಸು 3: ಈಗಾಗಲೇ 5 ರಿಂದ 7 ರವರೆಗೆ ಇಂಗ್ಲೀಷ್ ಮಾಧ್ಯಮಕ್ಕೆ ಅನುಮತಿ ಪಡೆದಿರುವ ಅಂಗೀಕೃತ ಶಾಲೆಗಳು 1999-2000 ನೇ ಸಾಲಿನಿಂದ
ಪ್ರಾರಂಭಿಸಿ, ವರ್ಷ ವರ್ಷ ಕ್ರಮವಾಗಿ ಬದಲಾವಣೆ ಮಾಡಿ ಮೂರು ವರ್ಷಗಳಲ್ಲಿ 7ನೇ ತರಗತಿಯವರೆಗೆ ಸರ್ಕಾರದ ನೀತಿಯಂತೆ
ಶಿಕ್ಷಣ ಮಾಧ್ಯಮವನ್ನು ಬದಲಾಯಿಸಬೇಕು. ಇಲ್ಲದಿದ್ದರೆ ಆ ಶಾಲೆಗೆ ಸರ್ಕಾರ ನೀಡಿರುವ ಮಾನ್ಯತೆ ರದ್ದಾಗುತ್ತದೆ.

"ಇದು ಗಾಂಧಿ ಕಾಲವಲ್ಲ ನಾವು ರುದ್ರರು"

ಹೀಗೆಂದು ಉದ್ಗರಿಸಿದವರು ಇದುವರೆಗೆ ಉತ್ತರ ಕನ್ನಡದ ಎಂ.ಪಿ. ಯಾಗಿದ್ದ ಅನಂತಕುಮಾರ್ ಅವರ ಇತ್ತೀಚಿನ ಒಂದು 'ವೀರೋಚಿತ ಕೃತ್ಯ ನೋಡಿ· ಬರೀ ಸರ್ವೆ ಮಾಡುವಾಗ ಅವಾಂತರ ಮಾಡಿದ ಈ 'ಪರಿಸರ ಪ್ರಿಯ' ನೌಕಾ ನೆಲೆಗೆ ಒಳಪಟ್ಟ ಪ್ರದೇಶದಲ್ಲಿ ಜನರನ್ನು ನಿರಾಶ್ರಿತರನ್ನಾಗಿಸುವಾಗ ಏನು ಮಾಡುತ್ತಿದ್ದರು ಎಂದು ಜನ ಪ್ರಶ್ನಿಸುತ್ತಿದ್ದಾರೆ. ಈ ಪ್ರಶ್ನೆಗೆ 3-4 ತಿಂಗಳಲ್ಲಿ ನಾವೇ ಸರಿಯಾದ ಉತ್ತರ ಕೊಡುತ್ತೇವೆ ಎನ್ನುತ್ತಾರೆ.

ಉತ್ತರ ಕನ್ನಡ ಲೋಕಸಭಾ (ಕೆನರಾ) ಕ್ಷೇತ್ರದ ಮಾಜಿ ಬಿಜೆಪಿ ಸಂಸದ ಅನಂತ ಕುಮಾರ ಹೆಗಡೆ ಅವರು ತನ್ನ ಹಿಂಬಾಲಕರ ನೆರವಿನೊಂದಿಗೆ ಸುಚಿಂದ್ರ ಇನ್ವೆಸ್ಟ್‌ಮೆಂಟ್ಸ್‌ನ ಜನರಲ್ ಮ್ಯಾನೇಜರ್ ಕೆ. ಕೃಷ್ಣಶೆಟ್ಟಿ ಮತ್ತು ಇತರರನ್ನು ಥಳಿಸಿ ಓಡಿಸಿದ ಘಟನೆ ನಡೆಯಿತು. ಇದನ್ನು ನೋಡಿದ ಮತದಾರರು ಇವರನ್ನು ನಾವು ಓಟು ಹಾಕಿ ಗೆಲ್ಲಿಸಿದ್ದು ಇದಕ್ಕಾಗಿಯೇ? ಎಂದು ಪ್ರಶ್ನಿಸುತ್ತಿದ್ದಾರೆ.

11 ಮೇ 1999ರಂದು ಅಂಕೋಲಾ ತಾಲೂಕಿನ ರಾಮನಗಳಿ ಅರಣ್ಯ ವಿಶ್ರಾಂತಿಧಾಮದಲ್ಲಿ ಜಿಲ್ಲಾಧಿಕಾರಿಗಳು ಕರೆದ ಬೇಡ್ತಿ ಹುನೀರು ಯೋಜನೆಯ ಮೋಜಣಿಯ ಬಗೆಗಿನ ಸಭೆಗೆ ಅನಂತಕುಮಾರ ಹೆಗಡೆ ಕೂಡ ಭಾಗವಹಿಸಿದ್ದರು ತಮ್ಮ ಹಿಂಬಾಲಕರೊಂದಿಗೆ. ಜಿಲ್ಲಾಧಿಕಾರಿಗಳು ಇವರಿಗೆ ಮಾತನಾಡಲು ಹೇಳಿದಾಗ ಸಂಸದರು ಎಂದಿನ ವೀರೋಚಿತ ಶೈಲಿಯಲ್ಲಿ ಗರ್ಜಿಸತೊಡಗಿದರು.

"..........ನಾವು ಈ ಚಪ್ರಸಿಗಳ ಹತ್ತಿರ ಮಾತನಾಡಲು ಬಂದಿಲ್ಲ. ಬೇಕಾದರೆ ಜಿಲ್ಲಾಧಿಕಾರಿಯವರೊಡನೆ ಗೌರವಯುತವಾಗಿ ಮಾತನಾಡುತ್ತೇವೆ. ನಾವು ರುದ್ರಭೂಮಿಗೆ ಬಂದಿದ್ದೇವೆ. ನಾವು ಈಗ ರುದ್ರರೂ ಹೌದು. ಸರ್ವೆ ಮಾಡಲು ಬಂದವರನ್ನು ಮೊದಲು ಹೊಳೆಯಲ್ಲಿ ಹಾಕ್ತೇವೆ" ಎಂದು ಕೂಗಾಡಿದರು. ಅಲ್ಲಿ ಉಪಸ್ಥಿತರಿದ್ದ ಕರ್ನಾಟಕ ನವೀಕರಿಸ ಬಹುದಾದ ಇಂಧನ ಅಬಿವೃದ್ಧಿ ಸಂಸ್ಥೆಯ ಆಡಳಿತ ನಿರ್ದೇಶಕ ವೇದಾಂತಂ ಅವರ ಮೇಲೇರಿ ಹೋಗಿ ಇನ್ನೇನು ಕಪಾಳಮೋಕ್ಷ ಮಾಡುತ್ತಾರೋ ಎಂಬಷ್ಟರಲ್ಲಿ ಅವರ ಚಮಚಾಗಳು Angry young man Mr. ಅನಂತರನ್ನು ತಡೆದರು" (ಪತ್ರಿಕಾವರದಿ) ಎಂದು ಅಂದು ಸ್ಥಳದಲ್ಲಿ ಹಾಜರಿದ್ದ ಪತ್ರಕರ್ತ ರವಿ-ಬರೆದರು.

ಇಷ್ಟೇ ಅಲ್ಲ ಸರ್ವೆಗಾಗಿ ಬಂದ ಸುಚಿಂದ್ರ ಇನ್‌ವೆಸ್ಟ್‌ಮೆಂಟ್ ಕಂಪನಿಯವರನ್ನು ಹೊರದಬ್ಬಿ ಅವರ ಜೀಪಿನ ಗ್ಲಾಸುಗಳನ್ನು ಪುಡಿ ಪುಡಿ ಮಾಡಿಸಿದರು. ಹೇಗಿದೆ ನೋಡಿ ಪರಿಸರ ಪ್ರೇಮಿ (?!) ಸಂಸದರ ಕಾರ್ಯ ವೈಖರಿ. ಇದೆಲ್ಲ ನಡೆದದ್ದು ಜಿಲ್ಲಾಧಿಕಾರಿ ಅನಂತಕುಮಾರ ತಿವಾರಿಯವರ ಮುಂದೆ!

ಈ ಬಗ್ಗೆ ಹಿರಿಯ ಪತ್ರಕರ್ತರೂ ಪರಿಸರವಾದಿ ಸಂಘಟನೆಯ ಜಿಲ್ಲಾ ಅಧ್ಯಕ್ಷರೂ, ಹಿಂದೆ ಸಮಾಜವಾದಿ ಆಂದೋಲನದಲ್ಲಿ ದುಡಿದವರೂ ಆದ ಅಂಕೋಲೆಯ ಅಮ್ಮೆಂಬಳ ಅನಂತ ಅವರು ಈ ಬಗ್ಗೆ ಸಂಸದರಿಗೆ ಬುದ್ಧಿಮಾತು ಹೇಳಿದಾಗ ಅವರು ಕೊಟ್ಟ ಉತ್ತರ ಇನ್ನೂ ಸ್ವಾರಸ್ಯಕರವಾಗಿದೆ.

"... ಆದರೆ ಅನಂತಕುಮಾರರು ಜಿಲ್ಲಾಧಿಕಾರಿಗಳು ಆಮಂತ್ರಿಸಿದ್ದ ಸುಚಿಂದ್ರ ಇನ್‌ವೆಸ್ಟ್‌ಮೆಂಟ್ ಕಂಪನಿಯ ಅಧಿಕಾರಿಗಳನ್ನು ಹೊರದಬ್ಬುವಂತೆ ಪ್ರಚೋದಕ ಮಾತನ್ನು ಆಡುತ್ತಾರೆ ಎಂಬ ಕಲ್ಪನೆ ಅವರಿಗೂ (ಜಿಲ್ಲಾಧಿಕಾರಿಗೆ) ಇದ್ದಿಲ್ಲ. ಅನಂತ್‌ಕುಮಾರ ಹೆಗಡೆ ಅವರ ಭಾಷಣದಿಂದ ನಾನು ಸೇರಿದಂತೆ ಎಲ್ಲರೂ ವಿಚಲಿತರಾದೆವು. ಅನಂತ್‌ಕುಮಾರರ ಭಾಷಣದಿಂದ ಪ್ರಚೋದಿತರಾದ ಜನರು ಸಂಯಮ ಮೀರುವಂತಾಯಿತು. ಈ ಘಟನೆಯ ನಂತರ ನಾನು ಅನಂತಕುಮಾರರನ್ನು ಭೇಟಿಯಾಗಿ 'ಇದು ರೀತಿಯಲ್ಲ' ಎಂದು ಒಬ್ಬ ಹಿರಿಯನಾಗಿ ಅವರಿಗೆ ಹೇಳಿದ್ದೆ. ಅದಕ್ಕವರು 'ಇದು ಗಾಂಧೀಯುಗವಲ್ಲ' ಎಂದು ನನಗೆ ತಿರುಗೇಟು ನೀಡಿದರು. ಪ್ರತ್ಯುತ್ತರ ನೀಡಬೇಕಾಗಿದ್ದ ನಾನು ಸಂಯಮದಿಂದ ನಿನ್ನೆಯ ಸನ್ನಿವೇಶಕ್ಕೆ ಸರಿಯಾಗಿ ಸುಮ್ಮನುಳಿಯಬೇಕಾಯಿತು" (ಕರಾವಳಿ ಮುಂಜಾವ ಪತ್ರಿಕೆಗೆ ಅಮ್ಮೆಂಬಳ ಅನಂತರು ಬರೆದ ಪತ್ರದಿಂದ) ಎಂದು ಅನಂದರು ತನ್ನ ಅಸಹಾಯಕತೆಯನ್ನು ವಿವರಿಸಿದ್ದಾರೆ.

ಅನಂತ ಕುಮಾರ ಅವರು ಹೇಳಿದ್ದು ನಿಜವಾಗಿಯೂ ಹೌದು. ಗಾಂಧೀಜಿಯ ಜಾತ್ಯಾತೀತ ನಡವಳಿಕೆ, ಧರ್ಮನಿರಪೇಕ್ಷ ನಿಲುವು, ಸತ್ಯದ ಬಗೆಗಿನ ನಂಬಿಕೆ, ಅಹಿಂಸೆಯ ಮಾರ್ಗಗಳೆಲ್ಲವೂ ಈ ಬಿಜೆಪಿ, ಆರ್‌ಎಸ್‌ಎಸ್, ವಿಹೆಚ್‌ಪಿ ಯ ಜನಕ್ಕೆ ಅರ್ಥವಿಲ್ಲದ ಪರಿಭಾಷೆಗಳೇ ಅಲ್ಲವೆ? ಇವರ 13 ತಿಂಗಳ ಆಡಳಿತ ಸಾಧಿಸಿ ತೋರಿಸಿದ್ದಾದರೂ ಇದನ್ನೇ ಅಲ್ಲವೆ?

ಅಲ್ಲಿದ್ದ ಒಬ್ಬಿಬ್ಬರಾದರೂ ಅಂದು ಕೊಂಡಿರಬೇಕು 'ಇದು ಗಾಂಧಿಕಾಲವಲ್ಲ, ನಾಥುರಾವ್ ಗೋಡ್ಸೆಯ ಕಾಲ' "ಅನಂತ್‌ಕುಮಾರ ಹೆಗಡೆ ಹಾಗೂ ಅನಂತ ಹೆಗಡೆ ಆಶಿಸರ (ಇವರೂ ಪರಿಸರ ರಕ್ಷಣಾ ಸಮಿತಿಯ ಜಿಲ್ಲಾ ಮುಂದಾಳುಗಳು) ಸೇರಿ ನಮ್ಮನ್ನು ಹೊರಗೆ ತಳ್ಳಿದರೆಂದು ಮತ್ತು "ವಿದ್ಯುತ್ ಉತ್ಪಾದಕರನ್ನು ಹೊರಗೆ ಅಟ್ಟಿ ಎಂದು ಕರೆ ನೀಡಿ ಹೊರದಬ್ಬಲು ಮುಂದಾದರಲ್ಲದೆ ಮೈಮೇಲೆ ಕೈಮಾಡಿ ಅವಾಚ್ಯ ಶಬ್ದಗಳಿಂದ ತಮ್ಮನ್ನು ಬೈದು ತಮ್ಮ ಜೀಪನ್ನು ಅನಂತ ಹೆಗಡೆಯವರು ಪ್ರಚೋದನೆ ನೀಡಿ ಪುಡಿಮಾಡಿದರು" ಎಂದು ಹೊರದಬ್ಬಿಸಿಕೊಂಡ ಕೃಷ್ಣಶೆಟ್ಟಿ ಪತ್ರಿಕಾ ಹೇಳಿಕೆ ಕೊಟ್ಟಿದ್ದಾರೆ ಮತ್ತು ಪೊಲೀಸರಿಗೆ ದೂರು ನೀಡುವುದಾಗಿ ಹೇಳಿದ್ದಾರೆ.

ಈ ಮಾತನ್ನೆಲ್ಲಾ ಕೇಳಿ ಉತ್ತರ ಕನ್ನಡದ ಜನ ಸುಮ್ಮನೆ ಕುಳಿತಿದ್ದಾರೆಯೇ? ಗೂಂಡಾಗಿರಿ ದಾಂಧಲೆಗಳನ್ನು ಜನ ಸಹಿಸಿದ್ದಾರೆಯೆ? ಎಂದು ನೀವು ಕೇಳಬಹುದು.

ಇಲ್ಲ, ಕಾರವಾರದ ಸೀಬರ್ಡ್ ನಿರಾಶ್ರಿತರು ತಕ್ಷಣ ಪತ್ರಿಕೆಯಲ್ಲಿ ಉತ್ತರಿಸಿದ್ದು ಹೀಗೆ "ಬರೀ ಸರ್ವೆ ಮಾಡಲು ಬಂದಾಗ ಇಷ್ಟೆಲ್ಲಾ ಅವಾಂತರ ಮಾಡಿದ ನಮ್ಮ ಎಂ.ಪಿ. (ಮಾಜಿ) ಸಾಹೇಬರು ನೌಕಾನೆಲೆಗೆ ಒಳಪಟ್ಟ ಪ್ರದೇಶದಲ್ಲಿರುವ ಬಣಗಾ, ಅರ್ಗಾ, ಚೆಂಡಿಯಾ ಮತ್ತು ಅಲಿಗದ್ದಾದಲ್ಲಿರುವ ಜನರ ಮನೆಗಳನ್ನು ನಾಶಪಡಿಸಿ ಅವರನ್ನು ನಿರಾಶ್ರಿತರನ್ನಾಗಿ ಮಾಡಿ, ಅವರನ್ನು ಸ್ಥಳಾಂತರಿಸುವಾಗ, ಈ ನಮ್ಮ ಪ್ರಕೃತಿ ಪ್ರಿಯ, ದೇಶಭಕ್ತ ಅನಂತ ಸಾಹೇಬರು ಎಲ್ಲ ಅಡಗಿಕುಳಿತುಕೊಂಡಿದ್ದರು? ಆದರೆ ಈ ಪ್ರಶ್ನೆಗೆ ಅವರು ಉತ್ತರ ಕೊಡುವುದು ಬೇಡ ನಾವೇ ಇನ್ನು ಮೂರು-ನಾಲ್ಕು ತಿಂಗಳಲ್ಲಿ ಸರಿಯಾದ ಉತ್ತರ ಕೊಡುತ್ತೇವೆ" (ಕರಾವಳಿ ಮುಂಜಾವ 18-5-99).

ಇದು ನಿರಾಶ್ರಿತರ ಉತ್ತರ ಮಾತ್ರ ಅಲ್ಲ. ಜಿಲ್ಲೆಯ ಜನರ ಉತ್ತರ ಕೂಡ.

ನಿಸರ್ಗ

ಯಾವ ಕಾಲದ ಶಾಸ್ತ್ರವೇನು ಹೇಳಿದರೇನು...?

ಒಂದು ವಿಶಿಷ್ಟ ವಿವಾಹ



ಅದೊಂದು ಸಂಜೆ, ಬೆಂಗಳೂರಿನ ಬಸವನಗುಡಿಯಲ್ಲಿರುವ ಕರೂರು ವೈಶ್ಯಬ್ಯಾಂಕ್ ಯೂನಿಯನ್ ಸಭಾಂಗಣದಲ್ಲಿ, ಒಂದು ಸರಳ ಮದುವೆಯ ಸಮಾರಂಭ,... ಆದರೆ ವೇದ ಘೋಷಗಳಿಲ್ಲ, ಶಾಸ್ತ್ರಪುರಾಣಗಳ ಸುಳಿವಿಲ್ಲ, ಮದುವೆಯ ಚಪ್ಪರವಂತೂ ಇಲ್ಲವೇ ಇಲ್ಲ. ನವ ವಿವಾಹಿತ ಜೋಡಿ ಒಂದು ಮಗುವನ್ನೆತ್ತಿಕೊಂಡು ವೇದಿಕೆಗೆ ಬರುತ್ತಿದ್ದಂತೆಯೆ ಕೆಲವರಿಗೆ ಆಶ್ಚರ್ಯ! ಈ ಕಾರ್ಯಕ್ರಮದ ಬಗ್ಗೆ ಮೊದಲೇ ತಿಳಿದಿದ್ದವರಿಗೆಲ್ಲ ಸಂತೋಷ.

ಹೌದು, ಅದೊಂದು ಸರಳ ಮತ್ತು ಅಂತರಜಾತೀಯ ಮದುವೆ ಮಾತ್ರವಲ್ಲ, ಅದು ಒಂದು ಆದರ್ಶ ವಿಧವಾ ವಿವಾಹವೂ ಆಗಿತ್ತು. ಗೆಳೆಯರಿಂದ, ಕುಟುಂಬದಿಂದ, ಸಮಾಜದಿಂದ, ಹಲವು ರೀತಿಯಲ್ಲಿ ಎದುರಾದ ಎಲ್ಲಾ ಸವಾಲುಗಳನ್ನು ಎದುರಿಸಿ, ಸುಂದರ ಸಮಾಜದ ಕನಸುಗಳನ್ನೊತ್ತು, ಆದರ್ಶದ ಹೆಜ್ಜೆಯನ್ನು ತುಳಿದವರು ಎಸ್.ಎಫ್.ಐನ ರಾಜ್ಯ ಕಾರ್ಯದರ್ಶಿ ಆರ್. ರಾಮಕೃಷ್ಣ ಹಾಗೂ ರೇಣುಕ.

ನಮ್ಮ ಸಮಾಜದಲ್ಲಿರುವ ಅಡ್ಡಿ ಆತಂಕಗಳು ಮತ್ತು ಕಟ್ಟುಪಾಡುಗಳು ಹೆಣ್ಣನ್ನೆ ಹೆಚ್ಚಾಗಿ ಕಾಡುತ್ತಿವೆ. ಅದರಲ್ಲೂ 'ವಿಧವೆಯ'ಸ್ಥಿತಿಯಂತೂ ಚಿಂತಾಜನಕ. ಸಮಾಜದ ಎಲ್ಲಾ ಆಚರಣೆಗಳಿಂದಲೂ ಅವಳನ್ನು ಹೊರಗಿಡುವ ಪಿತೂರಿ ವ್ಯವಸ್ಥಿತವಾಗಿಯೆ ನಡೆದಿದೆ. 19 ಮತ್ತು 20ನೇ ಶತಮಾನಗಳಲ್ಲಿ ಆರಂಭವಾದ ಸುಧಾರಣಾ ಚಳುವಳಿಗಳು ವಿಧವೆಯರ ಬದುಕಿನಲ್ಲಿ ಬೆಳಕು ಚೆಲ್ಲಲು ಪ್ರಯತ್ನಿಸಿದರೂ ಪೂರ್ಣ ಸಾಧ್ಯವಾಗಲಿಲ್ಲ. ಈ ವೇಳೆಯಲ್ಲಿ ರಾಜಾರಾಂ ಮೋಹನ್ ರಾಯರು ಬಾಲ್ಯವಿವಾಹದ ವಿರುದ್ಧ ಮತ್ತು ವಿಧವಾ ವಿವಾಹಕ್ಕೆ ಪ್ರೋತ್ಸಾಹವಾಗಿ ನಡೆಸಿದ ಸುಧಾರಣಾ ಚಳುವಳಿಗಳು ಗಮನಾರ್ಹವಾದವುಗಳು. ಈ ಹಿನ್ನೆಲೆಯಲ್ಲಿ ಸ್ತ್ರೀ-ಮತ್ತು ಮಹಿಳೆಯರ ನಡುವಿನ ಹಾಗೂ ಮನುಷ್ಯ-ಮನುಷ್ಯರ ನಡುವಿನ ಸಮಾನತೆಯನ್ನು ಸಾಧಿಸಲು ಇಂತಹ ಆದರ್ಶ ವಿವಾಹಗಳು ಸಹಾಯಕಾರಿಯಾಗಲ್ಲವು ಎಂಬ ಆಶಯವನ್ನು ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಸಿ.ಪಿ.ಐ(ಎಂ) ರಾಜ್ಯ ಕಾರ್ಯದರ್ಶಿ ಎಸ್.ಸೂರ್ಯನಾರಾಯಣ ರಾವ್, ಡಾ|| ಜಿ.ರಾಮಕೃಷ್ಣ, ಸಾಹಿತಿ ಮತ್ತು ಪ್ರಾಧ್ಯಾಪಕ ಪ್ರೊ.ಬರಗೂರು ರಾಮಚಂದ್ರಪ್ಪ, ಐಕ್ಯರಂಗ ಸಂಪಾದಕರಾದ ಜಿ.ಎನ್. ನಾಗರಾಜ್, ಸಿ.ಪಿ.ಐ(ಎಂ) ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಜಗನ್ನಾಥ್ ಮೊದಲಾದವರು ವ್ಯಕ್ತಪಡಿಸುತ್ತ 'ಸಮಾಜ ಬದಲಾವಣೆಯ' ಚಳುವಳಿಯೊಂದಿಗೆ ಗುರ್ತಿಸಿಕೊಂಡಿರುವ ರಾಮಕೃಷ್ಣರ ವಿವಾಹವು ಆ ಚಳುವಳಿಯ ಭಾಗವಾಗಿಯೇ ನಡೆಯುತ್ತಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ ನೂತನ ದಂಪತಿಗಳಿಗೆ ಶುಭ ಹಾರೈಸಿದರು.

ಕಲಾವಿದರೂ ಹಾಗೂ ವಿಚಾರವಾದಿ ಲೇಖಕರೂ ಆದ ಪ್ರೊ|| ಜಿ.ಕೆ. ಗೋವಿಂದರಾವ್ ಸೇರಿದಂತೆ, ಹಿತೈಷಿಗಳು, ವಿವಿಧ ಸಾಮೂಹಿಕ ಸಂಘಟನೆಗಳ ರಾಜ್ಯ ಮುಖಂಡರುಗಳು, ಕಾರ್ಯಕರ್ತರುಗಳು ಸಮಾರಂಭದಲ್ಲಿ ಭಾಗವಹಿಸಿ ಶುಭಕಾಮನೆಗಳನ್ನು ಸಲ್ಲಿಸಿದರು.

ಕೆ.ಎಸ್.ಲಕ್ಷ್ಮಿ ಕೆ. ಮಹಾಂತೇಶ್, ಈ.ಬಸವರಾಜ್, ಎಲ್.ಕೆ. ವಿಜಯಕುಮಾರ್‌ರವರು ಹಾಡಿದ ಭಾವಗೀತೆ ಮತ್ತು ವೈಚಾರಿಕ ಹಾಡುಗಳು ಕಾರ್ಯಕ್ರಮಕ್ಕೆ ಮೆರಗು ನೀಡಿದವು. ಎಸ್.ಎಫ್.ಐ. ರಾಜ್ಯ ಅಧ್ಯಕ್ಷರಾದ ಕೆ. ಎನ್. ಉಮೇಶ್ ಕಾರ್ಯಕ್ರಮ ನಿರೂಪಿಸಿದರು.

ಶಿಕ್ಷಣ ಮಾಧ್ಯಮವಾಗಿ ಮಾತೃಭಾಷೆ...

ಪುಟ 7 ರಿಂದ

● *ಸರಕಾರದ ದಾಖಲೆಗಳ ಪ್ರಕಾರ ಇಂಗ್ಲೀಷ್ ಮಾಧ್ಯಮ ಶಾಲೆಗಳ ಸಂಖ್ಯೆ ಎಷ್ಟು?*

ಚಂ.ಪಾ: 1 ರಿಂದ 4ನೇ ಇಯತ್ತೆವರೆಗೆ ಒಂದೂ ಇಲ್ಲ. 5ನೇ ಇಯತ್ತೆಯಿಂದ ಅನುಮತಿ ಪಡೆದ ಶಾಲೆಗಳ ಸಂಖ್ಯೆ ಇಡೀ ರಾಜ್ಯದಲ್ಲಿ 400-500 ಇರಬಹುದು. ಇವು ಹೆಚ್ಚಾಗಿ ದೊಡ್ಡ ನಗರ ಪ್ರದೇಶಗಳಲ್ಲೇ.

● *ಆದರೆ ಸಧ್ಯ ಪಟ್ಟಣ, ಗ್ರಾಮೀಣ ಪ್ರದೇಶಗಳಿಗೂ ಇದು ಹರಡುತ್ತಿರುವಂತೆ ಕಾಣುತ್ತಿದೆಯಲ್ಲಾ?*

ಚಂ.ಪಾ.: ಈಗ ನಗರಗಳಲ್ಲೇ ಹೆಚ್ಚು. ಸರಿಯಾಗಿ ಅನುಷ್ಠಾನ ಮಾಡಿದರೆ ಇದನ್ನು ತಡೆಯಬಹುದು. ಆದರೆ ಅನುಷ್ಠಾನ ಬಹಳ ಮುಖ್ಯ. 1 ರಿಂದ 7ನೇ ಇಯತ್ತೆವರೆಗೆ ಅನುಷ್ಠಾನ ಆಗಬೇಕು.

● *ಈ ಅನುಷ್ಠಾನ ಹೇಗೆ ಮಾಡಬೇಕೆಂದಿದ್ದೀರಿ?*


ಚಂ.ಪಾ: ಇದನ್ನು ಉಲ್ಲಂಘಿಸಿದ ಕೆಲವು ಶಾಲೆಗಳ ಮಾನ್ಯತೆ ರದ್ದು ಮಾಡಬೇಕು..... ಏಳನೇ ಇಯತ್ತೆಯ ಪಬ್ಲಿಕ್ ಪರೀಕ್ಷೆ ಮಾತೃಭಾಷೆಯಲ್ಲಿ ಅಥವಾ ಕನ್ನಡದಲ್ಲಿ ಮಾತ್ರ ಎಂದು ಮಾಡಬಹುದು. ನಾವು ರಾಜ್ಯ ಸರಕಾರದ ಪಠ್ಯಕ್ರಮ ಅನುಸರಿಸುತ್ತಿಲ್ಲ, ಕೇಂದ್ರ ಸರ್ಕಾರದ ಐ.ಸಿ.ಎಸ್.ಸಿ.ಅಥವಾ ಸಿ.ಬಿ.ಎಸ್.ಸಿ. ಪಠ್ಯಕ್ರಮ ಅನುಸರಿಸುತ್ತೇವೆ ಎಂದೂ ಇದರಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಬಹುದು. ಆದರೆ ಇಲ್ಲೂ ರಾಜ್ಯ ಸರಕಾರಗಳಿಗೆ ಒಂದು ಹಿಡಿತವಿದೆ. ಇಂತಹ ಶಾಲೆಗಳೂ ಸಂಬಂಧಪಟ್ಟ ರಾಜ್ಯ ಸರಕಾರದಿಂದ ಎನ್.ಓ.ಸಿ. (ಅಭ್ಯಂತರ ಇಲ್ಲ ಎಂಬ ಸರ್ಟಿಫಿಕೇಟ್) ಪಡೆಯಬೇಕೆಂದಿದೆ. ರಾಜ್ಯ ಸರಕಾರ ಅದನ್ನು ಒತ್ತಾಯಿಸಬಹುದು. ದೇಶದಲ್ಲಿ ಎಲ್ಲಿ ಬೇಕಾದರೂ ವರ್ಗವಾಗುತ್ತದೆ ಎಂದಿದ್ದರೆ ಈ ಪಠ್ಯಕ್ರಮಗಳನ್ನು ಅನುಸರಿಸಬಹುದೆಂದಿದೆ. ಆದರೆ ಇದಕ್ಕೂ ಸರ್ಟಿಫಿಕೇಟ್ ಬೇಕಾಗುತ್ತದೆ. ಮುಂದೆ ವಿನಾಯಿತಿ ಅದನ್ನು ಕಡ್ಡಾಯಗೊಳಿಸಬಹುದು. (ಶಿಕ್ಷಣ) ಸಚಿವರೂ ಈ ಬಗ್ಗೆ ಕಟುವಾದ ಕ್ರಮಗಳ ಯೋಚನೆ ಮಾಡುತ್ತಿದ್ದಾರೆ. ಒಟ್ಟಿನಲ್ಲಿ ಒತ್ತಡಬೇಕು, ಅನುಷ್ಠಾನ ಬೇಕು, ವಾತಾವರಣ ನಿರ್ಮಾಣ ಆಗಬೇಕು.

● *ನೀವು ಈ ಹಿಂದೆಯೇ ಹೇಳಿದಂತೆ ಅಸಮಾನತೆಯ ಪ್ರಶ್ನೆಯೂ ಇದೆ. ಬಡವರಿಗೆ ಮಾತ್ರ ಕನ್ನಡ ಮಾಧ್ಯಮ. ಆಳುವವರಿಗೆ ಇಂಗ್ಲೀಷ್ ಮಾಧ್ಯಮ ಎಂದಾಗಿದೆ.*

ಚಂ.ಪಾ: ಹೌದು, ಈ ಇಂಗ್ಲೀಷ್ ಮಾಧ್ಯಮ ಶಾಲೆಗಳು ಶ್ರೀಮಂತರಿಗಾಗಿ ಎಂಬಂತಾಗಿದೆ. ಅದು ಹಾಗೆಯೇ ಯಜಮಾನ ಸಂಸ್ಕೃತಿಯ ಮುಖವಾಣಿಗಳಾಗುತ್ತಿವೆ.

● *ಈ ಅನುಷ್ಠಾನದಲ್ಲಿ ಇನ್ನೊಂದು ಮುಖ್ಯವಾದ ಅಡ್ಡಿ ನ್ಯಾಯಾಲಯದ ವ್ಯವಹಾರ ಆಂಗ್ಲಮಯವಾಗಿದೆ. ಅದೇ ರೀತಿ ತಾಂತ್ರಿಕ ಶಿಕ್ಷಣದಲ್ಲೂ.*

ಚಂ.ಪಾ.: ಹೌದು, 1983 ರ ಒಂದು ಜಿ.ಓ(ಸರಕಾರಿ ಆದೇಶದ) ಪ್ರಕಾರ ಹೈಕೋರ್ಟಿನ ಕೆಳಗಿನ ಹಂತಗಳಲ್ಲಿ ಕನ್ನಡ ಬಳಸಬೇಕೆಂದಿದೆ. ನ್ಯಾಯಾಂಗದ ಕೆಳಗಿನ ಹಂತಗಳಲ್ಲಿ ಕನ್ನಡದ ಬಳಕೆಯ ಬಗ್ಗೆ ಒಂದು ಕ್ರಿಯಾ ಯೋಜನೆ ಹಾಕಬೇಕೆಂದಿದ್ದೇವೆ.



● *ಭಾಷಾ ಮಾಧ್ಯಮದ ವಿಷಯದಲ್ಲಿ ಸಾಹಿತಿಗಳು, ಚಿಂತನಶೀಲರು ಕ್ರಿಯಾ ಶೂನ್ಯವಾದಂತಿದೆ. ಅವರು ಈ ಬಗ್ಗೆ ಪ್ರಾಧಿಕಾರದೊಂದಿಗೆ ಕೈಜೋಡಿಸಬಹುದಾಗಿತ್ತು.*

ಚಂ.ಪಾ.: ಅವರ ಬಗ್ಗೆ ಎಷ್ಟು ಕಮ್ಮಿ ಮಾತನಾಡಿದರೆ ಅಷ್ಟೇ ಒಳ್ಳೆಯದು. ಆದರೂ ಬಹಳಷ್ಟು ಕಡೆಗಳಿಂದ ಬೆಂಬಲ ಬರುತ್ತಿದೆ. ಆದರೆ ಇಲ್ಲಿ ಬಹಳ ಮುಖ್ಯವಾದದ್ದು ಜನಗಳ involment, ತೊಡಗುವಿಕೆ, ಪತ್ರಿಕೆಗಳನ್ನು ಅದರಲ್ಲೂ 'ವಾಚಕರ ವಾಣಿ' ಯಂತಹ ಕಾಲಂಗಳನ್ನು ಜನಪರಸಂಘಟನೆಗಳವರು, ವ್ಯಕ್ತಿಗಳು ಬಹುವಾಗಿ ಬಳಸಿಕೊಳ್ಳಬೇಕು. ○

ನೇಕಾರರ ಯಶಸ್ವಿ ನಿರಶನ

ನೇಕಾರರ ಬದುಕಿನ ನರಕಯಾತನೆಯ ಬಗ್ಗೆ 'ಐಕ್ಯರಂಗ ದ ಹಿಂದಿನ ಸಂಚಿಕೆಯೊಂದರಲ್ಲಿ ಓದಿದ್ದೀರಿ. ಇದನ್ನು ತಪ್ಪಿಸಲು ನೇಕಾರರು ಸಮರಶೀಲ ಹೋರಾಟಗಳೇ ಏಕೈಕ ದಾರಿ ಎಂದು ಕಂಡುಕೊಂಡಿದ್ದಾರೆ. ಮೇ 25 ರಿಂದ 29 ರವರೆಗೆ ನಡೆದ ಇಂತಹ ಒಂದು ಹೋರಾಟದ ಪ್ರಥಮ ಹಂತದ ವಿಜಯ ಸಾಧಿಸಿದ್ದಾರೆ.

ನೇಯ್ಗೆ ಕೂಲಿ ದರಗಳನ್ನು ಪರಿಷ್ಕರಿಸುವ ಪೂರ್ವದಲ್ಲಿ ನೇಕಾರರ ಸಂಘದ ಪ್ರತಿನಿಧಿಗಳೊಂದಿಗೆ ಚರ್ಚೆ ಮಾಡಲು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಆಡಳಿತ ವರ್ಗವು ಲಿಖಿತ ಒಪ್ಪಿಗೆ ನೀಡಿರುವ ಹಿನ್ನೆಲೆಯಲ್ಲಿ ಹುಬ್ಬಳ್ಳಿಯಲ್ಲಿ ನಿಗಮದ ಕೇಂದ್ರ ಕಛೇರಿಯ ಎದುರು ಮೇ 25 ರಿಂದ ಆರಂಭವಾಗಿದ್ದ ಕೈಮಗ್ಗ ನೇಕಾರರ ಸರದಿ ಉಪವಾಸ ಸತ್ಯಾಗ್ರಹವನ್ನು ಮೇ 29 ರಂದು ಹಿಂತೆಗೆದುಕೊಳ್ಳಲಾಯಿತು.

ನಿಗಮದ ಅಡಿಯಲ್ಲಿ ದುಡಿಯುತ್ತಿರುವ ನೇಕಾರರ ಕೂಲಿದರಗಳನ್ನು ವರ್ಷಕ್ಕೊಮ್ಮೆ ಪರಿಷ್ಕರಿಸುವ ಪರಿಪಾಠ ಕೆಲವು ವರ್ಷಗಳಿಂದ ಆರಂಭವಾಗಿದೆ. ಆದರೆ ಕೂಲಿಯ ಹೆಚ್ಚಳದ ಬಗ್ಗೆ ನಿಗಮದ ಆಡಳಿತ ವರ್ಗವು ನೇಕಾರರ ಸಂಘದ ಪ್ರತಿನಿಧಿಗಳೊಂದಿಗೆ ಮಾತುಕತೆ ನಡೆಸಲು ಒಪ್ಪುತ್ತಿರಲಿಲ್ಲ. ಕೂಲಿಯ ದರಗಳನ್ನು ಏಕಪಕ್ಷೀಯವಾಗಿ ಪ್ರಕಟಿಸುವ ನಿಗಮದ ಆಡಳಿತ ವರ್ಗದ ಕ್ರಮವನ್ನು ನೇಕಾರರು ವಿರೋಧಿಸುತ್ತಾ ಬಂದಿದ್ದರು. ಕಳೆದ ವರ್ಷ ಇದೇ ರೀತಿಯಲ್ಲಿ ನೇಕಾರರು ಹುಬ್ಬಳ್ಳಿಯಲ್ಲಿ ಸಾಮೂಹಿಕ ಸತ್ಯಾಗ್ರಹವನ್ನು ಕೈಗೊಂಡಾಗ ನೇಕಾರರ ಸಂಘದ ಪ್ರತಿನಿಧಿಗಳೊಂದಿಗೆ ಚರ್ಚಿಮಾಡಿದ ನಂತರವೇ ಕೂಲಿಯ ಪರಿಷ್ಕೃತ ದರಗಳನ್ನು ಪ್ರಕಟಿಸುವುದಾಗಿ ನಿಗಮದ ಆಡಳಿತ ವರ್ಗವು ಭರವಸೆ ನೀಡಿತ್ತು. ಆದರೆ ಕೊಟ್ಟ ಭರವಸೆಯಂತೆ ನಡೆದುಕೊಳ್ಳದೆ ಆಡಳಿತವರ್ಗವು ನೇಕಾರರಿಗೆ ದ್ರೋಹ ಬಗೆಯಿತು. ಕಾರಣ ಈ ಸಲ ಕರ್ನಾಟಕ ರಾಜ್ಯ ಕೈಮಗ್ಗ ನೇಕಾರ ಕಾರ್ಮಿಕರ ಸಮನ್ವಯ ಸಮಿತಿಯು ಕೂಲಿ ಹೆಚ್ಚಳದ ಕುರಿತಾದ ವಿವರವಾದ ಬೇಡಿಕೆ ಪಟ್ಟಿಯನ್ನು ಆಡಳಿತ ವರ್ಗಕ್ಕೆ ಸಲ್ಲಿಸಿ ಮೇ ತಿಂಗಳ 15ರ ಒಳಗಾಗಿ ಸಮನ್ವಯ ಸಮಿತಿಯ ಪ್ರತಿನಿಧಿಗಳನ್ನು ಚರ್ಚೆಗೆ ಆಮಂತ್ರಿಸದೆ ಹೋದರೆ ಮೇ 25 ರಿಂದ ಹುಬ್ಬಳ್ಳಿಯಲ್ಲಿ ನೇಕಾರರು ಸರದಿ ಸತ್ಯಾಗ್ರಹ ಆರಂಭಿಸುವರು ಎಂದು ಎಚ್ಚರಿಸಲಾಗಿತ್ತು. ನಿಗಮದ ವ್ಯವಸ್ಥಾಪಕ ನಿರ್ದೇಶಕ ಎ.ಪಿ.ಜೋಶಿ ನೇಕಾರರ ಬೇಡಿಕೆಯ ಬಗ್ಗೆ ತಲೆಕೆಡಿಸಿಕೊಳ್ಳಲು ಹೋಗಲಿಲ್ಲ. ಅನಿವಾರ್ಯವಾಗಿ ರಾಜ್ಯದ ವಿವಿಧ ಜಿಲ್ಲೆಗಳ ನೇಕಾರರು "ಹುಬ್ಬಳ್ಳಿ ಚಲೋ" ಜಾಥಾವನ್ನು ಹಮ್ಮಿಕೊಂಡರು.

ಮೇ 25ರಂದು ಹುಬ್ಬಳ್ಳಿ ರೈಲು ನಿಲ್ದಾಣದಿಂದ ನೇಕಾರರ ಮೆರವಣಿಗೆ ಆರಂಭವಾಯಿತು. ಗುಲ್ಬರ್ಗಾ, ಬಾಗಲಕೋಟೆ, ಕೊಪ್ಪಳ, ಬೆಳಗಾಂವ, ಗದಗ, ಧಾರವಾಡ ಮತ್ತು ಹಾವೇರಿ ಜಿಲ್ಲೆಗಳ ಸುಮಾರು ಒಂದು ಸಾವಿರ ಜನ ನೇಕಾರ ಸ್ತ್ರೀ ಪುರುಷರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಮೆರವಣಿಗೆಯು ವಿದ್ಯಾನಗರದಲ್ಲಿರುವ ಕಾರ್ಮಿಕ ಅಧಿಕಾರಿಗಳ ಕಛೇರಿಯನ್ನು ಸಮೀಪಿಸಿದಾಗ ಮೆರವಣಿಗೆಯಲ್ಲಿದ್ದ ನೇಕಾರರು ಪೂನಾ-ಬೆಂಗಳೂರು ಹೆದ್ದಾರಿಯ ಮೇಲೆ ಕುಳಿತುಕೊಂಡು ನೇಕಾರರಿಗೆ ತುಟ್ಟಿಭತ್ಯೆ ನೀಡಬೇಕೆಂಬ ವಿವಾದವೊಂದು ಕಾರ್ಮಿಕ ಅಧಿಕಾರಿಗಳ ನ್ಯಾಯಾಲಯದಲ್ಲಿ ಇನ್ನೂ ಇತ್ಯರ್ಥ ಆಗದಿರುವುದನ್ನು ಪ್ರತಿಭಟಿಸಿದರು. ನೇಕಾರ ಸಂಘದ ಮುಖಂಡರು ಕಾರ್ಮಿಕ ಅಧಿಕಾರಿ ಹಾಗೂ ಸಹಾಯಕ ಕಾರ್ಮಿಕ ಆಯುಕ್ತರನ್ನು ಭೆಟ್ಟಿಯಾಗಿ ಪ್ರಕರಣವನ್ನು ಕೂಡಲೇ ಇತ್ಯರ್ಥ ಮಾಡುವಂತೆ ಒತ್ತಾಯಿಸಿದರು.

ನಿಗಮದ ಕೇಂದ್ರ ಕಛೇರಿಯನ್ನು ತಲಪಿದ ಮೆರವಣಿಗೆಯು ಸಭೆಯಾಗಿ ಮಾರ್ಪಟ್ಟಿತು. ಸಮನ್ವಯ ಸಮಿತಿಯ ಅಧ್ಯಕ್ಷ ನಿತ್ಯಾನಂದಸ್ವಾಮಿಯವರು ಮಾತನಾಡಿ ನೇಕಾರರ ನಿರಶನವನ್ನು ಉದ್ಘಾಟಿಸಿದರು. ಜಿಲ್ಲಾ ಸಿ.ಐ.ಟಿ.ಯು. ಅಧ್ಯಕ್ಷ ಎಂ.ಬಿ.ಕಟ್ಟಿ, ಪ್ರಧಾನ ಕಾರ್ಯದರ್ಶಿ ಡಿ.ಜೆ. ಗೋಂದಕರ್, ಗ್ರಾಮಪಂಚಾಯತ್ ನೌಕರರ ಸಂಘದ ಸಿ. ಆರ್ ಭಟ್, ಜೀವ ವಿಮಾ ನೌಕರರ ಸಂಘದ ಆರ್.ಎಚ್.ಆಯಿ, ಡಿ.ವೈ.ಎಫ್.ಐ.ನ ಮಹೇಶ್ ಪತ್ತಾರ್ ಮತ್ತು ಎಸ್.ಎಫ್.ಐ.ನ ದ್ರಾಕ್ಷಾಯಿಣಿ ಉಳ್ಳಾಗಡ್ಡಿಮಠ ಅವರುಗಳು ಮಾತನಾಡಿ ನೇಕಾರರ ಬೇಡಿಕೆಗಳನ್ನು ಈಡೇರಿಸುವಂತೆ ನಿಗಮದ ಆಡಳಿತ ವರ್ಗವನ್ನು ಒತ್ತಾಯಿಸಿದರು.

ಮರುದಿನ ಬೆಳಿಗ್ಗೆಯಿಂದ ಒಂದೊಂದು ಗ್ರಾಮದ 5 ಜನ ಪುರುಷರು ಮತ್ತು ಇನ್ನೊಂದು ಗ್ರಾಮದ 5 ಜನ ಮಹಿಳೆಯರು 24 ಘಂಟೆಗಳ ಉಪವಾಸ ಸತ್ಯಾಗ್ರಹವನ್ನು ಆರಂಭಿಸಿದರು. ಈ ಮಧ್ಯದಲ್ಲಿ ನಿಗಮದ ಜಂಟಿ ವ್ಯವಸ್ಥಾಪಕ ನಿರ್ದೇಶಕರಾದ ಬಿ.ವಿ. ಕುಲಕರ್ಣಿಯವರು



ಸಮನ್ವಯ ಸಮಿತಿಯ ಮುಖಂಡರನ್ನು ಕರೆದು ಕೂಲಿ ಹೆಚ್ಚಳದ ಕುರಿತು ನೇಕಾರರ ಪ್ರತಿನಿಧಿಗಳನ್ನು ಕರೆದು ಚರ್ಚಿಸಲಾಗುವುದೆಂದು ನೇಕಾರರ ಸಂಘದ ಮುಖಂಡರೊಂದಿಗೆ ಚರ್ಚೆಮಾಡಲು ಸಾಧ್ಯವಿಲ್ಲವೆಂದು ಸ್ಪಷ್ಟಪಡಿಸಿದರು. ನೇಕಾರರು ಹೋರಾಟವನ್ನು ಅನಿರ್ದಿಷ್ಟವಾಗಿ ಮುಂದುವರೆಸಲು ನಿರ್ಧರಿಸಿದರು. ವ್ಯವಸ್ಥಾಪಕ ನಿರ್ದೇಶಕ ಜೋಶಿಯವರು ಹುಬ್ಬಳ್ಳಿ ಬಿಟ್ಟು ಬೆಂಗಳೂರು ಸೇರಿಕೊಂಡಿದ್ದರು. ಶಾಸಕರೂ ನಿಗಮದ ಅಧ್ಯಕ್ಷರೂ ಆದ ವಿ.ಎಸ್.ಕರ್ಜಗಿಯವರು ರಾಣೇಬೆನ್ನೂರಿನಲ್ಲಿದ್ದರು.

ನೇಕಾರರ ನಿರಶನ 3ನೇ ದಿನಕ್ಕೆ ಕಾಲಿಟ್ಟಿತು. ಸಮನ್ವಯ ಸಮಿತಿಯ ಮುಖಂಡರು ನಗರಕ್ಕೆ ಆಗಮಿಸಿದ್ದ ಗೃಹ ಸಚಿವ ಪಿ.ಜಿ.ಆರ್. ಸಿಂಧಿಯಾ ಅವರನ್ನು ಬೆಟ್ಟಿಯಾಗಿ ಅವರ ಮಧ್ಯಪ್ರವೇಶವನ್ನು ಕೋರುವ ಅರ್ಜಿ ಸಲ್ಲಿಸಲಾಯಿತು. ಉತ್ತರ ಕರ್ನಾಟಕ ಅಭಿವೃದ್ಧಿ ಪರ ಹೋರಾಟ ಸಮಿತಿಯ ಪ್ರಧಾನ ಕಾರ್ಯದರ್ಶಿ ವಿ.ಬಿ. ಹೊಂಬಳ, ನ್ಯಾಯವಾದಿ ರಟ್ಟಿಹಳ್ಳಿಮಠ, ಎ.ಐ.ಟಿ.ಯು.ಸಿ.ಯ ಎಂ. ರಾಮರಾವ್, ಕರ್ನಾಟಕ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾದ ಪ್ರೊ. ಲಿಂಗರಾಜ ಅಂಗಡಿ ಅವರುಗಳು ಆಗಮಿಸಿ ನೇಕಾರರ ಹೋರಾಟಕ್ಕೆ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದರು.

ಮೇ 29 ರಂದು ನಿಗಮದ ಚೇರ್‌ಮನ್ ವಿ.ಎಸ್. ಕರ್ಜಗಿಯವರು ಆಗಮಿಸಿ ನೇಕಾರರ ಸಂಘದ ಮುಖಂಡರೊಂದಿಗೆ ಚರ್ಚೆ ನಡೆಸಿದರು. ನೇಕಾರರ ಪರವಾಗಿ ನಿತ್ಯಾನಂದಸ್ವಾಮಿ, ಡಿ.ಎಂ. ಕಲಾಸಿ, ಹನುಮಂತಪ್ಪ ಕದರಮಂಡಲಗಿ, ಈರಪ್ಪ ಗಡಿಗಿ, ಗೋಪಾಲ ಬಗಾಡೆ, ಎ.ಎ. ಮುಲ್ಲಾ ಫಕೀರಪ್ಪ ವಿಭೂತಿ, ಬಸವರಾಜ ಕೋಳೂರು, ವಿರೂಪಾಕ್ಷಪ್ಪ ಬಗನಕಟ್ಟಿ, ಶಿವರಾಮ ಗೋಂದಕರ, ರಮೇಶ್ ಭಸ್ಮೆ ಸಂಗಪ್ಪ ಸಂಗಮದ, ರಾಮಚಂದ್ರ ಬಸನಕಟ್ಟಿ ಮತ್ತು ಗೌರವ್ವ ರೇವಣಸಿದ್ದಯ್ಯಗೋಳ್ ಚರ್ಚೆಯಲ್ಲಿ ಭಾಗವಹಿಸಿದ್ದರು.

ನೇಕಾರರ ಮುಖಂಡರ ವಾದವನ್ನು ಆಲಿಸಿದ ಶಾಸಕ ಕರ್ಜಗಿಯವರು ನೇಕಾರರ ಕೂಲಿ ದರಗಳನ್ನು ನಿಗದಿಮಾಡುವ ಮೊದಲು ಸಂಘದ ಪ್ರತಿನಿಧಿಗಳೊಂದಿಗೆ ಚರ್ಚೆಮಾಡಲಾಗುವುದೆಂದು ನೇಕಾರರಿಂದ ಬರುವ ದೂರುಗಳಿಗೆ ಉತ್ತರ ನೀಡುವ ಪರಿಪಾಠವನ್ನು ಆರಂಭಿಸಲಾಗುವುದೆಂದು ಲಿಖಿತ ಭರವಸೆ ನೀಡಿದರು. ನೇಕಾರರ ಸಂಘಕ್ಕೆ ನಿಗಮದಿಂದ ಮಾನ್ಯತೆ ದೊರಕಿಸಿಕೊಳ್ಳುವ ದಿಕ್ಕಿನಲ್ಲಿ ಇದೊಂದು ಪ್ರಥಮ ಹಂತದ ವಿಜಯವಾಗಿದೆ.


- ನಿತ್ಯಾನಂದಸ್ವಾಮಿ.


ಚೊಚ್ಚಲಹೆರಿಗೆಯ ಸಂಭ್ರಮದಂತೆ ಮಹಿಳಾಸಮ್ಮೇಳನ

ಪಟ್ಟಣಗೆರೆ ಪ್ರದೇಶದ ಹತ್ತಾರು, ಹಲವಾರು ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿದ್ದು, ನಾಡಿನ ಖ್ಯಾತ ದೇವಾಲಯವಿರುವ ರಾಜೇಶ್ವರಿ ನಗರದಲ್ಲಿ ಜೂನ್ 13 ರಂದು ನಡೆದ ಪಟ್ಟಣಗೆರೆ ಸಿ.ಎಂ.ಸಿ.ಯ ಮಹಿಳಾ ಸಮ್ಮೇಳನ.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಆಶ್ರಯದಲ್ಲಿ ನಡೆದ ಸಮ್ಮೇಳನದಲ್ಲಿ ದುಃಖ ದುಮ್ಮಾನಗಳನ್ನ ಬದುಕಿನ ಬವಣೆಗಳನ್ನು ಹೇಳಿಕೊಳ್ಳಲು ಸುಮಾರು 250 ರಿಂದ 300 ಮಹಿಳೆಯರು ಪಾಲ್ಗೊಂಡಿದ್ದರು. ಹತ್ತಾರು ಮಹಿಳೆಯರು ಚರ್ಚೆಯಲ್ಲಿ ಪಾಲ್ಗೊಂಡರು. ನೊಂದ ಮಹಿಳೆಯರು ಭಾವುಕತೆಯಿಂದ ಕಣ್ಣೀರು ಮಿಡಿದರು, ಸಹಾಯ ಕೋರಿದರು, ಸಂಘಟನೆಗೆ ಬೆಂಬಲ ಘೋಷಿಸಿದರು. ಇಡೀ ಸಮ್ಮೇಳನ ಆಕರ್ಷಕವಾಗಿ ನಡೆಯಲು ಸ್ಥಳೀಯ ಜನತೆ ಸಾಕಷ್ಟು ಕೊಡುಗೆ ನೀಡಿದ್ದರು. ಕೆಲವು ನಗರಸಭಾಸದಸ್ಯರು ಸ್ಥಳೀಯ ಮಹಿಳೆಯರು ಸಮ್ಮೇಳನ ನಡೆಸಲು ವಿವಿಧ ರೀತಿಯಲ್ಲಿ ನೆರವಾದರು. ಹಣ, ಆಹಾರ, ಪ್ರಚಾರಕ್ಕೆ ಆಟೋ, ಮೈಕು, ಕರಪತ್ರ ಸಭಾಂಗಣ ಒಬ್ಬೊಬ್ಬರು ಒಂದೊಂದನ್ನು ಕೊಡುಗೆಯಾಗಿ ನೀಡಿದರು. ಚೊಚ್ಚಲ ಹೆರಿಗೆಯ ಸಂಭ್ರಮದ ಹಾಗೆ ಮಹಿಳೆಯರ ಪ್ರಥಮ ಸಮ್ಮೇಳನಕ್ಕೆ ಸಡಗರ ತುಂಬಿದರು.

ಸ್ಥಳೀಯ ಸಮಸ್ಯೆಗಳನ್ನಾಧರಿಸಿ ಸಮ್ಮೇಳನವು ಹಲವಾರು ನಿರ್ಣಯಗಳನ್ನು ಕೈಗೊಂಡಿದೆ, ಹೋರಾಟಗಳನ್ನು ರೂಪಿಸಿದೆ. ಸಮ್ಮೇಳನದ ಉದ್ಘಾಟನೆಯನ್ನು ಅ.ಭಾ. ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಸಹಕಾರ್ಯದರ್ಶಿ ಎನ್. ಪ್ರಭಾ ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಅಖಿಲ ಭಾರತ ವಕೀಲರ ಸಂಘದ ರಾಜ್ಯ ಉಪಾಧ್ಯಕ್ಷರಾದ ಕೆ. ಆರ್. ವೆಂಕಟೇಶಗೌಡ ಹಾಗೂ ಜನವಾದಿ ಮಹಿಳಾ ಸಂಘಟನೆಯ ಬೆಂಗಳೂರು ಜಿಲ್ಲೆಯ ಅಧ್ಯಕ್ಷರಾದ ಸುನಂದಾ ಪಾಲ್ಗೊಂಡಿದ್ದರು. ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಸ್ಥಳೀಯ ಮಹಿಳಾ ಮುಖಂಡರಾದ ವಿ. ಮಧುರಾ ಮಹಿಸಿದ್ದರು. ಸಮ್ಮೇಳನಕ್ಕೆ ರಾಜೇಶ್ವರಿ ಸ್ವಾಗತ ಕೋರಿ ಲಕ್ಷ್ಮಿ ವಂದನೆ ಸಲ್ಲಿಸಿದರು.





ಪ್ರತಿನಿಧಿಗಳ ಚರ್ಚೆಗೆ ಪೂರಕವಾಗಿ ವಿ. ಮಧುರಾ ವರದಿಯೊಂದನ್ನು ಮಂಡಿಸಿದರು. ಆಟೋರಿಕ್ಷಾ ಡ್ರೈವರ್ಸ್ ಯೂನಿಯನ್‌ನ ಪುಟ್ಟಲಿಂಗಯ್ಯ, ಬಿ.ಹೆಚ್.ಇ.ಎಲ್. ನೌಕರರ ಪರವಾಗಿ ಉಮೇಶ್ ಹಾಗೂ ಸ್ಥಳೀಯ ಮುಖಂಡರುಗಳು ಸಮ್ಮೇಳನಕ್ಕೆ ಶುಭಕೋರಿ ಮಾತನಾಡಿದರು. ಸಮ್ಮೇಳನವು ಸಕ್ರಿಯವಾಗಿ ಚಟುವಟಿಕೆಗಳನ್ನು ಮುನ್ನಡೆಸಿಕೊಂಡು ಹೋಗುವ ನಿಟ್ಟಿನಲ್ಲಿ ಪಟ್ಟಣಗೆರೆ ವಲಯ ಸಮಿತಿಯೊಂದನ್ನು ಆಯ್ಕೆಮಾಡಿತು.

30 ಜನರನ್ನೊಳಗೊಂಡ ಸಮಿತಿಯು ಅಧ್ಯಕ್ಷರಾಗಿ ವಿ. ಮಧುರಾ ಅವರನ್ನು ಉಪಾಧ್ಯಕ್ಷರನ್ನಾಗಿ ಯಶೋಧ, ವನಜಾಕ್ಷಿ, ಸುನಂದ ಅವರನ್ನು ಆರಿಸುವ ಜೊತೆಗೆ ಪುಟ್ಟಮ್ಮ ಅವರನ್ನು ಕಾರ್ಯದರ್ಶಿಯಾಗಿ ಹಾಗೂ ಭಾಗ್ಯ, ರಾಧಮ್ಮ ಲಕ್ಷ್ಮಿ ಇವರುಗಳನ್ನು ಸಹ ಕಾರ್ಯದರ್ಶಿಗಳನ್ನಾಗಿಯೂ ರಾಜೇಶ್ವರಿಯವರನ್ನು ಖಜಾಂಚಿಯಾಗಿಯೂ ಆಯ್ಕೆ ಮಾಡಿತು.

'ಗೆಲುವು ನಮ್ಮದೇ' ಸ್ಫೂರ್ತಿದಾಯಕ ಹಾಡಿನೊಂದಿಗೆ ಸಮ್ಮೇಳನ ಮುಕ್ತಾಯಗೊಂಡಿತು.

ವರದಿ - ಎನ್. ಪ್ರಭಾ.

ವಿಠಲ್ ಸಾಕ್ರೆ ನಿಧನ

ಕಳೆದ 30 ವರ್ಷಗಳಿಂದ ಕಮ್ಯುನಿಸ್ಟ ಪಾರ್ಟಿಯಲ್ಲಿದ್ದು ಬಿಜಾಪುರ ಜಿಲ್ಲಾ ಸಮಿತಿಯ ಸದಸ್ಯರಾಗಿದ್ದು 1964 ರ ನಂತರವೂ ಕೆಲವು ಕಾಲ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದಲ್ಲಿ ಜಿಲ್ಲಾ ಸಮಿತಿ ಸದಸ್ಯರಾಗಿದ್ದ ವಿಠ್ಠಲ್ ಸಾಕ್ರೆಯವರು ಗಂಟಲಿನ ಕ್ಯಾನ್ಸರ್‌ನಿಂದಾಗಿ 19.5.99 ರಂದು ನಿಧನರಾಗಿದ್ದಾರೆ ಇವರು ಟೈಲರ್ಸ್ ಯೂನಿಯನ್ ಕಟ್ಟಿ ಹೋರಾಟ ಮಾಡಿದ್ದಾರೆ ಟೈಲರ್ ವೃತಿಯಲ್ಲಿದ್ದರೂ ಪಕ್ಷದಲ್ಲಿ ಕ್ರಿಯಾಶೀಲರಾಗಿ ದುಡಿದಿದ್ದಾರೆ ಕೆಲವು ತಿಂಗಳಿಂದ ಕ್ಯಾನ್ಸರ್‌ನಿಂದ ಬಳಲುತಿದ್ದು ಮರಣವನ್ನಪ್ಪಿದ್ದಾರೆ ದಿ. 2.6.99 ರಂದು ಸೇರಿದ್ದ ಬಿಜಾಪುರ ಪ್ರಾದೇಶಿಕ ಸಮಿತಿ ಸಭೆ ವಿಠಲ್ ಸಾಕ್ರೆಯವರ ಅಕಾಲಿಕ ಮರಣಕ್ಕೆ ಅಪಾರ ಸಂತಾಪ ವ್ಯಕ್ತಮಾಡಿದೆ.

ಬಿಜೆಪಿ ಆಳ್ವಿಕೆಯಲ್ಲಿ ಉತ್ತರ ಪ್ರದೇಶದ ಕಾನೂನು ಪರಿಸ್ಥಿತಿಯಿದು!

ರೆಜ್ಜಾರಿ ಉತ್ತರ ಪ್ರದೇಶದ ಮಿರ್ಜಾಪುರ ಜಿಲ್ಲೆಯ ಒಂದು ಹಳ್ಳಿ. ಬೆಡು ಕೃಷಿಕೂಲಿಕಾರರನ್ನು ಸಂಘಟಿಸುತ್ತಿರುವ ಒಬ್ಬ ಮುಖಂಡ - ದಲಿತ ಮುಶಹರ್ ಜಾತಿಯಿಂದ ಬಂದಾತ. ಭೂಮಾಲಕರ ಕೈಂಕರ್ಯ ಮಾಡಲು ಇಷ್ಟವಿಲ್ಲದೆ ಜೀವನೋಪಾಯಕ್ಕೆ ರಿಕ್ಷಾ ಓಡಿಸುತ್ತಿದ್ದವನು. ಜುಲೈ 1998 ರಲ್ಲಿ ಒಮ್ಮಿಂದೊಮ್ಮೆಗೆ ಕಾಣೆಯಾದ. ಆ ದಿನ ಅವನದೇ ಜಾತಿಗೆ ಸೇರಿದ ಇನ್ನೊಬ್ಬ ಕೂಲಿಕಾರ ಸೇತಾ ಆತನನ್ನು ಕೆಲವು ಸ್ಥಳೀಯ ಭೂಮಾಲಕರನ್ನು ಭೇಟಿಯಾಗಲು ಕರಕೊಂಡು ಹೋಗಿದ್ದ. ಆದರೆ ಮರಳಿ ಬರಲೇ ಇಲ್ಲ. ಆತನ ಹೆಂಡತಿ ಅಮರಾವತಿ ಸ್ಥಳೀಯ ಪೋಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದಾಗ, ಎಲ್ಲೋ ಹಣ ಸಂಪಾದಿಸಲು ಹೋಗಿರಬೇಕು ಎನ್ನಲಾಯಿತು. ಸೇತಾನನ್ನು, ಅವನು ಭೇಟಿ ಮಾಡಿದ ಭೂಮಾಲಕರಾದ ಅನಿಲ್, ರಾಜೇಂದ್ರ, ಕೈಲಾಶ್ ಪಟೇಲ್‌ರನ್ನು ಮತ್ತೆ-ಮತ್ತೆ ವಿನಂತಿಸಿಕೊಂಡಾಗಲು ಅವರು ಲಕ್ಷ್ಯವೇ ಕೊಡಲಿಲ್ಲ.

ನಂತರ ಏಪ್ರಿಲ್ 4, 1999 ರಂದು ಕೆರೆಯೊಂದರಲ್ಲಿ ಮೀನುಗಾರರಿಗೆ ಲುಂಗಿಯಲ್ಲಿ ಸುತ್ತಿದ್ದ ಹೆಣ ದೊರೆಯಿತು. ಲುಂಗಿ ಬೆಚು ಕೊನೆಯ ಬಾರಿಗೆ ಉಟ್ಟಿದ್ದ ಲುಂಗಿಯಂತಿತ್ತು. ಆತನ ಹೆಂಡತಿ ಹೆಣ ಬೆಚುವಿನದ್ದೇ ಎಂದು ಗುರುತಿಸಿದಳು. ಗ್ರಾಮಸ್ಥರು ಮಿರ್ಜಾಪುರದಲ್ಲಿ ಶವಪರೀಕ್ಷೆಗಳು ಅದನ್ನು ಒಯ್ಯುತ್ತಿದ್ದಾಗ ಪೋಲೀಸರು ಅವರ ಮೇಲೆರಗಿ ಹೆಣವನ್ನು ಕಿತ್ತುಕೊಂಡು ಹೋದರು.

ಆದರೆ ಜನ ಬಿಡಲಿಲ್ಲ. ಮಿರ್ಜಾಪುರ ಪೋಲೀಸ್ ಸೂಪರಿಂಟೆಂಡೆಂಟ್ ಮೇಲೆ ಒತ್ತಡ ಹಾಕಿದರು. ನಿರ್ವಾಹವಿಲ್ಲದೆ ಆತ ಸ್ಥಳೀಯ ಪೋಲೀಸ್ ಠಾಣೆಯ ಮುಖ್ಯಸ್ಥನಿಗೆ ವರದಿ ಕೇಳಿದರು. ಒಂದು ಪ್ರಾಣಿಯ ಕೊಳಿತ ದೇಹ ಎಂಬ ಉತ್ತರ ಬಂತು. ಆಗ ಎಸ್.ಪಿ. ಆ ದೇಹ ಮತ್ತು ಆಪಾದಿತ ಸೇತಾನನ್ನು ಕಳಿಸಬೇಕು ಎಂದು ಆದೇಶ ನೀಡಿದರು. ಕೇವಲ ಲುಂಗಿ ಮಾತ್ರ ಬಂತು. ನಂತರ ಹೆಣವೂ ಕಾಣೆ. ನೇತಾನೂ ಕಾಣೆ. ಬಿಜೆಪಿ ಆಡಳಿತದಿಂದ ಆ ಎಸ್.ಪಿ.ಗೆ ಟ್ರಾನ್ಸ್‌ಫರ್ ಆದೇಶ ಬಂತು!

ಇಂತಹ ಸಾವಿನ ಉದಾಹರಣೆಗಳು ಈ ಬಿಜೆಪಿ ಆಳ್ವಿಕೆಯ ರಾಜ್ಯದಲ್ಲಿ ಹರಡಿಹೋಗಿವೆ ಎನ್ನುತ್ತಾರೆ ಅಖಿಲ ಭಾರತ ಕೃಷಿಕೂಲಿಕಾರರ ಸಂಘದ ಜಂಟಿ ಕಾರ್ಯದರ್ಶಿ ಸುನೀತ್ ಚೋಪ್ರಾ. ಕೆಲವು ಸ್ಯಾಂಪಲ್ ನೋಡಿ - ಐ.ಪಿ.ಎಸ್. ಅಧಿಕಾರಿ ಜಸಬೀರ್ ಸಿಂಗ್‌ಗೆ ಮಂತ್ರಿ ರಾಘುರ್ಜಾ ಪ್ರತಾಪ್ ಸಿಂಗರಿಂದಲೇ ಪ್ರಾಣ ಬೆದರಿಕೆ! ಇನ್ನೊಬ್ಬ ಮಂತ್ರಿಯ 15 ವರ್ಷದ ಕೆಲಸಗಾರನ ಕೊಲೆ. ವಿ.ಐ.ಪಿ. ಕ್ವಾರ್ಟರ್‌ನ ಬಾಲ್ಕಾನಿಯಿಂದ ಎಸೆದು ಕೊಲೆ ಮಾಡಿದ ಈ ಕೇಸು ಈ ಪೋಲೀಸ್ ಕಡತಗಳಲ್ಲಿ ಆತ್ಮಹತ್ಯೆಯ ಪ್ರಯತ್ನದ ಕೇಸು! ತನಗೆ ಬೇಕಾದ ಐಸ್‌ಕ್ರೀಂ ಕೊಡದ್ದಕ್ಕೆ ಲಕೌನಲ್ಲಿ ಒಬ್ಬ ಪೋಲೀಸ್ ಅಧಿಕಾರಿಯ ಸಂಬಂಧಿಕನಿಂದ ಐಸ್‌ಕ್ರೀಂ ಮಾರಾಟಗಾರನ ಕೊಲೆ! ದಿಲ್ಲಿಯ ಜೆಸ್ಸಿಕಾ ಲಾಲ್‌ಳ ಕೊಲೆಗೂ ಉತ್ತರ ಪ್ರದೇಶಕ್ಕೂ ನಂಟು ಇದೆಯೆಂದು ಈಗಾಗಲೇ ತಿಳಿದಿದೆ.

ಅಖಿಲ ಭಾರತ ಕೃಷಿಕೂಲಿಕಾರರ ಸಂಘದ ರಾಜ್ಯ ಘಟಕ ಕೃಷಿಕೂಲಿಕಾರರ ಬದುಕು, ಗೌರವ, ಇದ್ದುಬಿದ್ದ ಆಸ್ತಿಗಳ ಮೇಲೆ ಹೆಚ್ಚುತ್ತಿರುವ ಇಂತಹ ಧಾಳಿಗಳನ್ನು ಪ್ರತಿರೋಧಿಸಲು ನಿರ್ಧರಿಸಿದೆ. ಬೆಚುನ ಕೊಲೆಗಡುಕರನ್ನು ಬಂಧಿಸಿ, ಶಿಕ್ಷಿಸುವ ವರೆಗೆ ಈ ಹೋರಾಟ ನಿಲ್ಲುವುದಿಲ್ಲ ಎಂದು ಸಂಘದ ಮುಖಂಡರು ಹೇಳಿದ್ದಾರೆ.

ಬುಡಕಟ್ಟು ಜನಗಳ ಮೇಲೂ ಧಾಳಿ

ವನಾಂಚಲ ರಾಜ್ಯ ಕೊಟ್ಟು ಬುಡಕಟ್ಟು ಜನಗಳ ಕಲ್ಯಾಣಕ್ಕೆ ಟೊಂಕ ಕಟ್ಟಿರುವವರು ತಾವು ಎಂಬ ಬಿಜೆಪಿಯ ಗೋಸುಂಬೆತನವೂ ಅವರ ಆಳ್ವಿಕೆಯಲ್ಲಿ ಇಲ್ಲಿ ಬಯಲಾಗಿದೆ. ಅಲಹಾಬಾದ್ ಜಿಲ್ಲೆಯ ಬದ್ವಾ ದೇವ್ರಿ ಬುಡಕಟ್ಟು ಜನಗಳೇ ಹೆಚ್ಚಾಗಿರುವ ಹಳ್ಳಿ. 50 ವರ್ಷಗಳಾದರೂ ಕುಡಿಯುವ ನೀರಿನ ಪೂರೈಕೆ ಕಾಣದ ಹಳ್ಳಿ. ಜನಕ್ಕೆ ಹಾಗೂ ಅವರ ದನಕರುಗಳಿಗೂ ಒಂದು ಕೆರೆ ಹಾಗೂ ಕಾಲುವೇ ನೀರೆ ಗತಿ.

ಈ ಬಾರಿ ಸರಕಾರದ ನಿರ್ಲಕ್ಷ್ಯದಿಂದ ಕಾಲುವೆ ಒಣಗಿಹೋಯಿತು. ಮಳೆಯಿಲ್ಲದೆ ಕೆರೆಯೂ ಬತ್ತಿ ಹೋಯಿತು. ಬುಡಕಟ್ಟು ಜನ ಒಂದು ಸ್ವಚ್ಛ ಕೆರೆಯನ್ನು ಆಶ್ರಯಿಸಬೇಕಾಯಿತು. ಆದರೆ ಅದು ತಮ್ಮದು, ಬುಡಕಟ್ಟು ಜನ ಬಳಸಬಾರದು ಎಂದು ಭೂಮಾಲಕರು ತಾಕೀತು ಮಾಡಿದರು. ಒಂದು ದಿನ ಇಬ್ಬರು ಬುಡಕಟ್ಟು ಬಾಲಕರು ದಾಹ ತಡೆಯಲಾರದೆ ಕೆರೆಯ ನೀರು ಕುಡಿಯಲು ಹೋದಾಗ ಗಲಾಟೆ ಆರಂಭವಾಯಿತು. ಆ ಇಬ್ಬರು ಮಕ್ಕಳಿಗೆ ಹೊಡೆದು ಅವರ ಮೇಲೆ ಸುಳ್ಳು ಕೇಸ್ ಹಾಕಲಾಯಿತು - ಭೂಮಾಲಕರ ತೋಟದ ಮಾವಿನ ಹಣ್ಣು ಕದ್ದರು ಎಂದು. ಇದನ್ನೇ ನೆವ ಮಾಡಿ ಸ್ಥಳೀಯ ಪೋಲೀಸ್ ಠಾಣೆ ಮುಖ್ಯಸ್ಥ ತನ್ನ 3 ಕಾನ್‌ಸ್ಟೇಬಲ್‌ಗಳೊಂದಿಗೆ ಬುಡಕಟ್ಟು ಜನಗಳ ಮನೆಗಳಿಗೆ ನುಗ್ಗಿ ಅವರನ್ನು ಥಳಿಸಲಾರಂಭಿಸಿದರು. ಜನ ಪ್ರತಿರೋಧಿಸಿದಾಗ ಹಿಮ್ಮೆಟ್ಟಿದ ಪೋಲೀಸರು ಇನ್ನಷ್ಟು ದೊಡ್ಡ ಪಡೆಯೊಂದಿಗೆ ರಾತ್ರಿ ಮತ್ತೆ ಬಂದು ಹೆಂಗಸರು, ಮಕ್ಕಳೆನ್ನದೆ ಎಲ್ಲರನ್ನೂ ಬಡಿದರು. ಹೆದರಿದ ಬುಡಕಟ್ಟು ಜನ ಹತ್ತಿರದ ಕಾಡುಗಳಿಗೆ ಓಡಿ ಹೋದರು.

ಈ ಘಟನೆಯ ಸುದ್ದಿ ಕಾಳ್ಗಿಚ್ಚಿನಂತೆ ಎಲ್ಲಾ ಕಡೆ ಹರಡಿತು. ಸುದ್ದಿ ಕೇಳಿದ ಸಿಪಿಐ(ಎಂ) ಶಾಸಕ ರಾಮ ಕಿಪಾಕರ್ ಮಧ್ಯಪ್ರವೇಶಿಸಿದರು. ಹತಾಶರಾದ ಪೋಲೀಸ್ ಅಧಿಕಾರಿಗಳು ಈಗ ಈ ಶಾಸಕನನ್ನೇ ಮುಗಿಸಿ ಬಿಡುವ ಬೆದರಿಕೆ ಹಾಕಿದ್ದಾರೆ!


ಪೋಲೀಸರ ದಾಂಧಲೆಯಲ್ಲಿ ಗಾಯಗೊಂಡ ಒಬ್ಬ ಸಹಾಯಕ್ಕೆ ಧಾವಿಸಿದ ಮಾಜಿ ಸರಪಂಚ ಹಾಗೂ ಆತನ ಸಹಯೋಗಿಗಳನ್ನೇ ಹಿಡಿದು ಹಿಂಸಿಸಿರುವ ಸುದ್ದಿಯೂ ಬಂದಿದೆ.

ಈ ಘಟನೆಗಳಿಂದ ಈ ಪ್ರದೇಶದಲ್ಲಿ ಸಾರ್ವಜನಿಕ ಕ್ರೋಧ ವ್ಯಾಪಿಸಿದೆ. ಸಿಪಿಐ(ಎಂ) ಶಾಸಕ ಇದನ್ನು ಡಿ.ಐ.ಜಿ., ಎಸ್.ಪಿ. ಇತ್ಯಾದಿಗಳ ಗಮನಕ್ಕೆ ತಂದರೂ ಕೇಂದ್ರದ ಬಿಜೆಪಿ ಮಂತ್ರಿಯ ಆದೇಶದಿಂದಾಗಿ ಏನೂ ಕ್ರಮ ಕೈಗೊಂಡಿಲ್ಲ. ಪೋಲೀಸರನ್ನು ಎದುರು ಹಾಕಿಕೊಂಡರೆ ಚುನಾವಣೆಯಲ್ಲಿ ಸೋಲು ಎದುರಿಸಬೇಕಾಗುತ್ತದೆ ಎಂದು ಈ ಕೇಂದ್ರ ಬಿಜೆಪಿ ಮಂತ್ರಿ ಹೆದರಿಸಿದ್ದಾನೆ!

ಆದರೆ ಸಿಪಿಐ(ಎಂ) ಇದನ್ನು ಲೆಕ್ಕಿಸದೆ. ಜನರನ್ನು ಈ ಸಾಮಾಜಿಕ ದಮನದ ವಿರುದ್ಧ ಅಣಿನೆರೆಸಲು ನಿರ್ಧರಿಸಿದೆ. ಮೇ 13 ಹಾಗೂ 19 ರಂದು ನಡೆದ ಮತ ಪ್ರದರ್ಶನಗಳು ಎಲ್ಲರ ಗಮನ ಸೆಳೆದವು. ಜೂನ್ 6 ರಂದು ಬೃಹತ್ ಸಭೆಯೊಂದು ನಡೆದಿದೆ.

ವಿಮಾ ನೌಕರರ ಆಂದೋಲನದ ಸ್ಫೂರ್ತಿಯ ಸೆಲೆಯಾಗಿದ್ದ ಸರೋಜ್ ಚೌಧುರಿ ಇನ್ನಿಲ್ಲ

ವಿಮಾ ನೌಕರರ ಬಲಿಷ್ಠ ಆಂದೋಲವನ್ನು ಕಟ್ಟಿ ಬೆಳೆಸಿ ಭಾರತದ ಕಾರ್ಮಿಕ ಆಂದೋಲನದಲ್ಲಿ ಒಂದು ಪ್ರಮುಖ ಸ್ಥಾನ ಗಳಿಸಿದ ಸರೋಜ್ ಚೌಧುರಿ ಜೂನ್ 17 ರ ನಸುಕಿನಲ್ಲಿ ನಿಧನ ಹೊಂದಿದರು. ಅವರಿಗೆ 72 ವರ್ಷ ವಯಸ್ಸಾಗಿತ್ತು. ಅವರು ಎರಡು ದಶಕಗಳ ಕಾಲ ಅಖಿಲಭಾರತ ವಿಮಾ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿಯಾಗಿದ್ದು ವಿಮಾ ನೌಕರರ ನಡುವೆ ಒಂದು ಬಲಿಷ್ಟ ಪ್ರಜ್ಞಾಶೀಲ ಪ್ರಜಾಪ್ರಭುತ್ವ ಆಂದೋಲನ ಬೆಳೆಯಲು ಕಾರಣಕರ್ತ ರಾದವರು. ಬೆಂಗಳೂರು, ಉಡುಪಿ ಮತ್ತಿತರ ಕರ್ನಾಟಕದ ಕೇಂದ್ರಗಳಿಗೆ ಹಲವು ಬಾರಿ ಭೇಟಿ ನೀಡಿದ್ದ ಅವರು ಕರ್ನಾಟಕದ ಕಾರ್ಮಿಕ ಚಳುವಳಿಯಲ್ಲಿ, ಪ್ರಜಾಪ್ರಭುತ್ವವಾದಿ ಚಳುವಳಿಗಳಲ್ಲಿ ಪ್ರಮುಖ ಸ್ಥಾನಗಳಲ್ಲಿರುವ ಬಿ.ಮಾಧವ, ಸಿ.ಆರ್.ಭಟ್, ಕೆ.ವಿ. ಶ್ರೀನಿವಾಸ್ ಮುಂತಾದ ಹಲವರಲ್ಲಿ ಸ್ಫೂರ್ತಿ ತುಂಬಿದ ನೇತಾರರು. ಅವರ ವ್ಯಾಪಕ ಜ್ಞಾನಭಂಡಾರ, ಸ್ಫೂರ್ತಿದಾಯಕ ಭಾಷಣಗಳು ಎಲ್ಲದಕ್ಕಿಂತಲೂ ಹೆಚ್ಚಾಗಿ ಅವರ ವಿನಯಶೀಲತೆ ವಿಮಾ ನೌಕರರ ಆಂದೋಲನದಲ್ಲಿ ದಂತಕಥೆಯೇ ಆಗಿಬಿಟ್ಟಿದೆ.



ಎಲ್.ಐ.ಸಿ.ಯಿಂದ ನಿವೃತ್ತಿಯ ನಂತರ ಅವರು ಸಿಐಟಿಯುನಲ್ಲಿ ಆದರ ಅಖಿಲ ಭಾರತ ಖಜಾಂಚಿಯಾಗಿ ಹಾಗೂ ಸಿಪಿಐ(ಎಂ) ಕೇಂದ್ರ ಸಮಿತಿಯ ಕಛೇರಿಯಲ್ಲಿ ಸೇವೆ ಸಲ್ಲಿಸಿದ ಅವರು ಪಕ್ಷದ ಕೇಂದ್ರ ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ'ಯಲ್ಲಿ ನಿಯಮಿತವಾಗಿ ಬರೆಯುತ್ತಿದ್ದರು.

ಸಮರ್ಪಣಾ ಭಾವನೆಯ ಮಾದರಿನೇತಾರ ಅವರು ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಶ್ರದ್ಧಾಂಜಲಿ ಅರ್ಪಿಸಿದೆ. ಅರವತ್ತರ ದಶಕದಲ್ಲಿ ಭಾರತದಲ್ಲಿ ಗಣಕೀಕರಣದ ವಿರುದ್ಧ ಹೋರಾಟಕ್ಕೆ ಅವರು ನೀಡಿದ ಕಾಣಿಕೆಯನ್ನು ನೆನಪಿಸಿಕೊಳ್ಳುತ್ತಾ ಸಿಐಟಿಯು ಅವರಿಗೆ ನಮನ ಸಲ್ಲಿಸಿದೆ. ಸರೋಜ್ ಚೌಧುರಿಯವರು ಇನ್ನಿಲ್ಲ ಎಂಬುದು ಆಘಾತಕರ ಸುದ್ದಿ, ಇಡೀದೇಶದ ಕಾರ್ಮಿಕ ಆಂದೋಲನಕ್ಕೆ, ಪ್ರಗತಿಪರ, ಪ್ರಜಾಪ್ರಭುತ್ವ ಆಂದೋಲನಕ್ಕೆ ಒಂದು ದೊಡ್ಡ ನಷ್ಟ ಎಂದು ಅಖಿಲ ಭಾರತ ರಾಜ್ಯ ಸರಕಾರೀ ನೌಕರರ ಒಕ್ಕೂಟದ ಅಧ್ಯಕ್ಷ ಸುಕೋಮಲ್ ಸೇನ್ ಹೇಳಿದ್ದಾರೆ.

ಪುಟ 4ರಿಂದ


.........ಕಾಲುವೆ ಬಚಾವೋ ಆಂದೋಲನ

ರೈತರ ಜಾಗೃತಾಂದೋಲನಕ್ಕೆ ತಯಾರಿ

ಜೂನ್ 22 ರಿಂದ ಆಳುವ ವರ್ಗದ ಯಾವುದೇ ದಾಳಿಗೆ ಉತ್ತರ ಕೊಡಲು ರೈತರ ಜಾಗೃತಾಂದೋಲನಕ್ಕೆ ಕರೆ.

ರೈತರು ಒಂದೆಡೆ ಸ್ಥಳೀಯ ಆಳುವ ವರ್ಗದ ದಿನನಿತ್ಯದ ಒತ್ತಡ ಇನ್ನೊಂದೆಡೆ ಕಾಲುವೆಯ ಭವಿಷ್ಯ ರೈತ ಸಂಘದ ನಾಯಕತ್ವ, ಇವೆರಡರ ಮಧ್ಯೆ ಒಂದೆಡೆ ಬರಲೇಬೇಕು. ಅದಕ್ಕಾಗಿ ಜುಲೈ 12 ರಂದು ತಾಲೂಕಿನ ಜಾಲಹಳ್ಳಿಯಲ್ಲಿ ರೈತರ ಬೃಹತ್ ಬಹಿರಂಗ ಸಭೆಯ ಮುಖಾಂತರ ತಾಲ್ಲೂಕು ಸಮ್ಮೇಳನಕ್ಕೆ ಕರೆ ಕೊಡಲಾಗಿದೆ. ಪಂಚಾಯ್ತಿ ಮಟ್ಟಗಳಲ್ಲಿಯೂ ಸಮಾವೇಶ, ಸತ್ಯಾಗ್ರಹಗಳನ್ನು ಹಮ್ಮಿಕ್ಕೊಳ್ಳಲಾಗಿದೆ. ಈ ಮಧ್ಯೆ 5-6 ವರ್ಷಗಳಿಂದ ಹೋರಾಟ ಸಮಿತಿಯ ಪ್ರಮುಖ ಭಾಗವಾಗಿ ಹಾಗೂ ಸ್ವತಂತ್ರವಾಗಿ ಕೃಷ್ಣಬಲದಂಡೆ ಕಾಲುವೆಗಾಗಿ ದೀರ್ಘ ಹೋರಾಟ ನಡೆಸಿದ ಕರ್ನಾಟಕ ಪ್ರಾಂತ ರೈತ ಸಂಘದ ಪಾತ್ರವನ್ನು ಜನ ಸಾಮಾನ್ಯರು ಮರೆಯುವಂತೆ ಮಾಡಲು ರಾಜಕೀಯ ಪಕ್ಷಗಳು ಮೇಲಾಟ ನಡೆಸಿವೆ. ಈ ಮೇಲಾಟದಲ್ಲಿ ಜನತಾದಳದ ಶಾಸಕಿ ಲಲಿತಾ ನಾಯಕ್ ರವರು ಈ ಬಲದಂಡೆ ಕಾಲುವೆಗೆ ಸಂಬಂಧಿಸಿದ ಸಮಾರಂಭಗಳಲ್ಲಿ ಕರ್ನಾಟಕ ಪ್ರಾಂತ ರೈತಸಂಘವನ್ನು ಕಡೆಗಣಿಸಿ ತಾವೇ ಈ ಕಾಲುವೆ ಕಾಮಗಾರಿಗಳಿಗೆ ಕಾರಣರೆಂದು ಬಿಂಬಿಸಿ ಚುನಾವಣಾ ಸಂದರ್ಭದಲ್ಲಿ ಜನರನ್ನು ವಂಚಿಸಲು ಖಂಡನೀಯ ಪ್ರಯತ್ನ ನಡೆಸಿದ್ದಾರೆ.

ಕೇಂದ್ರ ನಾಗರಿಕ ವಿಮಾನಯಾನ ಸಚಿವರು ನಗೆ ಪಾಟಲು



ಬಿ.ಬಿ.ಸಿ.ಯಲ್ಲಿ ಪ್ರತಿ ಶುಕ್ರವಾರ ಬಿತ್ತರಿಸುವ ಕಾರ್ಯಕ್ರಮವೊಂದರಲ್ಲಿ ಬಿಜೆಪಿ ಕೇಂದ್ರ ಮಂತ್ರಿ ಅನಂತಕುಮಾರ್ ತನ್ನ ಉಡಾಫೆ ಮಾತುಗಳಿಂದ ನಗೆಪಾಟಲಾದ ರೀತಿ ಬಿಜೆಪಿ ಬೊಗಳೆಗೆ ಜನ ಸುಮ್ಮನೆ ತಲೆಯಾಡಿಸುವುದಿಲ್ಲ ಎಂಬುದನ್ನು ಪ್ರಪಂಚಕ್ಕೆ ತೋರಿಸಿತು.

ಬೆಂಗಳೂರಿನಲ್ಲಿ ಅಂದು ಧಾರಕಾರ ಮಳೆ ಸುರಿದಿತ್ತು.ಇಡೀ ವಾತಾವರಣ ತಂಪಾಗಿತ್ತು. ಒಂದು ರೀತಿಯ ಕಚಗುಳಿ ಇಡುವ ಚಳಿಗಾಳಿ ದೇಹಕ್ಕೆ ಬೆಚ್ಚನೆ ರಕ್ಷಣೆ ಬೇಕೆಂದು ಕೇಳುವಂತಿತ್ತು. ಆದರೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ಟಾಟಾ ಆಡಿಟೋರಿಯಂನಲ್ಲಿ ಕೇಂದ್ರದ ನಾಗರಿಕ ವಿಮಾನಯಾನ ಸಚಿವರ ಮುಖವೆಲ್ಲ ಕೆಂಪಾಗಿ ಬೆವರಿಳಿಯುತ್ತಿತ್ತು.

ಅದು ನಡೆದಿದ್ದು ಹೀಗೆ....

ನ್ಯೂಡೆಲ್ಲಿ ಟೆಲಿವಿಷನ್ ಬಿ.ಬಿ.ಸಿ. ಸಹಯೋಗದೊಂದಿಗೆ ಪ್ರತಿ ಶುಕ್ರವಾರ ಬಿತ್ತರಿಸುವ "Question time India" ಈ ಬಾರಿ ಬೆಂಗಳೂರಿನಲ್ಲಿ ಕಾರ್ಯಕ್ರಮದ ಚಿತ್ರೀಕರಣವನ್ನು ಪ್ರಯೋಜಿಸಲಾಗಿತ್ತು.

9.6.99ರಂದು ಎನ್.ಡಿ.ಟಿ.ವಿ.ಯ ಮುಖ್ಯಸ್ಥರಾದ ಪ್ರಣಯ್‌ರಾಯ್‌ರವರೇ ಶ್ಲಾಘಿಸಿದಂತೆ ಅತ್ಯಂತ ಹೆಚ್ಚು ಸಭಿಕರು ಪಾಲ್ಗೊಂಡ ಕಾರ್ಯಕ್ರಮವಾಗಿತ್ತು.

ಸಭಿಕರ ಪ್ರಶ್ನೆಗಳಿಗೆ ಉತ್ತರಿಸಲು ಪೆನಲ್‌ನಲ್ಲಿ ಕರ್ನಾಟಕದ ಮುಖ್ಯಮಂತ್ರಿ ಶ್ರೀ ಜೆ.ಎಚ್. ಪಟೇಲ್, ಕೆ.ಪಿ.ಸಿ.ಸಿ.ಐ.ನ ಅಧ್ಯಕ್ಷ ಶ್ರೀ ಎಸ್.ಎಂ. ಕೃಷ್ಣ ವಿಮೋಚನಾ ಮಹಿಳಾ ಸಂಘಟನೆಯ ಡೋನಾ ಫರ್ನಾಂಡೀಸ್, ಮತ್ತು ಕೇಂದ್ರ ಸಚಿವ ಅನಂತ ಕುಮಾರ್ ಪ್ರಾರಂಭದಲ್ಲಿಯೇ ತನ್ನ ಸಹಜ ಉಡಾಫೆಯ ಉತ್ತರಗಳ ಮೂಲಕವೇ ಪ್ರಾರಂಭಿಸಿದ ಕೇಂದ್ರ ಸಚಿವರು ಒಂದು ಹಂತದಲ್ಲಿ ಉತ್ತರಿಸಲು ತಡಬಡಾಯಿಸಬೇಕಾಯ್ತು.

ಜನತಾದಳವನ್ನು "ಜಗಡಾದಳ"ವೆಂದು ಕರೆದು ತಾನೇನೋ ಮಹಾ ಮೇಧಾವಿ ಎಂಬಂತೆ ತೋರಿಸಿಕೊಳ್ಳ ಹೊರಟ ಸಚಿವರಿಗೆ ಪ್ರಣಯ ರಾಯ್ ಕೊಟ್ಟ ತಿರುಗೇಟು... ಹಾಗಾದ್ರೆ ದೆಹಲಿ, ಉ. ಪ್ರದೇಶಗಳಲ್ಲಿ ಇರುವ ಜಗಳದ ಬಗ್ಗೆ ಏನು ಹೇಳುತ್ತೀರಿ?... ಅದಕ್ಕೆ ಸಮಜಾಯಿಸಿ ಕೊಡಲು ಹೋಗಿ ಅಂಗೈ ತೋರಿಸಿ ಅವಲಕ್ಷಣ ಎನಿಸಿಕೊಳ್ಳುವುದು ಹೇಗೆ ಎಂದು ತೋರಿಸಿ ಕೊಟ್ಟರು.

ಕೋಮುವಾದಕ್ಕೆ ಸಂಬಂಧಪಟ್ಟಂತೆ ಬಂದ ಒಂದು ಪ್ರಶ್ನೆಗೆ ಅವರು ಕೊಟ್ಟ ಉತ್ತರ ಒಟ್ಟು ಪ್ರೇಕ್ಷಕರಿಂದ ಛೀಮಾರಿ ಹಾಕಿಸಿಕೊಳ್ಳುವಂತೆ ಮಾಡಿತು.

ಪ್ರಶ್ನೆ : ಕರ್ನಾಟಕ ರಾಜ್ಯ ಶಾಂತಿ ಸೌಹಾರ್ದತೆಗೆ ಹೆಸರಾದ ರಾಜ್ಯವಾಗಿತ್ತು. ಇತ್ತೀಚೆಗೆ ಇಲ್ಲಿ ಕೋಮು ಸಾಮರಸ್ಯ ಹದಗೆಡುತ್ತಿದೆ. ಐಶ್ವರ್ಯ ಅಲ್ಪ ಸಂಖ್ಯಾತರನ್ನು ಈಗ ಗುರಿಮಾಡಲಾಗುತ್ತದೆ. ಇತ್ತೀಚೆಗೆ ಮೈಸೂರು ನಗರದಲ್ಲಿ ಕ್ರಿಶ್ಚಿಯನ್ ಸಮುದಾಯದ ವಿರುದ್ಧ ಘೋಷಣೆಗಳನ್ನು ಬರೆದ ದೊಡ್ಡ ಫಲಕಗಳನ್ನು ನಗರದುದ್ದಕ್ಕೂ ಹಾಕಲಾಗಿತ್ತು. ಆದರ ಪ್ರಾಯೋಜಕರು ಬಿ.ಜೆ.ಪಿಯ ಎಂ.ಎಲ್.ಸಿ. ಯಾಕೆ ಹೀಗೆ? ಇದನ್ನು ಸರಿಪಡಿಸಲು ಯಾವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ವಿಮಲಾ ಕೆ. ಎಸ್.

ಪ್ರಶ್ನೆಗೆ ಪೂರಕವಾಗಿ ಮತ್ತು ರಾಜ್ಯದಲ್ಲಿ ಕೋಮು ಸೌಹಾರ್ದತೆಯ ವಾತಾವರಣ ಹದಗೆಡುತ್ತಿರುವಾಗ, ದೌರ್ಜನ್ಯಗಳು ನಡೆಯುತ್ತಿರುವಾಗ ಸರ್ಕಾರ ಕಣ್ಣು ಮುಚ್ಚಿ ಕುಳಿತಿರುವುದೂ ಕೋಮುವಾದ ಬೆಳೆಯಲು ಕಾರಣವೆಂದು ಡೋನಂ, ಕೆಲವು ಸ್ಥಾಪಿತ ಹಿತಾಸಕ್ತಿಗಳು ಪ್ರಜ್ಞಾಪೂರ್ವಕವಾಗಿ ಸಾಮರಸ್ಯ ಕದಡುವ ಕೆಲಸದಲ್ಲಿ ತೊಡಗಿರುವ ಹಿನ್ನೆಲೆಯಲ್ಲಿ ಇಂತಹ ಘಟನೆಗಳು ಜರುಗುತ್ತಿ ವೆಯೆಂದು ಎಸ್.ಎಂ. ಕೃಷ್ಣ ಹೇಳಿದರೆ ಕೇಂದ್ರ ಸಚಿವರ ಮಾತಿನ ವೈಖರಿಯೇ ಬೇರೆ.

ಅವರ ಲೆಕ್ಕದಲ್ಲಿ ಇಡೀ ದೇಶದ ಜನ ಮೂರ್ಖರು. ಬಿಜೆಪಿಯೆಂಬ ಮಹಾ ಮೇಧಾವಿ ಪಕ್ಷದ ಎಲ್ಲ ಮಾತುಗಳನ್ನು ಜನ ನಂಬಿ ಒಪ್ಪಿಕೊಂಡುಬಿಡುತ್ತಾರೆಂಬ ಅಹಂಕಾರದ ಉತ್ತರ ಬಂತು.

ಅವರ ಪ್ರಕಾರ ಕಳೆದ ಒಂದು ವರ್ಷದಲ್ಲಿ ಈ ದೇಶದಲ್ಲಿ ಕೋಮುಗಲಭೆಗಳೇ ನಡೆದಿಲ್ಲ. ಅತ್ಯಂತ ಸಾಮರಸ್ಯದ ವಾತಾವರಣವಿತ್ತು... ಹೀಗೆ ಮುಂದುವರೆಯಲಿದ್ದ ಅವರನ್ನು ಇಡೀ ಪ್ರೇಕ್ಷಕರು ಕೂಗಿ ಗಲಾಟೆ ಎಬ್ಬಿಸಿ ಬಾಯಿಮುಚ್ಚಿಸಿದರು. ಆದರೂ ಮುಂದುವರೆದ ಅವರು ತಮ್ಮ ಸಾಧನೆಯೆಂಬಂತೆ ಕಾಶ್ಮೀರಕ್ಕೆ ಜನ ಹೋಗಲೇ ಹೆದರುತ್ತಿದ್ದರು, ಈಗ... ಎನ್ನುವಾಗಿ ಪ್ರಣಯ್‌ರಾಯ್ ಮಧ್ಯೆ ತಡೆದು ಪ್ರಶ್ನೆ ಕರ್ನಾಟಕದ್ದು ಇಲ್ಲಿಗೆ ಸಂಬಂಧಿಸಿದಂತೆ ಉತ್ತರಿಸಿ ಎಂದರು. ಮತ್ತೆ ತನ್ನದೇ ಧಾಟಿಯಲ್ಲಿ ಕೋಮು ಸೌಲಾರ್ಧತೆಯ ಭಾಷಣ ಮಾಡಲು ಹೊರಟಾಗ ಸಚಿವರು ಪ್ರೇಕ್ಷಕ ವೃಂದದಲ್ಲಿ ಭಾರತ ಜನತಾಪಕ್ಷದ ಬೆಂಬಲಿಗರಿಂದಲೂ ಬೈಗಳು ತಿನ್ನಬೇಕಾಯಿತು. ಬಂಡೆಲ್ ರಾಜ, ಸುಳ್ಳು ಹೊಡಿಬೇಡ ಎಂದೆಲ್ಲ ಕೂಗುತ್ತಿದ್ದ ಪ್ರೇಕ್ಷಕರ ಕೂಗಾಟಕ್ಕೆ ಸಚಿವರ ಮುಖದಿಂದ ಬೆವರಿಳಿಯಿತು. ಮತ್ತೆ ಅವರ ರಕ್ಷಣೆಗೆ ಪ್ರಣಯ್‌ರಾಯ್ ಬಂದು ಮುಂದಿನ ಪ್ರಶ್ನೆಗೆ ಅವಕಾಶಮಾಡಿದರು. "ಕಾವೇರಿ ನದಿ ವಿವಾದ"ದ ಪ್ರಶ್ನೆಯಲ್ಲಿಯೂ ಇದು ವಾಜಪೇಯಿಯವರ ಸಾಧನೆ ಎಂದು ಬಣ್ಣಿಸ ಹೊರಟ ಸಚಿವರಿಗೆ ಹಾಗಾದರೆ 4 ರಾಜ್ಯಗಳ ಮುಖ್ಯ ಮಂತ್ರಿಗಳ ಪಾತ್ರವನ್ನೇಕೆ ಗುರುತಿಸುವುದಿಲ್ಲ ಎಂದು ಪ್ರೇಕ್ಷಕರ ಕೋಪಕ್ಕೆ ತುತ್ತಾಗಬೇಕಾಗಿ ಬಂತು. ಒಟ್ಟಿನಲ್ಲಿ ಬಿಜೆಪಿಯ ಬೊಗಳೆಗೆ ಜನ ಸುಮ್ಮನೆ ತಲೆಯಾಡಿಸುವುದಿಲ್ಲ ಎಂದು "Question time India" ಪ್ರಪಂಚಕ್ಕೆ ತೋರಿಸಿತು.

ಯುದ್ಧ ನಿಲ್ಲಿಸಲು ನಾಟೋ-ಯುಗೋಸ್ಲಾವಿಯ ಒಪ್ಪಂದ

ಯುಗೋಸ್ಲಾವಿಯದಲ್ಲಿ ಮಸಣದ 'ಶಾಂತಿ'



ರಾಜಧಾನಿ ಬೆಲ್‌ಗ್ರೇಡ್‌ನಲ್ಲಿ ನಾಟೋ ಬಾಂಬ್ ಧಾಳಿಗೆ ಆಹುತಿಯಾದ ಆಸ್ಪತ್ರೆಯನ್ನು ಅಂತರ್‍ರಾಷ್ಟ್ರೀಯ ಪತ್ರಿಕಾ ಪ್ರತಿನಿಧಿಗಳು ಪರೀಕ್ಷಿಸುತ್ತಿದ್ದಾರೆ.

ಯುಗೋಸ್ಲಾವಿಯಾದ ಆಕಾಶದಲ್ಲಿ ಗರ್ಜಿಸುತ್ತಾ ಅಟ್ಟಹಾಸ ಮಾಡುತ್ತಿದ್ದ ನಾಟೋ ಬಾಂಬರುಗಳ ಆರ್ಭಟ ನಿಂತಿದೆ. ಯುದ್ಧ ನಿಲ್ಲಿಸಲು ನಾಟೋ ಮತ್ತು ಯುಗೋಸ್ಲಾವಿಯದ ಅಧ್ಯಕ್ಷರ ನಡುವೆ ಒಪ್ಪಂದವಾಗಿದೆ. ಆದರೆ ಒಪ್ಪಂದದ ಪ್ರಕಾರ ಕೊಸೊವೊ ನಾಟೋದ ಐದು ದೇಶಗಳ ವಸಾಹತುವಿನಂತೆ ಇರುತ್ತದೆ.

ಯುದ್ಧ ಆರಂಭವಾದಾಗಿನ ಎಲ್ಲ ಸಮಸ್ಯೆಗಳು - ಕೊಸೊವೊದ ಜನಾಂಗೀಯ ಸಮಸ್ಯೆ, ನಿರಾಶ್ರಿತರ ಸಮಸ್ಯೆ - ಇನ್ನೂ ಉಲ್ಬಣಗೊಂಡಿವೆ. ಈ ಯುದ್ಧ ಸಾಧಿಸಿದ್ದೇನು? ಈ ಮಸಣದ ಶಾಂತಿ ಸಾಧಿಸುವುದು ಏನು?

ಹನ್ನೊಂದು ವಾರಗಳ ಬರ್ಬರ ಬಾಂಬ್ ದಾಳಿ ಮಾಡಿ ಯುಗೋಸ್ಲಾವಿಯವನ್ನು ಅರ್ಧಕರ್ಧ ನಾಶ ಮಾಡಿದ ನಂತರ, ನಾಟೋ ಮತ್ತು ಯುಗೋಸ್ಲಾವಿಯಗಳ ನಡುವೆ ಯುದ್ಧ ನಿಲ್ಲಿಸಲು ಒಪ್ಪಂದ ಆಗಿದೆ. ಜಿ-8(ಏಳು ಸಾಮ್ರಾಜ್ಯಶಾಹಿಗಳು + ರಶ್ಯಾ) ದೇಶಗಳು ತಯಾರಿಸಿದ ಯುದ್ಧ ನಿಲ್ಲಿಸುವ ಯೋಜನೆಯನ್ನು ರಶ್ಯಾದ ಪ್ರಯತ್ನದಿಂದ ಯುಗೋಸ್ಲಾವಿಯ ಒಪ್ಪಿಕೊಂಡಿದೆ. ಒಪ್ಪಂದದ ಪ್ರಕಾರ ಕೊಸೊವೊ ಪ್ರಾಂತ್ಯದಿಂದ ಯುಗೋಸ್ಲಾವಿಯಾದ ಪಡೆಗಳು ತೆರವು ಮಾಡಬೇಕು. ಅದರ ಬದಲು ವಿಶ್ವಸಂಸ್ಥೆಯ ನಿರ್ಣಯದ ಪ್ರಕಾರ ನಾಟೋದ ಐದು ದೇಶಗಳ ಸೈನಿಕರಿರುವ ಸೈನ್ಯದ ನಿಯಂತ್ರಣದಲ್ಲಿ ಕೊಸೊವೊ ಇರುತ್ತದೆ. (ನಾಟೋ-ಯುಗೋಸ್ಲಾವಿಯಾದ ಒಪ್ಪಂದದ ಮುಖ್ಯ ಅಂಶಗಳು ಬಾಕ್ಸ್‌ನಲ್ಲಿ ನೋಡಿ)

ಯುಗೋಸ್ಲಾವಿಯಾದ ಪ್ರಾಂತ್ಯವಾದ ಕೊಸೊವೊದಲ್ಲಿ ಅಲ್ಬೇನಿಯನ್ ಜನಾಂಗದ ಜನರ ಮೇಲೆ ಸೈನ್ಯ 'ನರಮೇಧ' ನಡೆಸುತ್ತಿದೆ, ಜನಾಂಗೀಯ ಸಮಸ್ಯೆ ಉಲ್ಬಣಗೊಳಿಸುತ್ತಿದೆ, ಇದರಿಂದ ಅಲ್ಬೇನಿಯನ್ ಜನಾಂಗದವರು ಕೊಸೊವೊರು ನಿರಾಶ್ರಿತರಾಗಿ ಓಡಿ ಹೋಗುತ್ತಿದ್ದಾರೆ, ಇದನ್ನು ನಿಲ್ಲಿಸಲು ಯುಗೋಸ್ಲಾವಿಯ ಸರ್ಕಾರಕ್ಕೆ ಬುದ್ದಿ ಕಲಿಸಬೇಕೆಂದು ನಾಟೋ ಏಕಪಕ್ಷೀಯವಾಗಿ ಯುದ್ಧ ಆರಂಭಿಸಿದ್ದು. ಕೊಸೊವೊ ಪ್ರತ್ಯೇಕತಾವಾದಿ ಕೆ.ಎಲ್.ಎ. ಎಂಬ ಭಯೋತ್ಪಾದಕ ಗುಂಪು ಮತ್ತು ಯುಗೋಸ್ಲಾವಿಯದ ನಡುವೆ ಆಂತರಿಕ ಯುದ್ಧ ನಿಲ್ಲಿಸಬೇಕಾದರೆ ಇದು ಅಗತ್ಯ ಎಂದಿತ್ತು.

ಹನ್ನೊಂದು ವಾರಗಳ ಸತತ ಬಾಂಬ್ ದಾಳಿ, ಭಾರೀ ವಿನಾಶದ ನಂತರ -

ಕೊಸೊವೊರ ಜನಾಂಗೀಯ ಸಮಸ್ಯೆ ಬಗೆಹರಿಯಿತೆ?

ಯುಗೋಸ್ಲಾವೀಯದಲ್ಲಿ ಶಾಂತಿ ನೆಲೆಸಿತೆ?

ನಿರಾಶ್ರಿತರ ಸಮಸ್ಯೆ ಬಗೆಹರಿಯಿತೆ?

ಕೊಸೊವೊದಲ್ಲಿ 'ಶಾಂತಿ' ನೆಲೆಸಲು ಹೂಡಿದ ಯುದ್ಧದ ಪರಿಣಾಮ ಏನು? ನಾಟೋದ ಈ ಯುದ್ಧದ ವೆಚ್ಚ ಏನು?

ಈ ಪ್ರಶ್ನೆಗಳಿಗೆ ಉತ್ತರ ಹುಡುಕಿದರೆ (ಬಾಕ್ಸ್‌ಗಳನ್ನು ನೋಡಿ) ಎಲ್ಲರ ಉತ್ತರ ನಾಟೋದ ಉದ್ದೇಶ ಯಾವುದೇ ಸಮಸ್ಯೆ ಪರಿಹರಿಸುವುದು ಆಗಿರಲಿಲ್ಲ. ಇಡೀ ವಿಶ್ವಕ್ಕೆ ತಾನು ಏಕಮಾತ್ರ ಸೂಪರ್‌ಪವರ್, ತಾನು ಹೇಳಿದ ಹಾಗೆ ಕೇಳಬೇಕು, ಇಲ್ಲದಿದ್ದರೆ ಯುಗೋಸ್ಲಾವಿಯಾಗೆ ಆದ ಗತಿ ಆಗುತ್ತದೆ ಎಂದು ಇಡೀ ಜಗತ್ತಿಗೆ ಸಾರುವುದು ಆಗಿತ್ತು.

ಅದು ಮಾತ್ರವಲ್ಲ, ಈ ಯುದ್ಧ ಅಮೆರಿಕದ ಶಸ್ತ್ರಾಸ್ತ್ರ ಕಂಪನಿಗಳಿಗೆ ಸುಗ್ಗಿಯಾಗಿತ್ತು. ಈಗ ಕೊಸೊವೊ ಮತ್ತು ನೆರೆಯ ಕೆಲವು ದೇಶಗಳಿಗೆ ಆದ ಹಾನಿ, ತುಂಬಿಸಲು ಪುನರ್ನಿರ್ಮಾಣ ಮಾಡಲು ದೊಡ್ಡ ಪ್ರಮಾಣದ ಕಾಂಟ್ರಾಕ್ಟ್‌ಗಳಿಂದ ಅಮೆರಿಕನ್ ಕಂಪನಿಗಳಿಗೆ ಪುನಃ ಸುಗ್ಗಿ (ಬಾಕ್ಸ್‌ಗಳನ್ನು ನೋಡಿ) ಈ ಯುದ್ಧದ ನಂತರ ಯುಗೋಸ್ಲಾವಿಯಾ, ಅದರ ನೆರೆ ಹೊರೆ ಮಾತ್ರವಲ್ಲ, ಇಡೀ ಜಗತ್ತಿನ ಯುದ್ಧದ ವಾತಾವರಣ ನಿರ್ಮಾಣವಾಗಿದೆ. ಇನ್ನೊಂದು ಶೀತಲ ಸಮರದತ್ತ ಜಗತ್ತು ಸಾಗಿದೆ. ಈ ಯುದ್ಧದ ಉದ್ದೇಶವೂ ಅದೇ ಆಗಿತ್ತು. ಆದ್ದರಿಂದಲೇ ಈಗ ಬಂದಿರುವುದು ಶಾಂತಿ ಅಲ್ಲ. 'ಮಸಣ'ದ 'ಶಾಂತಿ' - ಇಡೀ ಜಗತ್ತನ್ನು 'ಮಸಣ'ದಂತೆ ಮಾಡಬಲ್ಲ 'ಶಾಂತಿ'

ಯುದ್ಧದ ಪರಿಣಾಮ ಯುಗೋಸ್ಲಾವಿಯಾ ಮೇಲೆ ಏನು?


ಯುಗೋಸ್ಲಾವಿಯದಲ್ಲಿ (ಕೊಸೊವೊ ಸೇರಿ) 15 ಸಾವಿರದಷ್ಟು ಜನ ಸತ್ತಿದ್ದಾರೆ ಇಲ್ಲವೆ ಗಾಯಗೊಂಡಿದ್ದಾರೆ. ದೇಶದಲ್ಲಿ ಆಸ್ತಿಪಾಸ್ತಿಗೆ ಅಪಾರ ಹಾನಿಯಾಗಿದೆ. ಆಸ್ತಿಪಾಸ್ತಿಗೆ ಹಾನಿ 30 ಶತಕೋಟಿ ಡಾಲರುಗಳು ಎಂದು ಅಂದಾಜು ಮಾಡಲಾಗಿದೆ. ಇದು ಯುಗೋಸ್ಲಾವಿಯದ ವಾರ್ಷಿಕ ಉತ್ಪನ್ನದ ಒಂದುವರೆ ಪಟ್ಟು ಎಂದರೆ ಈ ಹಾನಿಯ ಗಾತ್ರ ಊಹಿಸಬಹುದು. 1989 ರಲ್ಲಿ ಸಮಾಜವಾದಿ ಯುಗೋಸ್ಲಾವಿಯದ ಜೀವನ ಮಟ್ಟ, ಆರ್ಥಿಕ ಬಲ ಮರಳಿ ಗಳಿಸಬೇಕಾದರೆ ಕನಿಷ್ಠ ನಲ್ವತ್ತು ವರ್ಷ ಆದೀತು ಎಂದು ಆರ್ಥಿಕ ತಜ್ಞರು ಅಂದಾಜು ಹಾಕಿದ್ದಾರೆ. 5 ಲಕ್ಷ ಜನ ನಿರುದ್ಯೋಗಿಗಳಾಗಿದ್ದಾರೆ. ನಿರುದ್ಯೋಗ ಈಗ ಶೇಕಡಾ 50 ಇದೆ. ದೇಶದ ಒಟ್ಟು ಆರ್ಥಿಕ ಉತ್ಪನ್ನ ಶೇಕಡಾ 40 ರಷ್ಟು ಕುಸಿದಿದೆ. ದೇಶದ ಹೆಚ್ಚಿನ ಕೈಗಾರಿಕಾ ಸ್ಥಾವರಗಳು ನಿರ್ನಾಮವಾಗಿವೆ. ಎರಡು ತೈಲ ಶುದ್ಧೀಕರಣ ಕೇಂದ್ರಗಳು, ಪೆಟ್ರೋಕೆಮಿಕಲ್, ಔಷಧಿ, ಗೊಬ್ಬರ, ವಾಹನ ತಯಾರಿಕಾ ಕಾರ್ಖಾನೆಗಳ ಹೆಚ್ಚು ಕಡಿಮೆ ಪೂರ್ಣವಾಗಿ ನಿರ್ನಾಮವಾಗಿವೆ. ದೇಶದ ಮೇಲೆ ಬಳಸಿದ ಯುರೇನಿಯಂ ಬಾಂಬುಗಳಿಂದ ತೀವ್ರ ಪರಿಸರ ಹಾನಿ ಆಗುವುದು ಖಂಡಿತ. ವಿಕಿರಣದಿಂದ ತೀವ್ರ ಆರೋಗ್ಯ ಸಮಸ್ಯೆ ತಲೆದೋರಬಹುದು. ದೇಶದ ನದಿಗಳು, ಆಹಾರ ಸರಪಣಿ, ಕೃಷಿ ಸಹ ಅಪಾಯದ ಅಂಚಿನಲ್ಲಿವೆ. ನಲ್ವತ್ತು ಪ್ರಮುಖ ಸೇತುವೆಗಳು ನಿರ್ನಾಮವಾಗಿವೆ.-

ಕೊಸೊವೊ ಜನಾಂಗೀಯ ಸಮಸ್ಯೆ ಬಗೆಹರಿಯಿತೆ?

ಇಲ್ಲ - ಇನ್ನೂ ಉಲ್ಬಣಗೊಂಡಿದೆ. ನಾಟೋದ ಕುಮ್ಮಕ್ಕಿನಿಂದ ಆಂತರಿಕ ಯುದ್ಧದ ಪರಿಸ್ಥಿತಿ ನಿರ್ಮಾಣ ಮಾಡಿದ್ದ ಕೆ.ಎಲ್.ಎ. ಯನ್ನು ಯುಗೋಸ್ಲಾವಿಯಾದ ಪಡೆಗಳು ಅಡಗಿಸಿದ್ದವು. ಈಗ ನಾಟೋ ಬೆಂಬಲದಿಂದ ಕೆ.ಎಲ್.ಎ. ಭಯೋತ್ಪಾದಕರು ಕೊಸೊವೊಗೆ ವಾಪಸಾಗಿದ್ದಾರೆ. ಅವರು ಕೊಸೊವೊದ ಸರ್ಬಿಯನ್ ಅಲ್ಪಸಂಖ್ಯಾತರ ಮೇಲೆ ಅತ್ಯಾಚಾರ ಆಗಲೇ ಆರಂಭಿಸಿದ್ದಾರೆ. ನಾಟೋದ ಕುಮ್ಮಕ್ಕಿನಿಂದ ಬೆಳೆದಿರುವ ಇವರನ್ನು ನಿಶ್ಶಸ್ತ್ರೀಕರಿಸುವುದು ಅಸಾಧ್ಯದಮಾತು. ನಾಟೋಗೆ ಅದರಲ್ಲಿ ಭಾರಿ ಆಸಕ್ತಿಯೂ ಇಲ್ಲ. ಅದು ಮಾತ್ರವಲ್ಲ ನೆರೆಯ ಮಸೆಡೊನಿಯ, ಮೊಂಟೆನಿಗ್ರೋ, ಅಲ್ಬೇನಿಯಗಳಲ್ಲಿ ಜನಾಂಗೀಯ ಸಮಸ್ಯೆ ಹರಡಿದೆ, ಉಲ್ಬಣಗೊಂಡಿದೆ. ಕೊಸೊವೊ ಸ್ವತಂತ್ರವಾಗುವುದು ಹೋಗಲಿ ಪ್ರಜಾಸತ್ತಾತ್ಮಕ ಜವಾಬ್ದಾರಿ ಸರ್ಕಾರ ಸಹ ಇರುವುದಿಲ್ಲ. ನಾಟೋ ಪಡೆಗಳ ಮಿಲಿಟರಿ ಆಡಳಿತದಲ್ಲಿ ಅದು ನರಳಬೇಕು.

ನಿರಾಶ್ರಿತರ ಸಮಸ್ಯೆ ಬಗೆ ಹರಿಯಿತೆ?

ಇಲ್ಲ, ಎಲ್ಲೆಲ್ಲೂ ಈಗ ನಿರಾಶ್ರಿತರು. 8 ಲಕ್ಷ ಕೊಸೊವೊರು ಈಗ ನೆರೆಯ ದೇಶಗಳಲ್ಲಿ ನಿರಾಶ್ರಿತರು. ಕೊಸೊವೊದಲ್ಲಿ 'ಕೆ.ಎಲ್.ಎ. ಈಗಾಗಲೇ ಶಾಂತಿ ನೆಲೆಸಲು ಬಿಡುವ ಲಕ್ಷಣ ತೋರಿಸುತ್ತಿಲ್ಲ. ಅಲ್ಲದೆ ಒಪ್ಪಂದದ ಪ್ರಕಾರ ನಾಟೋದ 50 ಸಾವಿರ ಪಡೆಗಳು ಪ್ರಾಂತ್ಯದ ತುಂಬಾ ನೆಲೆ ಹೂಡಿ ಪರಿಸ್ಥಿತಿ ನಿಯಂತ್ರಣಕ್ಕೆ ಬಂದು, ನಿರಾಶ್ರಿತರು ವಾಪಸಾಗಲು ಹಲವು ವರ್ಷಗಳು ಆಗಬಹುದು. ಯುದ್ಧದ ಮೊದಲು ಐವತ್ತು ಸಾವಿರ ನಿರಾಶ್ರಿತರಿದ್ದರು. ಈಗ 8 ಲಕ್ಷ ಇದ್ದಾರೆ. ಅವರು ನಿರಾಶ್ರಿತರಾದದ್ದು ನಾಟೋ ಬಾಂಬ್ ದಾಳಿಗಳಿಂದಲೇ. ನಾಟೋ ಬಾಂಬ್ ದಾಳಿಗಳಲ್ಲಿ ಕೊಸೊವೊನ ಅರ್ಧದಷ್ಟು ಮನೆಗಳು ನಿರ್ನಾಮವಾಗಿವೆ. ಶೇಕಡಾ 20 ರಷ್ಟು ಆಗ ಬೀಳುತ್ತೋ ಈಗ ಬೀಳುತ್ತೋ ಎಂಬ ಸ್ಥಿತಿಯಲ್ಲಿವೆ. ನಿರಾಶ್ರಿತರು ಎಲ್ಲಿಗೆ ಮರಳುತ್ತಾರೆ ಎಂಬ ಪ್ರಶ್ನೆ ಎದ್ದಿದೆ. ಇದಲ್ಲದೆ ಕೊಸೊವೊದಲ್ಲಿರುವ ಎರಡು ಲಕ್ಷ ಅಲ್ಪಸಂಖ್ಯಾತ ಸರ್ಬರು ಸರ್ಬ್ ಪ್ರಾಂತ್ಯಗಳಿಗೆ ನಿರಾಶ್ರಿತರಾಗಿ ಈಗಾಗಲೇ ಹೋಗಲಾರಂಭಿಸಿದ್ದಾರೆ. ಈಗಾಗಲೇ ಕ್ರೋಶಿಯಾ, ಬೋಸ್ನಿಯಾ, ಮಸೆಡಾನಿಯಾದಿಂದ ಬಂದ 6 ಲಕ್ಷ ಸರ್ಬರು ನಿರಾಶ್ರಿತರು ಇದ್ದಾರೆ. ಯುಗೋಸ್ಲಾವಿಯರ ಅಧ್ಯಕ್ಷ ಪದಚ್ಯುತ ಆಗುವವರೆಗೆ ಅದರ ಪುನರ್ನಿರ್ಮಾಣಕ್ಕೆ ಸಹಾಯ ಮಾಡುವುದಿಲ್ಲ ಎಂದು ನಾಟೋ ದೇಶಗಳು ಹೇಳಿವೆ. ಯುಗೋಸ್ಲಾವಿಯದ ಪುನರ್ನಿರ್ಮಾಣ ಆಗದಿದ್ದರೆ ಅಲ್ಲಿನ ಜನ ನೆರೆ ದೇಶಗಳಿಗೆ ನಿರಾಶ್ರಿತರಾಗಿ ಹೋಗದೆ ಇನ್ನೇನು ಮಾಡುತ್ತಾರೆ. ಆಗ ನಿರಾಶ್ರಿತರ ಸಂಖ್ಯೆ 20 ಲಕ್ಷ ಮುಟ್ಟಬಹುದು.



ಅಸಂಖ್ಯ ಕ್ಯಾಂಪುಗಳಲ್ಲಿ ಒಂದು ಲಕ್ಷ ನಿರಾಶ್ರಿತರು

ಕೊಸೊವೊ ಯುದ್ಧ ನಿಲುಗಡೆ ಒಪ್ಪಂದದ ಮುಖ್ಯ ಅಂಶಗಳು

- ಯುಗೋಸ್ಲಾವಿಯರ ಸೈನ್ಯಗಳು ಕೊಸೊವೊದಿಂದ ನಿಗದಿತ ಸಮಯದೊಳಗೆ ತೆರವು ಮಾಡಬೇಕು.
- ನಾಟೋದ 50 ಸಾವಿರ ಪಡೆಗಳು ಕೊಸೊವೊವನ್ನು ಆಳುತ್ತವೆ. ಐದು ದೇಶಗಳ ಪಡೆಗಳ ಐದು ಭಾಗಗಳನ್ನು ಆಳುತ್ತವೆ.
- ಕೊಸೊವೊ ಬಿಟ್ಟು ಓಡಿ ಹೋಗಿರುವ 8 ಲಕ್ಷ ನಿರಾಶ್ರಿತರು ವಾಪಸು ಬರುವ ಪರಿಸ್ಥಿತಿ ನಿರ್ಮಾಣ.
- ಕೊಸೊವೊಗೆ 'ಸಾಕಷ್ಟು ಸ್ವಾಯತ್ತತೆ'ಗೆ ಯೋಜನೆ.
- ನಾಟೋ ಪಡೆಗಳ ಆಳ್ವಿಕೆ ಬಗ್ಗೆ ವಿಶ್ವಸಂಸ್ಥೆ ಭದ್ರತಾ ಸಮಿತಿ ನಿರ್ಣಯ.
- 'ಶಾಂತಿಪಾಲನಾ' ಪಡೆಗಳಲ್ಲಿ ರಶ್ಯನ್ ಪಾತ್ರದ ಬಗ್ಗೆ ಮುಂದೆ ನಿರ್ಧಾರ.
- ಕೊಸೊವೊ ವಿಮೋಚನಾ ರಂಗ (ಕೆ.ಎಲ್.ಎ)ವನ್ನು ನಿಶ್ಶಸ್ತ್ರೀಕರಿಸಬೇಕು.

ಅಮೇರಿಕನ್ ಶಸ್ತ್ರಾಸ್ತ್ರ ನಿರ್ಮಾಣ ಕಂಪನಿಗಳಿಗೆ ಸುಗ್ಗಿ

ಯುದ್ಧ ಆರಂಭವಾಗುತ್ತಿದ್ದಂತೆ ಮಿಲಿಟರಿ ಶಸ್ತ್ರಾಸ್ತ್ರ ತಯಾರಿಕ ಹತ್ತು ಕಂಪನಿಗಳ ಶೇರು ಬೆಲೆ ಗಗನಕ್ಕೇರಿದವಂತೆ. ಯುಗೋಸ್ಲಾವಿಯಾ ಯುದ್ಧ ಈ ಕಂಪನಿಗಳಿಗೆ ಸುಗ್ಗಿ ತಂದಿದೆ. ಭಾರೀ ಕಡಿತಕ್ಕೊಳಗಾಗಿದ್ದ ಶಸ್ತ್ರಾಸ್ತ್ರ ಖರೀದಿಗೆ ತೇಜಿ ಬಂದಿದೆ. ಮುಂದಿನ ಐದು ವರ್ಷಗಳ ಮಿಲಿಟರಿ ಬಜೆಟನ್ನು ಶೇಕಡಾ 50 ರಷ್ಟು ಹೆಚ್ಚಿಸಲಾಗಿದೆ. ಈ ಯುದ್ಧಕ್ಕೆ ಅಮೆರಿಕದ ರಕ್ಷಣಾ ಇಲಾಖೆಯಿಂದ 50 ದೊಡ್ಡ ಕಂಪನಿಗಳ ಪಡೆದ ಕಾಂಟ್ರಾಕ್ಟ್‌ನ ಮೊತ್ತ 60 ಶತಕೋಟಿ ಡಾಲರುಗಳಷ್ಟು - ಇದು ಯುಗೋಸ್ಲಾವೀಯ ಒಟ್ಟು ರಾಷ್ಟ್ರೀಯ ಉತ್ಪನ್ನದ ಮೂರು ಪಟ್ಟು. ಇದಲ್ಲದೆ ಯುದ್ಧದ ನಂತರದ ಪುನಃ ನಿರ್ಮಾಣ ಯೋಜನೆಗಳಲ್ಲಿ ಅಮೆರಿಕದ ಕಂಪನಿಗಳಿಗೆ ಸಿಂಹಪಾಲು ಸಿಗಲಿದೆ. ಪುನರ್ನಿರ್ಮಾಣ ಖರ್ಚು ಸುಮಾರು 30 ಶತಕೋಟಿ ಡಾಲರುಗಳಷ್ಟಾಗಬಹುದು ಎಂದು ಅಂದಾಜು ಮಾಡಲಾಗಿದೆ.

ನಾಟೋ ಯುದ್ಧದ ವೆಚ್ಚ ಏನು?

ನಾಟೋ ಈ ಯುದ್ಧಕ್ಕೆ ಪ್ರತಿದಿನ 50 ಕೋಟಿ ಡಾಲರುಗಳಷ್ಟು ವೆಚ್ಚ ಮಾಡಿದೆ ಎಂದು ಅಂದಾಜು ಮಾಡಲಾಗಿದೆ. 1100 ವಿಮಾನಗಳು 33 ಸಾವಿರ ಬಾಂಬ್ ದಾಳಿ ನಡೆಸಿದವು. ಒಟ್ಟು ಯುದ್ಧದ ಖರ್ಚು 40 ಶತಕೋಟಿ ಡಾಲರುಗಳು ಎಂದು ಅಂದಾಜು. ಇದನ್ನು ತೆರುವವರು ಈ ನಾಟೋ ದೇಶದ ಜನರು ಎಂದು ಬೇರೆ ಹೇಳಬೇಕಾಗಿಲ್ಲ. ಅವರ ಸಾಮಾಜಿಕ ಕಲ್ಯಾಣದ ಕಡಿತದಿಂದ ಬಂದ ಹಣ ಇದು.

ಮಾಜಿ ಚಾಂಪಿಯನ್‌ಗಳ ಹಣಾಹಣಿ

"ಕ್ರಿಕೆಟ್ ಜಗತ್ತಿನ ಕಾಶಿ" ಎಂದೆ ಖ್ಯಾತವಾಗಿರುವ ಇಂಗ್ಲೆಂಡಿನ ಲಾರ್ಡ್ಸ್ ಕ್ರಿಕೆಟ್ ಮೈದಾನದಲ್ಲಿ 1987ರ ಚಾಂಪಿಯನ್ ಆಸ್ಟ್ರೇಲಿಯ ಮತ್ತು 1992 ಚಾಂಪಿಯನ್ ಪಾಕಿಸ್ತಾನ ತಂಡಗಳ ನಡುವೆ ಶತಮಾನದ ಕೊನೆಯ 'ಪಟ್ಟ' ಕ್ಕಾಗಿ ಹಣಾಹಣಿ ಏರ್ಪಟ್ಟಿದೆ.

1999ರ ವಿಶ್ವ ಚಾಂಪಿಯನ್ ಕನಸೋತ್ತು ಕಳೆದ ಅನೇಕ ವರ್ಷಗಳಿಂದ ಆಕ್ರಮಣಕಾರಿ ಪ್ರದರ್ಶನ ಹಾಗೂ ಲೆಕ್ಕಚಾರಗಳ ಜೊತೆ ಯುದ್ಧೋಪಾದಿಯ ತಯಾರಿ ನಡೆಸಿದ್ದ ದಕ್ಷಿಣಾ ಆಫ್ರಿಕಾ ಆಸ್ಟ್ರೇಲಿಯಾ ವಿರುದ್ಧದ ಸೆಮಿಫೈನಲ್ ಪಂದ್ಯ 'ಸಮ'ಗೊಂಡು ಅವರ ಹಲವು ವರ್ಷಗಳ ಕನಸು ಭಗ್ನಗೊಂಡು, ಅವರ ಲೆಕ್ಕಚಾರಗಳನ್ನು ತಲೆಕೆಳಗೆ ಮಾಡಿದ ಸೂಪರ್ ಸಿಕ್ಸ್‌ನ ರನ್ ಸರಾಸರಿ ಆಸ್ಟ್ರೇಲಿಯಾವನ್ನು ಫೈನಲ್‌ಗೇರಿಸಿತು.

ವಿಶ್ವದ ಇತಿಹಾಸದಲ್ಲೇ ಅತ್ಯಂತ ರೋಚಕ ಹಾಗೂ ಐತಿಹಾಸಿಕವಾದ ಆಸ್ಟ್ರೇಲಿಯಾ - ದಕ್ಷಿಣಾ ಆಫ್ರಿಕಾ ನಡುವಿನ ಈ ಪಂದ್ಯ ಜಗತ್ತಿನ ಕ್ರಿಕೆಟ್ ಪ್ರೇಮಿಗಳ ಹೃದಯ ಬಡಿತವನ್ನು ಕ್ಷಣಕಾಲ ತಡೆಹಿಡಿದ ಹಾಗೂ 'ಸಮ'ಗೊಂಡ ಪಂದ್ಯವಾಗಿತ್ತು. ಜಗತ್ತಿನ ಬಹುತೇಕ ಕ್ರಿಕೆಟ್ ಪಂಡಿತರ 'ಗೆಲ್ಲುವ ಕುದುರೆ'ಯೆಂದು ಖಾತ್ರಿಯಾಗಿದ್ದ ಆಫ್ರಿಕಾ ತಂಡ ಆಸ್ಟ್ರೇಲಿಯಾದ ಶೇನ್ ವಾರ್ನ್‌ಯೆಂಬ ಜಂಭದ ಕುದುರೆ ಎದುರು 213 ಸ್ಕೋರಿಗೆ ಸ್ಥಗಿತಗೊಂಡು 'ಪಟ್ಟ'ದ ಆಸೆ ಬಿಟ್ಟುಕೊಟ್ಟಿತು.

ಇನ್ನೊಂದು ಸೆಮಿಫೈನಲ್ ಪಂದ್ಯದಲ್ಲಿ ಸೂಪರ್ ಸಿಕ್ಸ್ ಹಂತದಲ್ಲಿ ಭಾರತಕ್ಕೆ ಸೋತು ಟೀಕೆಗಳ ಸುರಿಮಳೆಗೆ ಸೊರಗಿದ್ದ ಪಾಕಿಸ್ತಾನ ಅದಕ್ಕೆ ಪ್ರತಿಕಾರವೆಂಬಂತೆ ಜಿಂಬಾಂಬ್ವೆ ತಂಡವನ್ನು 9 ವಿಕೆಟ್‌ಗಳ ಅಂತರದಲ್ಲಿ ಸದೆಬಡಿದು ವಿರೋಚಿತವಾಗಿ ಫೈನಲ್ ಪ್ರವೇಶಿಸಿದ ಇನ್ನೊಂದು ತಂಡ


ಜೂನ್ 20 ರಂದು ನಡೆಯುವ ಹಣಾಹಣಿಯಲ್ಲಿ ಭಾವೋದ್ವೇಗದ ಪಾಕಿಸ್ತಾನ ತಂಡ



ಸೆಮಿಫೈನಲ್‌ನಲ್ಲಿ ದ.ಆಫ್ರಿಕನ್ನು ಸೋಲಿಸಿದ ಆಸ್ಟ್ರೇಲಿಯನ್ನರು ವಿಜಯೋತ್ಸವದಲ್ಲಿರುವುದು.

ಹಾಗೂ ತಂತ್ರಗಾರಿಕೆಯ ತಂಡ ಆಸ್ಟ್ರೇಲಿಯಾ ನಡುವಿನ ಪಂದ್ಯದಲ್ಲಿ ಆಸ್ಟ್ರೇಲಿಯ ತಂಡ ಮೇಲುಗೈ ಪಡೆಯ ಬಹುದಾದರೂ, ಚಾಂಪಿಯನ್ ಪಟ್ಟ ಯಾರಿಗೆ ಒಲಿಯಬಹುದೆಂಬುದನ್ನು ನಿರ್ಧರಿಸಲು ಸಾಧ್ಯವಿಲ್ಲ. ಈ ಪಂದ್ಯ ಶತಮಾನದ ಕೊನೆಯ ಕ್ರಿಕೆಟ್ ಹೋರಾಟವಾಗಲಿದೆ.

ನೂರಕ್ಕೆ ಕಾಲಿಟ್ಟರೂ 'ದೇವರ ಭಯ' ಇಲ್ಲ!



ಅಕ್ಕಿಹೆಬ್ಬಾಳು ನರಸಿಂಹರಾವ್ ಮೂರ್ತಿರಾವ್ ಅವರು ನೂರನೇ ವರುಷಕ್ಕೆ ಕಾಲಿಡುತ್ತಿದ್ದಾರೆ. ಮೂರ್ತಿರಾಯರದು ಕನ್ನಡ ಸಾಹಿತ್ಯಕ್ಕೆ ಬಲು ದೊಡ್ಡ ಕೊಡುಗೆ. ಲಲಿತ ಪ್ರಬಂಧ, ಪ್ರವಾಸಸಾಹಿತ್ಯ, ನಾಟಕ, ವಿಮರ್ಶೆ, ಅನುವಾದ ಸಾಹಿತ್ಯ, ವಿಚಾರ ಸಾಹಿತ್ಯಗಳಲ್ಲಿ ಉತ್ತಮ ಬರಹಗಳನ್ನು ಬರೆದವರು. ಚಿತ್ರಗಳು-ಪತ್ರಗಳು, ಅಪರ ವಯಸ್ಕನ ಅಮೇರಿಕಾ ಯಾತ್ರೆ, ಆಷಾಡಾಭೂತಿ, ನೂರಕ್ಕೂ ಹೆಚ್ಚು ಲಲಿತ ಪ್ರಬಂಧಗಳು ಅವರ ಕೃತಿಗಳು, 'ಸಂಜೆಗಣ್ಣಿನ ಹಿನ್ನೋಟ' ಅವರ ವಿಶಿಷ್ಟ ಆತ್ಮಚರಿತ್ರೆ. "ದೇವರು" ಕೃತಿ, ದೇವರ ಬಗೆಗಿನ ತಾರ್ತಿಕ ಜಿಜ್ಞಾಸೆ, ಈ ಕೃತಿಯಲ್ಲಿ ಮೂಡಿ ಬಂದಿದೆ. ಸಾಮಾನ್ಯವಾಗಿ ನಿವೃತ್ತಿಯ ನಂತರದ ಎಲ್ಲರೂ ವಿಶ್ರಾಂತ ಜೀವನ ಬಯಸಿದರೆ ಮೂರ್ತಿರಾಯರು ನಿವೃತ್ತಿಯ ನಂತರವೇ ಹೆಚ್ಚು ಕ್ರೀಯಶೀಲರಾಗಿ ಬರವಣಿಗೆಯಲ್ಲಿ ತೊಡಗಿಸಿಕೊಂಡರು. ಅವರ ಬಹುಪಾಲು ಕೃತಿಗಳು ಅವರು ಅಧ್ಯಾಪಕ ವೃತ್ತಿಯಿಂದ ನಿವೃತ್ತರಾದ ನಂತರವೇ ಬರೆದಿದ್ದು, ಅವರು 'ದೇವರು' ಕೃತಿ ಬರೆದಾಗ ಅವರ ವಯಸ್ಸು 90! ತಮ್ಮ ತಾರುಣ್ಯದಲ್ಲಿ ಬೆಳೆಸಿಕೊಂಡ ಮೂಲ ಸಿದ್ಧಾಂತ ಚಿಂತನೆಗಳಿಂದ ಮೂರ್ತಿರಾಯರು ಒಂದಿಂಚೂ ಪಕ್ಕೆ ಸರಿದಿಲ್ಲ. ಅದೇ ದೃಢ ಮನಸ್ಸು, ನಿರೀಶ್ವರವಾದ, ಮಾನವೀಯ ಕಾಳಜಿ, ಅವರ "ದೇವರು" ಪುಸ್ತಕದಿಂದ ಆಯ್ದು ಕೆಲವು ಭಾಗಗಳನ್ನು ನಿಮ್ಮ ಮುಂದಿಡುತ್ತಿದ್ದೇವೆ.

"ಸರ್ವಶಕ್ತನೂ ಸರ್ವರಕ್ಷಕನೂ ಆದ ದೇವರು ತನ್ನನ್ನು ತಾನು ರಕ್ಷಿಸಿಕೊಳಲಾರನೆ! ಅವನಿಗೆ ನರಪೇತಲಮಾನವನ ನೆರವು ಬೇಕೆ! ಈ ಯೋಚನೆಗೆ ನಮಗೆ ಹೊಳೆಯುವುದೇ ಇಲ್ಲ. ಧರ್ಮಾಂಧರೂ ರಾಜಕೀಯ ಮುಖಂಡರೂ ತಮ್ಮ ಸ್ವಾರ್ಥ ಸಾಧನೆಗಾಗಿ 'ನಿಮ್ಮ ದೇವರ ರಕ್ಷಣೆಗಾಗಿ ಕತ್ತಿ ಹಿರಿಯಿರಿ, ನಿಮ್ಮ ಮತದ ರಕ್ಷಣೆಗಾಗಿ ಮುನ್ನುಗ್ಗಿರಿ' ಎಂದು ಹುರಿದುಂಬಿಸುತ್ತಾರೆ. ನಾವು ಅವರ ಪುಂಗಿಯ ಲಯಕ್ಕೆ ಕುಣಿಯುತ್ತೇವೆ; ಸರಿ- ಕಾದಾಟ, ರಕ್ತಪಾತ, ಎಲ್ಲ ದೇವರ ಹೆಸರಲ್ಲಿ"

★★★

ಇತರರ ನಂಬಿಕೆಗಳು ತರ್ಕಬದ್ಧವಲ್ಲ ಎಂದು ತೋರಿಸಬಹುದಾದಾಗ ತೋರಿಸೋಣ; ತೋರಿಸುವುದು ಒಳ್ಳೆಯದೇ. ಹಾಗೆ ತೋರಿಸುವುದು ಅಸಾಧ್ಯವಾದಾಗ 'ನಿಮ್ಮ ನಂಬಿಕೆ ನಿಮಗಿರಲಿ. ಅದರಿಂದ ಸಮಾಜದ ಮೇಲೆ ಕೆಟ್ಟ ಪರಿಣಾಮವಾಗದಂತೆ ಮಾತ್ರ ನೋಡಿಕೊಳ್ಳಿ' ಎಂದು ಅವರಿಗೆ ವಿಚಾರಸ್ವಾತಂತ್ರ್ಯ ಕೊಡೋಣ.

ಈ ಮಾತು ದೇವರನ್ನು ಕುರಿತ ನಂಬಿಕೆಗಳಿಗೆ ಮಾತ್ರವಲ್ಲ, ಮತಧರ್ಮವನ್ನು ಕುರಿತ ನಂಬಿಕೆಗಳಿಗೂ ಅನ್ವಯಿಸುತ್ತದೆ. ಒಟ್ಟಿನಲ್ಲಿ ದೇವರ ಕಲ್ಪನೆಯಿಂದ ಮಾತ್ರವಲ್ಲ, ಮತಧರ್ಮದ ಶ್ರದ್ಧೆಯಿಂದಲೂ ಸಮಾಜಕ್ಕೆ ಕೆಡಕಾಗಬಹುದು; ಆಗಿಯೂ ಇದೆ. ರೋಮನ್ ಕ್ಯಾಥಲಿಕ್ಕರು, ಪ್ರಾಟೆಸ್ಟೆಂಟರು ಇಬ್ಬರೂ ನಂಬುವುದು ಒಂದೇ ದೇವರನ್ನು. ಆದರೂ ಅವರವರಲ್ಲಿ -ಧರ್ಮಕ್ಕೆ ಸಂಬಂಧಪಟ್ಟ ಭಿನ್ನಾಭಿಪ್ರಾಯಗಳಿಂದಾಗಿ-ಜಗಳ ಹತ್ತಿ ಬೆಂದು ಪ್ರಾಣ ಹಾನಿಯಾಗಿದೆ. ನಮ್ಮ ಶ್ರೀವೈಷ್ಣವರಲ್ಲಿ ತೆಂಗಲೆ ವಡಗಲೆ ಎಂಬ ಎರಡು ಪಂಗಡಗಳಿವೆಯಷ್ಟೆ: ಎರಡು ಪಂಗಡಗಳವರೂ ವಿಷ್ಣುವೇ ಪರದೈವ ಎಂದು ನಂಬುತ್ತಾರೆ. ಆದರೆ ಅವರು ಹಾಕುವ ನಾಮ y ಆಕಾರದ್ದಾಗಬೇಕೆ ಅಥವಾ V ಆಕಾರದ್ದಾಗಿರಬೇಕೆ ಎಂಬ 'ಆಚಾರ'ದ ವಿಷಯದಲ್ಲಿ ಶತಮಾನಗಳ ಕಾಲ ಕಚ್ಚಾಟ ನಡೆದಿದೆ.

ಇಂಥ ಕಚ್ಚಾಟ ತಾತ್ವಿಕ ವಿಷಯಗಳಲ್ಲೂ ನಡೆಯುತ್ತದೆ. ಹುಟ್ಟಿದಾಗ ಒಂದೇ ಆಗಿದ್ದ ಮತಗಳು ಕಾಲ ಕಳೆದಂತೆ ಒಡೆದು ಒಳಪಂಗಡಗಳು ಹುಟ್ಟಿಕೊಂಡಿವೆ ಎಂಬುದನ್ನು ಈ ಸಂದರ್ಭದಲ್ಲಿ ನೆನೆಯಬಹುದು. ಅವರವರ ನಂಬಿಕೆಗಳು ಅವರವರಿಗಿರಲಿ-ಅವರ ಮನಸ್ಸಿನಲ್ಲಿರಲಿ. ಅವರ ಮನೆಯಲ್ಲಿ ಅವರು ಯಾವ ದೇವರನ್ನಾದರೂ ಪೂಜಿಸಿಕೊಳ್ಳಲಿ-ಆ ಪೂಜೆಯಿಂದ ಇತರರಿಗೆ ತೊಂದರೆಯಾಗದಿದ್ದರೆ. (ಸುತ್ತಿನ ನಾಲ್ಕು ಮನೆಯವರಿಗೆ ನಿದ್ರಾ ಭಂಗವಾಗುವಂತೆ ನಾವು ಅಖಂಡ ಭಜನೆ ಮಾಡಿದರೆ ಅದು ಅಪರಾಧವೇ ಆಗುತ್ತದೆ!) ಆದರೆ ಇತರ ಮಾನವರಿಗೆ ಸಂಬಂಧಪಟ್ಟ ಯಾವ ಕಾರ್ಯಕ್ರಮದಲ್ಲಾಗಲಿ ದೈವಶ್ರದ್ಧೆ ಮತಶ್ರದ್ಧೆಗಳು ತಮ್ಮ ಪ್ರಭಾವವನ್ನು ಬೀರಹೊರಟರೆ ಆಗ ಸಮಾಜ ಅವನ್ನು ನಿಯಂತ್ರಿಸಬೇಕಾಗುತ್ತದೆ.

★★★

ದೈವಶ್ರದ್ಧೆ ಮತಶ್ರದ್ಧೆಗಳು 'ಸಂಪೂರ್ಣವಾಗಿ ವೈಯಕ್ತಿಕವಾದರೆ, ಅದಕ್ಕೆ ಸಾಮಾಜಿಕ ಮುಖವೊಂದಿಲ್ಲದಿದ್ದರೆ, ಯಾರು ಯಾವ ದೇವರನ್ನು ಬೇಕಾದರೂ ನಂಬಲಿ, ಯಾವ ಮತಕ್ಕಾದರೂ ಸೇರಿರಲಿ ಆಕ್ಷೇಪಿಸಬೇಕಾದ್ದಿಲ್ಲ. ಅದಕ್ಕಾಗಿ ಅವರನ್ನು ಕಡೆಗಣಿಸಬೇಕಾದ್ದಿಲ್ಲ; ಹಳಿಯ ಬೇಕಾದ್ದಿಲ್ಲ. ಇಂಥ ಸಹನೆಯನ್ನು ಬೆಳಸಿಕೊಂಡು ಬಾಳುವುದು ಅಸಾಧ್ಯ ಎಂದು ಕೆಲವರು ಹೇಳುತ್ತಾರೆ. ಅದು ಸಾಧ್ಯ ಎಂದು ನಾನು ದೃಢವಾಗಿ ನಂಬಿದ್ದೇನೆ. ಈ ನಂಬಿಕೆಗೆ ನಮ್ಮ ಬದುಕೇ ಸಾಕ್ಷ್ಯವನ್ನು ಒದಗಿಸುತ್ತದೆ.

★★★

ಬದುಕು ಬೇಕು. ಬಡವರಿಗೆ, ಶ್ರೀಮಂತರಿಗೆ, ಚಿಕ್ಕವರಿಗೆ, ದೊಡ್ಡವರಿಗೆ, ಮೂಢರಿಗೆ, ಮೇಧಾವಿಗಳಿಗೆ, ಕೇಡಿಗರಿಗೆ ಸಾತ್ವಿಕರಿಗೆ-ಎಲ್ಲರಿಗೂ ಬದುಕು ಬೇಕು. ಆದರೆ ಆ ಬದುಕು ಈಗಿರುವಂತೆಯೇ ಇರಬೇಕೆ? ಮಾನವನಲ್ಲಿ ಬದುಕಿನ ಆಸೆ ಎಷ್ಟು ತೀವ್ರವಾಗಿದೆ ಎಂಬುದನ್ನು ಮನಗಾಣಬೇಕಾದರೆ ಅದರ ಸವಿಗಳನ್ನು ಮಾತ್ರ ಪಟ್ಟಿ ಮಾಡಿದರೆ ಸಾಲದು. ಕಷ್ಟ ಸಂಕಟಗಳ ಪಟ್ಟಿಯನ್ನೂ ಮಾಡಬೇಕು ಎಂದುಕೊಂಡೆವಷ್ಟೆ. ಆ ಪಟ್ಟಿ ದೊಡ್ಡದೇ ಆಗುತ್ತದೆ. ಅಷ್ಟೊಂದು ಸಂಕಟವಿದ್ದೂ ಬದುಕು ಸವಿ! ಆ ಸಂಕಟವನ್ನು ನಿವಾರಿಸಿದರೆ - ಆಗ ಅದರ ಸವಿಯನ್ನು ಬಣ್ಣಿಸುವುದೆಂತು! ಅದೇ ಅನಿರ್ವಚನೀಯವಾದ ಬ್ರಹ್ಮಾನಂದ.

ಬದುಕನ್ನು ಸರಿಪಡಿಸುವ ಕೆಲಸ-ದೇವರಿಲ್ಲ ಎಂದಮೇಲೆ - ನಮ್ಮ ಮೇಲೇ ಒರಗುತ್ತದೆ, ಸರಿಪಡಿಸುವುದು ಸಾಧ್ಯ. ಸರಿಪಡಿಸುವ ಪ್ರವೃತ್ತಿ ನಮ್ಮಲ್ಲಿ ಇದ್ದೇ ಇದೆ, ಕೆಟ್ಟದ್ದನ್ನು ಹೊರದೂಡಿ ಒಳ್ಳೆತನವನ್ನು ಪ್ರತಿಷ್ಠಿಸುವ ಕೆಲಸ (ನಿಧಾನವಾಗಿಯಾದರೂ) ನಡೆಯುತ್ತಲೇ ಇದೆ ಎಂಬುದನ್ನು ಕಂಡೆವಷ್ಟೆ. ಆ ಪ್ರವೃತ್ತಿಯನ್ನು ಬೆಳೆಸಿಕೊಂಡು ಬದುಕನ್ನು ಸುಖಮಯವಾಗಿಸಬೇಕು. ಇದೇ ಮತಧರ್ಮವಾಗಬೇಕು. ದೈವಶ್ರದ್ಧೆಗೆ ಬದಲಾಗಿ ಈ ಶ್ರದ್ಧೆ ನಮ್ಮಲ್ಲಿ ಸದಾ ಜೀವಂತವಾಗಿರಬೇಕು. ಬದುಕನ್ನು ಬಿಟ್ಟು ಓಡಿಹೋಗುವ ಬದಲು ಅದನ್ನು ಸರಿಪಡಿಸುವುದಕ್ಕಾಗಿ ಬದುಕಬೇಕು. 'ದೇವರ ಸನ್ನಿಧಿಯಲ್ಲಿದ್ದು ಅವನ ಕೈಂಕರ್ಯದಲ್ಲಿ ನಿರತರಾಗಿರುವುದು' ಎಂಬ ಮುಕ್ತಿಪ್ರಭೇದದ ಮಾತು ಬಂತಷ್ಟೆ. ನಾವು ಕಿಂಕರರಾಗೋಣ- ದೇವರ ಸೇವೆಗಾಗಿಯಲ್ಲ-ಲೋಕ ಸೇವೆಗಾಗಿ.

ಲೋಕಸೇವೆಯನ್ನು ಕುರಿತ ಶ್ರದ್ಧೆಯೇ ಮುಕ್ತಿ. ಆದರಿಂದಾಗಿ ನಾವು ನಮ್ಮೊಬ್ಬರ ಅಭ್ಯುದಯವನ್ನು, ನಮ್ಮೊಬ್ಬರ ಮೋಕ್ಷವನ್ನು ಒತ್ತಟ್ಟಿಗಿಡುತ್ತೇವೆ. (ಕೇವಲ ವೈಯಕ್ತಿಕ ಮೋಕ್ಷದ ಹಂಬಲು ಸ್ವಾರ್ಥವೇ ಹೌದು!) ಜೀವಕೋಟಿಯ ಅಭ್ಯುದಯಕ್ಕಾಗಿ ಸ್ವಾರ್ಥದಿಂದ ಬಿಡುಗಡೆ ಪಡೆಯುತ್ತೇವೆ.

ಈ ಶ್ರದ್ಧೆಯೂ ದೈವಶ್ರದ್ಧೆಯೂ ಒಟ್ಟಿಗೆ ಇರುವುದು ಅಸಾಧ್ಯವೆ? ಒಟ್ಟಿಗೆ ಇರುವುದನ್ನು ನಾವು ಕಂಡಿದ್ದೇವೆ- ಮದರ್ ತೇರೀಸಾರವರಲ್ಲಿ ಅವೆರಡೂ ಒಟ್ಟಿಗೆ ಇವೆ-ಅವರನ್ನು ಕೇಳಿದರೆ "ಅವೆರಡೂ ಒಂದೇ" ಎಂದು ಉತ್ತರಕೊಟ್ಟಾರು! ಆದರೆ ಅವರಂಥ ಜನ ಅಪರೂಪ.

Reg. No. 17015/64 KRNM/BGS-405 MAG(2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ